
ಸೋಮವಾರ, ಸೆಪ್ಟೆಂಬರ್ 8, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 249 | ಪುಟ 12

ನಾಳೆ ಪಂಜಾಬ್‌ಗೆ ಮೋದಿ

ಪ್ರವಾಹಪೀಡಿತ ಪಂಜಾಬ್‌ಗೆ ಸೆಪ್ಟೆಂಬರ್ 9ರಂದು ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿ, ಪರಿಸ್ಥಿತಿ ಪರಾಮರ್ಶಿಸಲಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸುನಿಲ್ ಜಾಖಡ್ ತಿಳಿಸಿದ್ದಾರೆ



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪದಕ ಸಾಧನೆ

ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಬೆಂಗಳೂರಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ 33ನೇ ಘಟಿಕೋತ್ಸವದಲ್ಲಿ 10 ಚಿನ್ನದ ಪದಕಗಳನ್ನು ಪಡೆದ ರಾಧಿಕಾ ಸಿಂಘಾಲ್ ಸಂಭ್ರಮಿಸಿದರು



ಸಂಘರ್ಷ, 8 ಮಂದಿಗೆ ಗಾಯ 4A | ಮಹಜರು ವೇಳೆ ಶವದ ಅವಶೇಷ ಪತ್ತೆ? 4

ರಾಜ್ಯದಲ್ಲಿ ನಕಲಿ ವೈದ್ಯರ ಜಾಲ

ಅರ್ಹತೆ ಹೊಂದಿರದ 250ಕ್ಕೂ ಅಧಿಕ ಮಂದಿ ಕಾರ್ಯಾಚರಣೆಯಲ್ಲಿ ಪತ್ತೆ

• ವರುಣ ಹೆಗಡೆ

ಬೆಂಗಳೂರು: ಅರ್ಹತೆ ಹಾಗೂ ಪರವಾನಗಿ ಇಲ್ಲದಿದ್ದರೂ ಚಿಕಿತ್ಸೆ ನೀಡುವ ನಕಲಿ ವೈದ್ಯರ ಜಾಲ ರಾಜ್ಯದಲ್ಲಿ ಸಕ್ರಿಯವಾಗಿದೆ. ಈ ಜಾಲದ ವಿರುದ್ಧ ಆರೋಗ್ಯ ಇಲಾಖೆಯು ಕಳೆದೊಂದು ವರ್ಷ ನಡೆಸಿದ ಕಾರ್ಯಾಚರಣೆಯಲ್ಲಿ 256 ನಕಲಿ ವೈದ್ಯರು ಪತ್ತೆಯಾಗಿದ್ದಾರೆ.

ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳು, ಕ್ಲಿನಿಕ್‌ಗಳು, ಪ್ರಯೋಗಾಲಯಗಳು ಹಾಗೂ ನಕಲಿ ವೈದ್ಯರ ಪತ್ತೆ ಕಾರ್ಯವನ್ನು ಇಲಾಖೆ ಚುರುಕುಗೊಳಿಸಿದೆ. ರಾಜ್ಯದ ವಿವಿಧೆಡೆ ಕಾನೂನುಬಾಹಿರವಾಗಿ ವೈದ್ಯ ವೃತ್ತಿ ಕೈಗೊಂಡವರನ್ನು ಗುರುತಿಸಿ, ದಂಡ ವಿಧಿಸುವ ಜತೆಗೆ ಶಿಕ್ಷಿಸಲಾಗುತ್ತಿದೆ. ಇಷ್ಟಾಗಿಯೂ ರಾಜ್ಯದಾದ್ಯಂತ ನಕಲಿ ವೈದ್ಯರು ಕಾನೂನು ಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವುದು ಅಧಿಕಾರಿಗಳು ನಡೆಸಿದ ದಾಳಿಯ ವೇಳೆ ದೃಢಪಟ್ಟಿದೆ. ಅಲೋಪಥಿ, ಹೋಮಿಯೋಪಥಿ, ಆಯುರ್ವೇದ, ನ್ಯಾಚುರೋಪಥಿ, ಯುನಾನಿ ಹಾಗೂ ಸಿದ್ಧ ವೈದ್ಯರು ಸೇರಿದ್ದಾರೆ.

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ ಕಾಯ್ದೆಯಡಿ (ಕೆಪಿಎಂಇ) ಆರೋಗ್ಯಾಧಿಕಾರಿಗಳ ತಂಡವು ವಿವಿಧ ಆಸ್ಪತ್ರೆಗಳು, ಕ್ಲಿನಿಕ್‌ಗಳು ಹಾಗೂ ಪ್ರಯೋಗಾಲಯಗಳಿಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸುತ್ತಿದೆ. ಈ ಪರಿಶೀಲನೆ ವೇಳೆ ವೈದ್ಯಕೀಯ ವೃತ್ತಿ ನಡೆಸಲು ಅಗತ್ಯ ವಿದ್ಯಾರ್ಹತೆ ಇಲ್ಲದಿದ್ದರೂ ಪರವಾನಗಿ ಹೊಂದಿರದಿದ್ದರೂ ಕ್ಲಿನಿಕ್‌ಗಳು ನಡೆಸುತ್ತಿರುವುದು ಅಧಿಕಾರಿಗಳ ತಂಡದ ಗಮನಕ್ಕೆ ಬಂದಿದೆ. ಅಂತಹವರನ್ನು ನಕಲಿ ವೈದ್ಯರ ಪಟ್ಟಿಗೆ ಸೇರಿಸಲಾಗಿದೆ. 2024–25ನೇ ಸಾಲಿನಲ್ಲಿ ಪತ್ತೆಯಾದ ನಕಲಿ ವೈದ್ಯರಿಗೆ ಸಂಬಂಧಿಸಿದಂತೆ, 89 ಕ್ಲಿನಿಕ್‌ಗಳನ್ನು ಮುಚ್ಚಿಸಲಾಗಿದೆ.

154 ವೈದ್ಯರಿಗೆ ದಂಡ: ಅಧಿಕಾರಿಗಳು ನಡೆಸಿದ ಈ ಕಾರ್ಯಾಚರಣೆ ವೇಳೆ ವೈದ್ಯಕೀಯ ಪ್ರಮಾಣಪತ್ರ ಹೊಂದಿರದಿರುವುದು, ಅಕ್ರಮವಾಗಿ ಕ್ಲಿನಿಕ್ ನಡೆಸುತ್ತಿರುವುದು, ನಕಲಿ ಪ್ರಮಾಣ ಪತ್ರ ಹೊಂದಿರುವುದು ದೃಢಪಟ್ಟಿದೆ. ನಾಲ್ಕು ಪ್ರಕರಣಗಳಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ನಕಲಿ ವೈದ್ಯರಿಗೆ ಕಡಿವಾಣ ಹಾಕುವ ಸಂಬಂಧ ಇಲಾಖೆಯು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಪೊಲೀಸ್ ಅಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳು, ಆಯುಷ್ ಅಧಿಕಾರಿಗಳು, ಸಾಮಾಜಿಕ ಕಾರ್ಯಕರ್ತರು ಮತ್ತು ವಕೀಲರು ಒಳಗೊಂಡ ವಿಶೇಷ ತಂಡವನ್ನು ರಚಿಸಿದೆ. ಈ ತಂಡವು ಕಾರ್ಯಾಚರಣೆ ನಡೆಸಿ, ಪ್ರತಿ ತಿಂಗಳು ಸರ್ಕಾರಕ್ಕೆ ವರದಿ ಸಲ್ಲಿಸುತ್ತಿದೆ.

ಉತ್ತರ, ಕಲ್ಯಾಣ ಕರ್ನಾಟಕದಲ್ಲಿ ಅಧಿಕ

ನಕಲಿ ವೈದ್ಯರ ಪತ್ತೆಗೆ ಸಂಬಂಧಿಸಿದಂತೆ ನಡೆಸಿದ ಕಾರ್ಯಾಚರಣೆಯಲ್ಲಿ ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ನಕಲಿ ವೈದ್ಯರು ಪತ್ತೆಯಾಗಿದ್ದಾರೆ. ಕಲಬುರಗಿಯಲ್ಲಿ ಒಂದೇ ವರ್ಷ ನೂರಕ್ಕೂ ಅಧಿಕ ನಕಲಿ ವೈದ್ಯರ ಮೇಲೆ ಕ್ರಮಕೈಗೊಳ್ಳಲಾಗಿದೆ. ಚಾಮರಾಜನಗರ, ಬಳ್ಳಾರಿ, ಹಾವೇರಿಯಲ್ಲಿಯೂ ಪತ್ತೆಯಾದ ನಕಲಿ ವೈದ್ಯರ ಸಂಖ್ಯೆ ಎರಡಂಕಿ ದಾಟಿದೆ.

₹5 ಲಕ್ಷ ದಂಡ, ಜೈಲು ಶಿಕ್ಷೆ

ಆರೋಗ್ಯ ಇಲಾಖೆ ಪ್ರಕಾರ, ವೈದ್ಯಕೀಯ ಮಂಡಳಿಗಳಲ್ಲಿ (ಅಲೋಪಥಿ, ಆಯುರ್ವೇದ, ಹೋಮಿಯೋಪಥಿ) ನೋಂದಾಯಿತರಾದವರು ಮಾತ್ರ ವೈದ್ಯಕೀಯ ವೃತ್ತಿ ನಡೆಸಲು ಅವಕಾಶವಿದೆ. ನೋಂದಾಯಿಸದೆ ಕಾನೂನುಬಾಹಿರವಾಗಿ ಕಾರ್ಯನಿರ್ವಹಿಸಿದಲ್ಲಿ ಗರಿಷ್ಠ ₹5 ಲಕ್ಷ ದಂಡ ಹಾಗೂ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ. ಕೆಪಿಎಂಇ ಕಾಯ್ದೆಯಡಿ ನೋಂದಾಯಿಸದೆ ವೈದ್ಯಕೀಯ ಸಂಸ್ಥೆಯನ್ನು ನಡೆಸಿದರೆ, ಗರಿಷ್ಠ ₹50 ಸಾವಿರ ದಂಡದ ಜತೆಗೆ ತಕ್ಷಣವೇ ಸಂಸ್ಥೆಯನ್ನು ಮುಚ್ಚಿಸಲಾಗುತ್ತದೆ.

ಅಧಿಕ ನಕಲಿ ವೈದ್ಯರು ಪತ್ತೆಯಾದ ಜಿಲ್ಲೆಗಳು

ಜಿಲ್ಲೆ	ಸಂಖ್ಯೆ
ಕಲಬುರಗಿ	111
ಕೋಲಾರ	31
ಚಾಮರಾಜನಗರ	22
ಬಳ್ಳಾರಿ	15
ಹಾವೇರಿ	13

"ನಕಲಿ ವೈದ್ಯರ ಹಾವಳಿಗೆ ಕಡಿವಾಣ ಹಾಕಲು ಕಠಿಣ ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾಮಟ್ಟದಲ್ಲಿಯೂ ಸಮಿತಿ ರಚಿಸಿ, ಕಾರ್ಯಾಚರಣೆ ನಡೆಸಲಾಗುತ್ತಿದೆ"
ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

"ನಕಲಿ ವೈದ್ಯರು ರೋಗಿಗಳ ಜೀವದ ಜತೆಗೆ ಆಟವಾಡುವ ಜತೆಗೆ ವೈದ್ಯರಿಗೂ ಕೆಟ್ಟ ಹೆಸರು ತರುತ್ತಾರೆ"
ಡಾ.ಶ್ರೀನಿವಾಸ್ ಎಸ್., ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ಶಾಖೆಯ ನಿಕಟಪೂರ್ವ ಅಧ್ಯಕ್ಷ



ದಿಲ್‌ಪ್ರೀತ್ ಸಿಂಗ್

ಭಾರತಕ್ಕೆ ಏಷ್ಯಾ ಕಪ್ ಗರಿ ವಿಶ್ವಕಪ್ ಟೂರ್ನಿಗೆ ರಹದಾರಿ

ರಾಜಗೀರ್, ಬಿಹಾರ (ಪಿಟಿಐ): ಭಾರತ ಪುರುಷರ ಹಾಕಿ ತಂಡವು ಭಾನುವಾರ ಇಲ್ಲಿ ನಡೆದ ಏಷ್ಯಾ ಕಪ್ ಟೂರ್ನಿಯ ಫೈನಲ್‌ನಲ್ಲಿ ದಕ್ಷಿಣ ಕೊರಿಯಾ ಎದುರು ಜಯಿಸಿತು. ಇದರೊಂದಿಗೆ ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಟೂರ್ನಿಗೆ ರಹದಾರಿ ಗಿಟ್ಟಿಸಿತು.

ಫೈನಲ್ ಸ್ಕೋರ್

ಭಾರತ	04
ದಕ್ಷಿಣ ಕೊರಿಯಾ	01

ಗೋಲು ಗಳಿಸಿದವರು

ಭಾರತ
- ಸುಖಜೀತ್ ಸಿಂಗ್ (1ನೇ ನಿಮಿಷ)
- ದಿಲ್‌ಪ್ರೀತ್ ಸಿಂಗ್ (28ನಿಮಿಷ, 45 ನಿಮಿಷ)
- ಅಮಿತ್ ರೋಹಿದಾಸ್ (50ನೇ ನಿಮಿಷ)

ದಕ್ಷಿಣ ಕೊರಿಯಾ
- ಡಯಾನ್ ಸನ್ (51ನೇ ನಿಮಿಷ)

ಕ್ರೀಡಾ ಪುಟ 8

ಜೊಮಾಟೊ, ಸ್ವಿಗ್ಗಿ ಪ್ಲಾಟ್‌ಫಾರ್ಮ್ ಶುಲ್ಕ ಏರಿಕೆ



ನವದೆಹಲಿ (ಪಿಟಿಐ): ಊಟ, ತಿಂಡಿಯನ್ನು ಹೋಟೆಲ್‌ಗಳಿಂದ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಜೊಮಾಟೊ, ಸ್ವಿಗ್ಗಿ ಮತ್ತು ಮ್ಯಾಜಿಕ್‌ಪಿನ್ ಪ್ರತಿ ಆರ್ಡರ್ ಮೇಲೆ ವಿಧಿಸುವ ಶುಲ್ಕವನ್ನು (ಪ್ಲಾಟ್‌ಫಾರ್ಮ್ ಫೀ) ಏರಿಕೆ ಮಾಡಿವೆ. ಹಬ್ಬಗಳ ಋತು ಆರಂಭವಾಗಿರುವ ಈ ಹೊತ್ತಿನಲ್ಲಿ ಕಂಪನಿಗಳು ದರ ಹೆಚ್ಚಳ ಮಾಡಿವೆ.

ಅಲ್ಲದೆ, ಈ ಕಂಪನಿಗಳು ಊಟ, ತಿಂಡಿಯನ್ನು ಮನೆಬಾಗಿಲಿಗೆ ತಲುಪಿಸುವ ಸೇವೆಗೆ ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಶೇಕಡ 18ರಷ್ಟು ತೆರಿಗೆ ಸೆಪ್ಟೆಂಬರ್ 22ರಿಂದ ಜಾರಿ ಬರಲಿರುವ ಕಾರಣಕ್ಕೆ, ಅದರ ಹೊರೆಯೂ ಗ್ರಾಹಕರಿಗೆ ವರ್ಗಾವಣೆ ಆಗುವ ನಿರೀಕ್ಷೆ ಇದೆ.

ಸ್ವಿಗ್ಗಿ ಕಂಪನಿಯು ತನ್ನ ಪ್ಲಾಟ್‌ಫಾರ್ಮ್ ಶುಲ್ಕವನ್ನು ಆಯ್ದ ನಗರಗಳಲ್ಲಿ ಪ್ರತಿ ಆರ್ಡರ್‌ಗೆ ₹15ಕ್ಕೆ ಹೆಚ್ಚಿಸಿದೆ. ಇದರಲ್ಲಿ ಜಿಎಸ್‌ಟಿ ಸೇರಿದೆ. ಜೊಮಾಟೊ ಜಿಎಸ್‌ಟಿ ಹೊರತುಪಡಿಸಿ ₹12.50ಕ್ಕೆ ಹೆಚ್ಚಿಸಿದೆ. ಮ್ಯಾಜಿಕ್‌ಪಿನ್ ₹10ಕ್ಕೆ ಏರಿಕೆ ಮಾಡಿದೆ.

ಒಂದು ಅಂದಾಜಿನ ಪ್ರಕಾರ, ಶೇ 18ರಷ್ಟು ಜಿಎಸ್‌ಟಿ ಪರಿಣಾಮವಾಗಿ ಜೊಮಾಟೊ ಮತ್ತು ಸ್ವಿಗ್ಗಿ ಗ್ರಾಹಕರು ಕ್ರಮವಾಗಿ ₹2 ಮತ್ತು ₹2.60 ಹೆಚ್ಚುವರಿ ಶುಲ್ಕವನ್ನು ಪ್ರತಿ ಆರ್ಡರ್‌ಗೆ ನೀಡಬೇಕಾಗುತ್ತದೆ. ದರ ಹೆಚ್ಚಳದ ಬಗ್ಗೆ ಸ್ವಿಗ್ಗಿ ಮತ್ತು ಜೊಮಾಟೊ ಪ್ರತಿಕ್ರಿಯೆ ನೀಡಿಲ್ಲ.

‘ಆಹಾರ ವಸ್ತುಗಳನ್ನು ಗ್ರಾಹಕರಿಗೆ ತಲುಪಿಸುವ ಸೇವೆಗೆ ನಾವು ಈಗಾಗಲೇ ಶೇ 18ರಷ್ಟು ಜಿಎಸ್‌ಟಿ ಪಾವತಿಸುತ್ತಿದ್ದೇವೆ. ಈಗಿನ ಜಿಎಸ್‌ಟಿ ಪರಿಷ್ಕರಣೆ ನಮ್ಮ ಮೇಲೆ ಪರಿಣಾಮ ಬೀರದು. ಗ್ರಾಹಕರ ಮೇಲೂ ಜಿಎಸ್‌ಟಿ ಪರಿಷ್ಕರಣೆಯು ಪರಿಣಾಮ ಬೀರದು. ನಮ್ಮ ಪ್ಲಾಟ್‌ಫಾರ್ಮ್ ಶುಲ್ಕವು ₹10 ಇದೆ. ಇದು ಇತರೆ ಪ್ರಮುಖ ಕಂಪನಿಗಳ ಶುಲ್ಕಕ್ಕಿಂತ ಕಡಿಮೆ’ ಎಂದು ಮ್ಯಾಜಿಕ್‌ಪಿನ್ ಕಂಪನಿಯ ವಕ್ತಾರರು ತಿಳಿಸಿದ್ದಾರೆ.

ಹುಂಡೈ, ಟಾಟಾ ವಾಹನ ದರ ಇಳಿಕೆ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿ ಹುಂಡೈ ಮೋಟರ್ ಇಂಡಿಯಾ ಮತ್ತು ಟಾಟಾ ಮೋಟರ್ಸ್ ಜಿಎಸ್‌ಟಿ ದರ ಕಡಿತದ ಪರಿಣಾಮವಾಗಿ ತಮ್ಮ ವಾಹನಗಳ ಬೆಲೆ ಎಷ್ಟರಮಟ್ಟಿಗೆ ಇಳಿಕೆ ಆಗುತ್ತದೆ ಎನ್ನುವುದನ್ನು ಪ್ರಕಟಿಸಿವೆ.

ಜಿಎಸ್‌ಟಿ ಪರಿಷ್ಕರಣೆಯ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಲು ಕಂಪನಿಗಳು ಮುಂದಾಗಿವೆ. ಪರಿಷ್ಕೃತ ದರವು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ ಎಂದು ಎರಡೂ ಕಂಪನಿಗಳು ಭಾನುವಾರ ತಿಳಿಸಿವೆ.

ಹುಂಡೈ ತನ್ನ ವರ್ನಾ ಮಾದರಿಯ ವಾಹನದ ಬೆಲೆ ₹60,640ರಷ್ಟು ಮತ್ತು ಪ್ರೀಮಿಯಂ ಎಸ್‌ಯುವಿ ಟಕ್ಸನ್ ದರ ₹2.4 ಲಕ್ಷದಷ್ಟು ತಗ್ಗಲಿದೆ ಎಂದು ಹೇಳಿದೆ.

ಟಾಟಾ ಮೋಟರ್ಸ್ ಕಂಪನಿಯು ತನ್ನ ವಾಣಿಜ್ಯ ವಾಹನಗಳ ಬೆಲೆಯು ₹30 ಸಾವಿರದಿಂದ ₹4.65 ಲಕ್ಷದವರೆಗೆ ಕಡಿಮೆ ಆಗಲಿದೆ ಎಂದು ತಿಳಿಸಿದೆ. ದರ ಇಳಿಕೆ ವಾಹನದ ಮಾದರಿಯನ್ನು ಅವಲಂಬಿಸಿರುತ್ತದೆ. ಕಂಪನಿಯು ತನ್ನ ಪ್ರಯಾಣಿಕ ವಾಹನಗಳ ಬೆಲೆ ಇಳಿಕೆಯ ಬಗ್ಗೆ ಈಗಾಗಲೇ ಮಾಹಿತಿ ನೀಡಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಖಾಲಿ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ • ‘ಕೈ’ ಸಂಖ್ಯಾ ಬಲ 37ಕ್ಕೆ ಏರಿಕೆ

ಮೇಲ್ಮನೆಯಲ್ಲಿ ಕಾಂಗ್ರೆಸ್ ಮೇಲುಗೈ


ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಖಾಲಿ ಇದ್ದ ನಾಲ್ಕು ಸ್ಥಾನ ಭರ್ತಿಯಾಗುತ್ತಿದ್ದಂತೆ, ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಸಂಖ್ಯಾ ಬಲ 37ಕ್ಕೆ ಏರಿಕೆ ಆಗಿದೆ. ತನ್ಮೂಲಕ, ಮೇಲ್ಮನೆಯಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆದರೂ ವಿಧಾನ ಪರಿಷತ್‌ನಲ್ಲಿ ಬಹುಮತ ಇರಲಿಲ್ಲ. ಪರಿಷತ್‌ನಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಇದ್ದುದರಿಂದ ಸಭಾಪತಿ, ಉಪ ಸಭಾಪತಿ ಸ್ಥಾನಗಳು ಬಿಜೆಪಿ ಹಿಡಿತದಲ್ಲೇ ಇದ್ದವು. ಸಂಖ್ಯಾಬಲ ಇಲ್ಲದ ಕಾರಣಕ್ಕೆ, ರಾಜ್ಯ ಸರ್ಕಾರ ಮಂಡಿಸಿದ್ದ ಕೆಲವು ಮಸೂದೆಗಳು ಮತ ವಿಭಜನೆಯ ವೇಳೆ ಸೋಲು ಕಂಡಿದ್ದವು. ವಿರೋಧ ಪಕ್ಷಗಳ ಒತ್ತಡಕ್ಕೆ ಮಣಿದು, ಅನೇಕ ಮಸೂದೆಗಳನ್ನು ಸದನ ಸಮಿತಿಗೆ ಒಪ್ಪಿಸಲೇಬೇಕಾದ ಅನಿವಾರ್ಯಕ್ಕೂ ಸರ್ಕಾರ ಸಿಲುಕಿತ್ತು. ತಾವು ಆಕ್ಷೇಪ ವ್ಯಕ್ತಪಡಿಸಿದ್ದ ಮಸೂದೆಗಳು ಅಂಗೀಕಾರಗೊಳ್ಳದಂತೆ ಮಾಡುವಲ್ಲಿ ವಿರೋಧ ಪಕ್ಷಗಳು ಸಫಲವಾಗಿದ್ದುಂಟು. ನಾಲ್ಕು ಸ್ಥಾನಗಳ ನಾಮ ನಿರ್ದೇಶನಕ್ಕೆ ರಾಜ್ಯಪಾಲರು ಅಂಗೀಕಾರ ಹಾಕಿದ್ದರಿಂದಾಗಿ, ಪರಿಷತ್ತಿನಲ್ಲಿ ಈಗ ಕಾಂಗ್ರೆಸ್ ಏಕೈಕ ಬಲಿಷ್ಠ ಪಕ್ಷವಾಗಿ ಹೊರಹೊಮ್ಮಿದೆ.

4A

ನಾಲ್ವರ ನಾಮನಿರ್ದೇಶನದ ನಂತರ ಪರಿಷತ್ ಬಲಾಬಲ



ವೀರೇಂದ್ರ ಲಾಕರ್‌ನಲ್ಲಿ 24.5 ಕೆ.ಜಿ ಚಿನ್ನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ (ಪಪ್ಪಿ) ಅವರಿಗೆ ಸೇರಿದ ಬ್ಯಾಂಕ್ ಲಾಕರ್‌ಗಳಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು 24.50 ಕೆ.ಜಿಯಷ್ಟು ಚಿನ್ನದ ಗಟ್ಟಿಗಳನ್ನು ಪತ್ತೆ ಮಾಡಿದ್ದಾರೆ.

ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ಪ್ರಕರಣದ ವಿಚಾರಣೆ ವೇಳೆ ವೀರೇಂದ್ರ ಅವರು ನೀಡಿದ್ದ ಮಾಹಿತಿ ಆಧಾರದಲ್ಲಿ ಚಿತ್ರದುರ್ಗ ಮತ್ತು ಚಳ್ಳಕೆರೆ ವಿವಿಧ ಬ್ಯಾಂಕ್‌ಗಳಲ್ಲಿ ಶನಿವಾರ ಶೋಧ ಕಾರ್ಯ ಆರಂಭಿಸಲಾಗಿತ್ತು. ಭಾನುವಾರ ಬೆಳಿಗ್ಗೆಯವರೆಗೂ ಶೋಧ ನಡೆದಿದ್ದು, ಒಂದು ಲಾಕರ್‌ನಲ್ಲಿ 24.50 ಕೆ.ಜಿ.ಯಷ್ಟು ಚಿನ್ನದ ಗಟ್ಟಿ ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ. ಜತೆಗೆ 17 ವಜ್ರದ ಉಂಗುರಗಳು, ಇತರ ಒಡವೆಗಳು ಪತ್ತೆಯಾಗಿವೆ. ವೀರೇಂದ್ರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಇನ್ನಷ್ಟು ಲಾಕರ್‌ಗಳು ಇದ್ದು, ಅವುಗಳ ಪರಿಶೀಲನೆ ನಡೆಯುತ್ತಿದೆ. ಈಗಾಗಲೇ ತೆರೆಯಲಾಗಿರುವ ಲಾಕರ್‌ಗಳಲ್ಲಿ, ಕಂತೆಗಟ್ಟಲೆ ಆಸ್ತಿ–ದಾಖಲೆ ಪತ್ರಗಳು ಪತ್ತೆಯಾಗಿವೆ. ಅವುಗಳ ಪರಿಶೀಲನೆ ನಡೆಯುತ್ತಿದೆ ಎಂದು ತಿಳಿಸಿವೆ.

ಬೇನಾಮಿ ಕಾರುಗಳು: ವೀರೇಂದ್ರ ಮನೆ ಮತ್ತು ಲಾಕರ್‌ಗಳಲ್ಲಿ ಒಟ್ಟು 9 ಐಷಾರಾಮಿ ಕಾರುಗಳ ನೋಂದಣಿ ಕಾರ್ಡ್ ಪತ್ತೆಯಾಗಿತ್ತು. ಅವುಗಳ ಆಧಾರದಲ್ಲಿ ಆ ಕಾರುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.



ಜನಸಾಗರ

ಪಿಟಿಐ ಚಿತ್ರ

ಉತ್ತರ ಪ್ರದೇಶದ ಯುಪಿಎಸ್‌ಎಸ್‌ಸಿ ನಡೆಸಿದ ಪಿಇಟಿ ಪರೀಕ್ಷೆಗೆ ಹಾಜರಾದ ನೂರಾರು ಅಭ್ಯರ್ಥಿಗಳು ಪ್ರಯಾಗರಾಜ್ ಜಂಕ್ಷನ್ ರೈಲು ನಿಲ್ದಾಣದಲ್ಲಿ ಭಾನುವಾರ ರೈಲು ಏರಲು ಮುಂದಾದಾಗ ನೂಕುನುಗ್ಗಲು ಉಂಟಾಯಿತು

ಸನ್ ರೂಫ್ ತೆರೆದು ನಿಂತಿದ್ದ ಬಾಲಕನ ತಲೆಗೆ ಬಡಿದ ಕಬ್ಬಿಣದ ಕಮಾನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲಿಸುತ್ತಿದ್ದ ಕಾರಿನ ಸನ್ ರೂಫ್ ತೆರೆದು ನಿಂತಿದ್ದ ಬಾಲಕನ ತಲೆಗೆ ಹೈಟ್ ರಿಸ್ಟ್ರಿಕ್ಷನ್ ಬ್ಯಾರಿಯರ್ (ಕಬ್ಬಿಣದ ಕಮಾನು) ಬಡಿದು ಗಂಭೀರವಾಗಿ ಗಾಯಗೊಂಡಿರುವ ಘಟನೆ ವಿದ್ಯಾರಣ್ಯಪುರ–ಜಿಕೆವಿಕೆ ರಸ್ತೆಯಲ್ಲಿ ನಡೆದಿದೆ.

ಘಟನೆಯಲ್ಲಿ ಬಾಲಕನ ತಲೆಗೆ ಗಂಭೀರ ಗಾಯವಾಗಿದ್ದು, ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಗೊತ್ತಾಗಿದೆ.

ಸೆಪ್ಟೆಂಬರ್ 6ರಂದು ಮಧ್ಯಾಹ್ನ 1.10ರ ಸುಮಾರಿಗೆ ಜಿಕೆವಿಕೆ ರಸ್ತೆಯಲ್ಲಿ ಕೆಂಪು ಬಣ್ಣದ ಕಾರೊಂದರಲ್ಲಿ ಬಾಲಕನೊಬ್ಬ ಸನ್ ರೂಫ್ ತೆರೆದು ತಲೆ ಹೊರಗೆ ಹಾಕಿ ನಿಂತಿದ್ದಾನೆ. ಕಾರು ಚಲಿಸುವಾಗ ಕಬ್ಬಿಣದ ಕಮಾನು ಬಾಲಕನ ತಲೆಗೆ ಬಡಿದ ಪರಿಣಾಮ, ಕಾರಿನೊಳಗೆ ಕುಸಿದು ಬಿದ್ದಿದ್ದಾನೆ. ಈ ಘಟನೆಯ ದೃಶ್ಯ ಮತ್ತೊಂದು ಕಾರಿನ ಡ್ಯಾಶ್ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ‘ವಿಡಿಯೊ ಪರಿಶೀಲನೆ ನಡೆಸಿದ್ದು, ಘಟನೆಯ ಕುರಿತು ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಉತ್ತರ ವಿಭಾಗದ ಸಂಚಾರ ಪೊಲೀಸರು ತಿಳಿಸಿದ್ದಾರೆ.



ಈ ಘಟನೆ ಬಗ್ಗೆ ಆತಂಕ ವ್ಯಕ್ತಪಡಿಸಿರುವ ನೆಟ್ಟಿಗರು, ಕಾರುಗಳಲ್ಲಿ ಸನ್ ರೂಫ್ ತೆರೆದು ಮಕ್ಕಳನ್ನು ನಿಲ್ಲಿಸುವ ಮುನ್ನ ಎಚ್ಚರ ವಹಿಸಬೇಕು. ಇಲ್ಲವಾದರೆ ಮಕ್ಕಳು ಅಪಾಯದಲ್ಲಿ ಸಿಲುಕಿ ಅವರ ಪ್ರಾಣಕ್ಕೆ ಸಂಚಕಾರ ಉಂಟಾಗಬಹುದು ಎಂದು ಸಲಹೆ ನೀಡಿದ್ದಾರೆ. ಸನ್ ರೂಫ್ ತೆರದು ನಿಂತು ಹುಚ್ಚಾಟದಲ್ಲಿ ತೊಡಗಿದ್ದ ಕೆಲವರಿಗೆ ನಗರ ಸಂಚಾರ ಪೊಲೀಸರು ದಂಡ ವಿಧಿಸುವುದರ ಜತೆಗೆ ಅಪಾಯದ ಬಗ್ಗೆ ಜಾಗೃತಿ ಮೂಡಿಸಿದ್ದಾರೆ.

‘ಅತ್ಯಾಚಾರ: ಸಂತ್ರಸ್ತೆ ಸಾಕ್ಷ್ಯ ಸಾಕು’



ನವದೆಹಲಿ (ಪಿಟಿಐ): 2017ರಲ್ಲಿ 10 ವರ್ಷದ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಆರೋಪದ ಪ್ರಕರಣದಲ್ಲಿ ವ್ಯಕ್ತಿಯೊಬ್ಬರ ಮೇಲೆ ವಿಧಿಸಿದ್ದ 12 ವರ್ಷ ಜೈಲು-ಶಿಕ್ಷೆಯನ್ನು ದೆಹಲಿ ಹೈಕೋರ್ಟ್ ಎತ್ತಿಹಿಡಿದಿದೆ. ಸಂತ್ರಸ್ತೆಯ ಸಾಕ್ಷ್ಯವು ವಿಶ್ವಾಸಾರ್ಹವಾಗಿದ್ದರೆ, ಅಪರಾಧಿಗೆ ಶಿಕ್ಷೆ ನೀಡಲು ಈ ಹೇಳಿಕೆಯನ್ನಷ್ಟೇ ನ್ಯಾಯಾಲಯವು ಅವಲಂಬಿಸಬಹುದು ಎಂದು ಕೋರ್ಟ್ ಹೇಳಿದೆ.

ಅತ್ಯಾಚಾರ ಪ್ರಕರಣದ ಅಪರಾಧಿ ಟೋನಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ ನ್ಯಾಯಮೂರ್ತಿ ಮನೋಜ್ ಕುಮಾರ್ ಒಹ್ರಿ ಈ ಆದೇಶ ನೀಡಿದ್ದಾರೆ.

‘ಒಂದೊಮ್ಮೆ ಸಂತ್ರಸ್ತೆಯು ಘಟನೆಯ ಏಕೈಕ ಸಾಕ್ಷಿಯಾಗಿದ್ದು, ಆಕೆಯ ಹೇಳಿಕೆಯು ವಿಶ್ವಾಸಾರ್ಹವಾಗಿದ್ದರೆ ಶಿಕ್ಷೆಯನ್ನು ಅದು ಖಾತರಿಪಡಿಸುತ್ತದೆ ಎಂದೇ ಕಾನೂನು ಹೇಳುತ್ತದೆ’ ಎಂದು ನ್ಯಾಯಮೂರ್ತಿಯವರು ತಿಳಿಸಿದ್ದಾರೆ. ‘ಸಂತ್ರಸ್ತೆಯ ನಿಲುವು ಸ್ಥಿರವೂ ವಿಶ್ವಾಸಾರ್ಹವೂ ಆಗಿದ್ದು, ಆರೋಪಿಯು ಪಾಟೀ ಸವಾಲಿನಲ್ಲಿ ಆಕೆಯ ಸಾಕ್ಷ್ಯವನ್ನು ತಳ್ಳಿಹಾಕಲು ಸಾಧ್ಯವಾಗಿಲ್ಲ’ ಎಂದು ನ್ಯಾಯಮೂರ್ತಿ ತಮ್ಮ ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗದಿಂದ ಅಭಿವೃದ್ಧಿ

ಸಕ್ಕರೆ– ಮೈದಾ ರಹಿತ ಬಿಸ್ಕತ್ತು, ಕುಕೀಸ್, ರಸ್ಕ್

• ಖಲೀಲಅಹ್ಮದ ಶೇಖ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗವು ಬಿಳಿ ರಾಗಿ ಹಾಗೂ ಸ್ಟೀವಿಯಾ ಬಳಸಿ ಸಕ್ಕರೆ ಹಾಗೂ ಮೈದಾ ಇಲ್ಲದೆಯೇ ಬೇಕರಿ ಉತ್ಪನ್ನಗಳಾದ ಬಿಸ್ಕತ್ತು, ಕುಕೀಸ್ ಮತ್ತು ರಸ್ಕ್ ತಯಾರಿಸಿದೆ.

ಆಧುನಿಕ ಜೀವನ ಶೈಲಿಯಲ್ಲಿ ಆರೋಗ್ಯಕರ ಆಹಾರಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಹೀಗಾಗಿ, ಮೈದಾ ಮತ್ತು ಸಕ್ಕರೆ ಇಲ್ಲದ ಹೊಸ ಮಾದರಿಯ ಬೇಕರಿ ಉತ್ಪನ್ನಗಳನ್ನು ತಯಾರಿಸಲಾಗಿದೆ. ಸಿಹಿ ಹಾಗೂ ಉಪ್ಪಿನ ಬಿಸ್ಕತ್ತು, ಕುಕೀಸ್ ಮತ್ತು ರಸ್ಕ್‌ನಲ್ಲಿ ಜಿಕೆವಿಕೆ ಸ್ಟೀವಿಯಾ–1 (ಸಕ್ಕರೆಗೆ ಪರ್ಯಾಯವಾಗಿ ನೈಸರ್ಗಿಕ ಸಿಹಿ ಪದಾರ್ಥ) ಮತ್ತು ಬಿಳಿ ರಾಗಿ–ಕೆಎಂಆರ್–340 ತಳಿಯ ಹಿಟ್ಟನ್ನು ಬಳಸಿಕೊಳ್ಳಲಾಗಿದೆ.



ರಾಗಿ ರಸ್ಕ್ | ರಾಗಿ ಕುಕೀಸ್ | ಹಸಿರು ರಾಗಿ ಬಿಸ್ಕತ್ತು

ಸ್ಟೀವಿಯಾ ಗಿಡದ ಎಲೆಗಳಿಂದ ದೊರೆಯುವ ಸಿಹಿ ಪದಾರ್ಥವು ಶೂನ್ಯ ಕ್ಯಾಲೊರಿಯದ್ದಾಗಿದೆ. ಇದು ರಕ್ತದಲ್ಲಿರುವ ಗ್ಲೂಕೋಸ್ ಮಟ್ಟದಲ್ಲಿ ವ್ಯತ್ಯಾಸ ಮಾಡುವುದಿಲ್ಲ. ಬಿಳಿ ರಾಗಿಯಲ್ಲಿ ಹೆಚ್ಚು ಕ್ಯಾಲ್ಸಿಯಂ, ಕಬ್ಬಿಣದ ಅಂಶ, ನಾರು (ಡಯಟರಿ ಫೈಬರ್) ಸೇರಿದಂತೆ ಪೌಷ್ಟಿಕಾಂಶಗಳು ಇವೆ. ಮೈದಾ ಹಿಟ್ಟಿಗೆ ಪರ್ಯಾಯವಾಗಿ ಇದನ್ನು ಬಳಸಿಕೊಳ್ಳಬಹುದು.

‘ಸ್ಟೀವಿಯಾ ಮಿಶ್ರಿತ ಬೇಕರಿ ಉತ್ಪನ್ನಗಳನ್ನು ಎರಡು ವಿಧಗಳಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಸ್ಟೀವಿಯಾ ಹಸಿರು ಎಲೆ ಪುಡಿ, ಸಂಸ್ಕರಿಸಿದ ಬಿಳಿ ಸ್ಟೀವಿಯಾದ ಪುಡಿಯಲ್ಲಿ ಬಿಳಿ ರಾಗಿ ಹಿಟ್ಟನ್ನು ಮಿಶ್ರಣ ಮಾಡಿ ಹಸಿರು, ಬಿಳಿ ಬಿಸ್ಕತ್ತು, ಕುಕೀಸ್ ಮತ್ತು ರಸ್ಕ್ ತಯಾರಿಸಲಾಗಿದೆ. ಇದರಲ್ಲಿ ಕಡಿಮೆ ಪ್ರಮಾಣದ ಗ್ಲೈಸೆಮಿಕ್ ಇದ್ದು, ಚಯಾಪಚಯ ಕ್ರಿಯೆಗೆ ಸಹಕಾರಿ ಆಗಿದೆ. ಮಾರುಕಟ್ಟೆಯಲ್ಲಿರುವ ಬೇರೆ ಬಿಸ್ಕತ್ತುಗಳಿಗೆ ಹೋಲಿಸಿದರೆ ಈ ಉತ್ಪನ್ನಗಳಲ್ಲಿ ಅಧಿಕ ಪ್ರೊಟೀನ್, ಕ್ಯಾಲ್ಸಿಯಂ ಇದೆ’ ಎಂದು ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗದ ಪ್ರಾಧ್ಯಾಪಕಿ ಸವಿತಾ ಮಂಗಾನವರ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಗ್ರಾಹಕರಿಗೆ ರುಚಿಕರ ಹಾಗೂ ಗುಣಮಟ್ಟದ ಬೇಕರಿ ಉತ್ಪನ್ನಗಳನ್ನು ನೀಡುವ ಉದ್ದೇಶದಿಂದ ವಿಶ್ವವಿದ್ಯಾಲಯದ ವಿಜ್ಞಾನಿಗಳು ಸಂಶೋಧನೆಗಳನ್ನು ಮಾಡುತ್ತಿದ್ದಾರೆ. ಮೈದಾ ಹಾಗೂ ಸಕ್ಕರೆ ಬಳಸದೇ ಬಿಸ್ಕತ್ತು, ಕುಕೀಸ್‌ಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಈ ತಂತ್ರಜ್ಞಾನವನ್ನು ಖರೀದಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದ್ದು, ಅವರಿಗೆ ಮೂರು ದಿನಗಳ ತರಬೇತಿಯನ್ನೂ ನೀಡಲಾಗುತ್ತದೆ. ಈ ತಂತ್ರಜ್ಞಾನ ಖರೀದಿಗೆ ದರ ನಿಗದಿ ಪಡಿಸಬೇಕಿದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ವಿವರಿಸಿದರು.

‘ಆರೋಗ್ಯಕರ ಪದಾರ್ಥಗಳಿಗೆ ಬೇಡಿಕೆ’



ಎಸ್.ವಿ.ಸುರೇಶ

‘ಮೈದಾ, ಸಕ್ಕರೆ ಹಾಗೂ ಕೊಬ್ಬು ರಹಿತ ಆರೋಗ್ಯಕರ ಬೇಕರಿ ಪದಾರ್ಥಗಳಿಗೆ ಹೆಚ್ಚು ಬೇಡಿಕೆ ಇದೆ. ಜನರಲ್ಲಿ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ಬರುತ್ತಿದೆ. ಆದರೆ ಸಾರ್ವಜನಿಕರು ರುಚಿಯ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ. ಈಗ ಆರೋಗ್ಯ ಮತ್ತು ರುಚಿಯ ನಡುವೆ ಹೋರಾಟ ನಡೆಯುತ್ತಿದೆ. ಆದ್ದರಿಂದ ವಿಶ್ವವಿದ್ಯಾಲಯವು ರುಚಿ ಮತ್ತು ಆರೋಗ್ಯ ದೃಷ್ಟಿಯಿಂದ ಮೈದಾ, ಸಕ್ಕರೆ ಹಾಗೂ ಕೊಬ್ಬು ರಹಿತ ಬೇಕರಿ ಉತ್ಪನ್ನಗಳನ್ನು ತಯಾರಿಸುತ್ತಿದೆ’ ಎಂದು ಎಸ್.ವಿ. ಸುರೇಶ ‘ಪ್ರಜಾವಾಣಿ’ಗೆ ತಿಳಿಸಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಆಗುವ ಸಾಧ್ಯತೆ

‘ಜಮೀನು ದಾನ ಮಾಡುವೆ’



ನಿಖಿಲ್

ಬೆಂಗಳೂರು: ‘ನನ್ನ ತಾಯಿ ಭೂ ಪರಿಹಾರಕ್ಕೆ ಅರ್ಜಿ ಸಲ್ಲಿಸಿರುವುದನ್ನು ಡಿ.ಕೆ.ಶಿವಕುಮಾರ್ ಸಾಬೀತು ಮಾಡಿದರೆ, ತಾಯಿಯ ಹೆಸರಿನಲ್ಲಿರುವ ಎಲ್ಲ ಜಮೀನನ್ನು ದಾನ ಮಾಡುತ್ತೇನೆ’ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸವಾಲು ಹಾಕಿದರು. ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಸದಸ್ಯತ್ವ ನೋಂದಣಿ ಸಮಾವೇಶದಲ್ಲಿ ಅವರು ಮಾತನಾಡಿದರು.

‘ನನ್ನ ತಾಯಿ ಭೂಮಿಯ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದಾರೆ ಎಂದು ಉಪ ಮುಖ್ಯಮಂತ್ರಿ ಆರೋಪಿಸಿದ್ದಾರೆ. ಅವರಿಗೆ ಯಾವ ಅಧಿಕಾರಿ ಆ ಮಾಹಿತಿ ನೀಡಿದರೋ ಗೊತ್ತಿಲ್ಲ’ ಎಂದರು.

‘ನಾವು ಯಾರ ಜಮೀನನ್ನೂ ಕಬಳಿಸಿಲ್ಲ. 20–30 ವರ್ಷಗಳ ಹಿಂದೆ ಜಮೀನು ಖರೀದಿಸಿದ್ದು, ರೈತರಾಗಿ ಅದರಲ್ಲಿ ದುಡಿಯುತ್ತಿದ್ದೇವೆ. ನನ್ನ ತಾತ, ತಂದೆ ಎಲ್ಲರೂ ರೈತರು. ಕೃಷಿ ಜಮೀನಿನಲ್ಲಿ ನಾವು ಕಾಲೇಜು ಕಟ್ಟಿಲ್ಲ, ಶಾಪಿಂಗ್ ಮಾಲ್ ನಿರ್ಮಿಸಿಲ್ಲ. ನಮ್ಮ ಮೇಲೆ ಆರೋಪ ಮಾಡುತ್ತಿರುವವರು ಏನೆಲ್ಲಾ ಮಾಡಿದ್ದಾರೆ ಎಂಬುದನ್ನು ರಾಮನಗರಕ್ಕೆ ಬಂದು ಹೇಳುತ್ತೇನೆ’ ಎಂದರು.

‘ಅಕ್ರಮ ಪೆಟ್ಟಿಗೆ ಅಂಗಡಿ ತೆರವುಗೊಳಿಸಿ’

ಬೆಳ್ಳಂದೂರು ವಾರ್ಡ್: ವ್ಯಾಪಾರಿಗಳಿಗೆ ಎಚ್ಚರಿಕೆ ನೀಡಿದ ಆಯುಕ್ತ



ಬೆಳ್ಳಂದೂರು ವಾರ್ಡ್‌ನ ಪಾದಚಾರಿ ಮಾರ್ಗದಲ್ಲಿದ್ದ ಪೆಟ್ಟಿಗೆ ಅಂಗಡಿಗಳನ್ನು ತೆರವುಗೊಳಿಸಲಾಯಿತು. ಆಯುಕ್ತ ರಮೇಶ್ ಡಿ.ಎಸ್. ಉಪಸ್ಥಿತರಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಪಾದಚಾರಿ ಮಾರ್ಗಗಳಲ್ಲಿ ಅನಧಿಕೃತವಾಗಿ ಇರುವ ಪೆಟ್ಟಿಗೆ ಅಂಗಡಿಗಳನ್ನು ಮುಲಾಜಿಲ್ಲದೇ ತೆರವುಗೊಳಿಸಬೇಕು’ ಎಂದು ಆಯುಕ್ತ ರಮೇಶ್ ಡಿ.ಎಸ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೆಳ್ಳಂದೂರು ವಾರ್ಡ್ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿಪ್ರೊ ಬಳಿಯ ಪಾದಚಾರಿ ಮಾರ್ಗದಲ್ಲಿದ್ದ ಪೆಟ್ಟಿಗೆ ಅಂಗಡಿಗಳನ್ನು ಗಮನಿಸಿದ ಅವರು, ಅವುಗಳನ್ನು ಕೂಡಲೇ ಜೆಸಿಬಿಯ ಮೂಲಕ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಹೇಳಿದರು. ‘ಪಾದಚಾರಿ ಮಾರ್ಗದಲ್ಲಿ ಅನಧಿಕೃತವಾಗಿ ಮತ್ತೆ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡರೆ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ವ್ಯಾಪಾರಿಗಳಿಗೆ ಎಚ್ಚರಿಕೆ ನೀಡಿದರು.

ಇದೇ ಸಂದರ್ಭದಲ್ಲಿ ಆಟೊ, ಟಿಪ್ಪರ್, ಮಸ್ಟರಿಂಗ್ ಕೇಂದ್ರಕ್ಕೆ ತೆರಳಿ ಪರಿಶೀಲಿಸಿದರು. ನಂತರ ಅಪಾರ್ಟ್‌ಮೆಂಟ್‌ಗಳಿಂದ ತ್ಯಾಜ್ಯ ಸಂಗ್ರಹಿಸುವ ಪ್ರಕ್ರಿಯೆಯನ್ನೂ ಪರಿಶೀಲಿಸಿದರು.

ನಂತರ ಪಾಕಶಾಲ ಹೋಟೆಲ್‌ನಲ್ಲಿರುವ ಅಡುಗೆ ಕೋಣೆಗೆ ಭೇಟಿ ನೀಡಿದರು. ಸ್ವಚ್ಛತೆ ಇಲ್ಲದಿರುವುದನ್ನು ಗಮನಿಸಿ, ಹೋಟೆಲ್ ಮಾಲೀಕರಿಗೆ ₹25 ಸಾವಿರ ದಂಡ ವಿಧಿಸಿದರು. ಮತ್ತೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸುವಂತೆ ತಾಕೀತು ಮಾಡಿದರು.

‘ಘನತ್ಯಾಜ್ಯ ವರ್ಗಾವಣೆ ಘಟಕ ಯಶಸ್ವಿ ಕಾರ್ಯನಿರ್ವಹಣೆ’

ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಈಜೀಪುರ ದ್ವಿತೀಯ ಹಂತದ ಘನತ್ಯಾಜ್ಯ ವರ್ಗಾವಣೆ ಘಟಕ ಯಶಸ್ವಿಯಾಗಿ ಕಾರ್ಯನಿರ್ವಹಣೆ ಮಾಡುತ್ತಿದೆ’ ಎಂದು ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

ಈಜೀಪುರದಲ್ಲಿರುವ ದ್ವಿತೀಯ ಹಂತದ ಘನತ್ಯಾಜ್ಯ ಘಟಕ ಹಾಗೂ ಸ್ವಯಂ ಚಾಲಿತ ತ್ಯಾಜ್ಯ ವಿಂಗಡಣೆ ಘಟಕಕ್ಕೆ ಭಾನುವಾರ ಭೇಟಿ ನೀಡಿ ಘಟಕದ ಕಾರ್ಯವೈಖರಿಯನ್ನು ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

‘2024ರ ಮಾರ್ಚ್‌ನಿಂದ ಈ ಘಟಕ ಕಾರ್ಯನಿರ್ವಹಿಸುತ್ತಿದ್ದು, ಪ್ರತಿನಿತ್ಯ ಎಂಟು ವಾರ್ಡ್‌ಗಳಿಂದ 160ರಿಂದ 170 ಟನ್ ತ್ಯಾಜ್ಯ ಬರುತ್ತದೆ. ಘಟಕದಲ್ಲಿ 35 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, ಇದನ್ನು ತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಕ್ಯಾಪ್ಸೂಲ್‌ಗಳ ಮೂಲಕ ರವಾನಿಸಲಾಗುತ್ತದೆ’ ಎಂದು ಮಾಹಿತಿ ನೀಡಿದರು.

7 ‘ಕ್ಯಾಪ್ಸೂಲ್’ ವಾಹನಗಳ ಬಳಕೆ

ಘಟಕದಲ್ಲಿ ಏಳು ಕ್ಯಾಪ್ಸೂಲ್ ವಾಹನಗಳು ಕಾರ್ಯನಿರ್ವಹಿಸುತ್ತಿದ್ದು, ಒಂದು ಕ್ಯಾಪ್ಸೂಲ್ ವಾಹನಕ್ಕೆ ಎರಡು ಕ್ಯಾಪ್ಸೂಲ್ (ಕಂಟೈನರ್) ಇರಲಿವೆ. ವಾರ್ಡ್‌ಗಳಿಂದ ಆಟೊ, ಟಿಪ್ಪರ್‌ಗಳ ಮೂಲಕ ಬರುವ ತ್ಯಾಜ್ಯವನ್ನು ಕಂಪ್ರೆಸ್ ಮಾಡಿ, ತುಂಬುವುದರಿಂದ ಒಂದು ಕ್ಯಾಪ್ಸೂಲ್‌ನಲ್ಲಿ 16 ಟನ್‌ನಿಂದ 18 ಟನ್‌ವರೆಗೆ ತ್ಯಾಜ್ಯ ಸಂಗ್ರಹಿಸಬಹುದು’ ಎಂದರು.

‘ಇದೇ ಸ್ಥಳದಲ್ಲಿರುವ ಸ್ವಯಂಚಾಲಿತ ತ್ಯಾಜ್ಯ ವಿಂಗಡಣಾ ಘಟಕದವು ಪ್ರತಿ ಗಂಟೆಗೆ 5 ಟನ್ ತ್ಯಾಜ್ಯದಂತೆ ನಿತ್ಯ ಸುಮಾರು 40 ಟನ್ ತ್ಯಾಜ್ಯ ವಿಂಗಣೆ ಮಾಡುವ ಸಾಮರ್ಥ್ಯ ಹೊಂದಿದೆ. ಇದರಿಂದ, ಭೂಭರ್ತಿ ಪ್ರದೇಶಗಳ ಮೇಲಿನ ಒತ್ತಡ ಕಡಿಮೆಯಾಗುತ್ತದೆ ಎಂದು ಹೇಳಿದರು.

‘ಪ್ರವಾಹ ಪೀಡಿತ ಸ್ಥಳಗಳಲ್ಲಿ ಶಾಶ್ವತ ಪರಿಹಾರ’

ಉತ್ತರ ನಗರ ಪಾಲಿಕೆಯಲ್ಲಿ ಮಳೆ ನೀರಿನಿಂದ ಜಲಾವೃತವಾಗುವ ಸ್ಥಳಗಳಲ್ಲಿ ಶಾಶ್ವತ ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಭಾನುವಾರ ಬೆಳಿಗ್ಗೆ ಯಲಹಂಕ ವ್ಯಾಪ್ತಿಯಲ್ಲಿ ಮಳೆ ನೀರಿನಿಂದ ಜಲಾವೃತವಾಗುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

‘ಕೋಗಿಲು ಕ್ರಾಸ್ ಜಂಕ್ಷನ್‌ನಲ್ಲಿ ಮಳೆ ನೀರಿನಿಂದ ಪ್ರವಾಹ ಸ್ಥಿತಿ ಉಂಟಾಗುವ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ನೀಡಿ, ಅದನ್ನು ಶಾಶ್ವತವಾಗಿ ಪರಿಹರಿಸುವ ಸಲುವಾಗಿ ಯೋಜನೆ ರೂಪಿಸಬೇಕು’ ಎಂದರು.

ಕೋಗಿಲು ವೃತ್ತದಲ್ಲಿ ಕೈಗೆತ್ತಿಕೊಂಡಿರುವ ಮಳೆ ನೀರುಗಾಲುವೆ ಕಾಮಗಾರಿ ಪರಿಶೀಲಿಸಿ, ನೀರು ನಿಂತುಕೊಳ್ಳುವ ಸಾಧ್ಯತೆ ಇರುವ ಸ್ಥಳಗಳನ್ನು ಗುರುತಿಸಿ, ನೀರು ಸರಾಗವಾಗಿ ಹರಿದು ಹೋಗುವಂತೆ ಕಾಮಗಾರಿ ನಡೆಸಬೇಕು ಎಂದು ಸೂಚಿಸಿದರು.

ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆಯಲ್ಲಿ ಪ್ರಸ್ತಾವಿತ ಫುಡ್ ಸ್ಟ್ರೀಟ್ ಕಾಮಗಾರಿ ಪರಿಶೀಲಿಸಿ, ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಯಲಹಂಕ ಉಪ ನಗರದಲ್ಲಿ ಪೌರ ಕಾರ್ಮಿಕರ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿದ ಅವರು, ‘ಪೌರ ಕಾರ್ಮಿಕರು ಸರಿಯಾದ ಸಮಯಕ್ಕೆ ಹಾಜರಾಗಬೇಕು. ನಗರವನ್ನು ಸ್ವಚ್ಛ ಹಾಗೂ ಸುಂದರಗೊಳಿಸುವಲ್ಲಿ ನಿಮ್ಮ ಪಾತ್ರ ಮಹತ್ವದಾಗಿದೆ’ ಎಂದು ಹೇಳಿದರು.

ಸುದ್ದಿ 2 ನಿಮಿಷ

‘ರಾಜ್ಯದ ಎರಡನೇ ಅಧಿಕೃತ ಭಾಷೆ ತುಳು: ಸಂಪುಟದಲ್ಲಿ ಚರ್ಚೆ’

ಬೆಂಗಳೂರು: ‘ರಾಜ್ಯದ ಎರಡನೇ ಅಧಿಕೃತ ಭಾಷೆ ತುಳು ಎಂದು ಘೋಷಿಸಬೇಕು ಎಂಬ ಬೇಡಿಕೆಯ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ಮಾಡಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಭಾನುವಾರ ಇಲ್ಲಿ ನಡೆದ ಅಷ್ಟೆಮಿದ ಐಸಿರಿ ತುಳುವ ತರ್ಲ್ ಸಾಸಿರಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಇತ್ತೀಚೆಗೆ ಕುಂದಾಪುರದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. ಆ ಕಾರ್ಯಕ್ರಮ, ಈ ಕಾರ್ಯಕ್ರಮದಲ್ಲಿ ಸೇರಿರುವ ಜನ ನೋಡಿದರೆ ಮುಂದೆ ನೀವೆಲ್ಲರೂ ನಮ್ಮನ್ನು ಬೆಂಗಳೂರಿನಿಂದ ಖಾಲಿ ಮಾಡಿಸುತ್ತೀರೇನೋ ಎಂದು ಭಯವಾಗುತ್ತಿದೆ. ನಿಮ್ಮ ಈ ಶಕ್ತಿ, ಉತ್ಸಾಹ ನೋಡಿ ನನಗೆ ಈ ಅನುಮಾನ ಕಾಡುತ್ತಿದೆ’ ಎಂದು ಹಾಸ್ಯ ಚಟಾಕಿ ಹಾರಿಸಿದರು.

‘ಕರಾವಳಿ ಜನ ಇಡೀ ದೇಶಕ್ಕೆ ಕರ್ನಾಟಕದ ಮೂಲಕ ಸಂಸ್ಕೃತಿ ಹಾಗೂ ಶಿಕ್ಷಣ, ಧಾರ್ಮಿಕ ಶಕ್ತಿ, ಬ್ಯಾಂಕಿಂಗ್ ವ್ಯವಸ್ಥೆ ಕೊಟ್ಟಿದ್ದಾರೆ. ಆರೋಗ್ಯ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ಇದ್ದೀರಿ. ಕರಾವಳಿ ಭಾಗ, ದಕ್ಷಿಣ ಕನ್ನಡದ ಜನ ವಿದ್ಯಾವಂತರು, ಬುದ್ಧಿವಂತರು, ಪ್ರಜ್ಞಾವಂತರು. ನಿಮ್ಮ ಜೊತೆ ನಾನು ಇದ್ದೇನೆ ಎಂದು ಹೇಳಲು ಇಲ್ಲಿಗೆ ಬಂದಿದ್ದೇನೆ. ಡಿ.ಕೆ. ಶಿವಕುಮಾರ್ ನಿಮ್ಮವ ಎಂದು ಭಾವಿಸಿ. ನಾನು ನಿಮ್ಮ ಪರವಾಗಿದ್ದೇನೆ. ನೀವು ನನಗೆ ಬೆಂಬಲವಾಗಿರಿ. ನಾನು ನಿಮ್ಮ ಆಶೀರ್ವಾದವನ್ನಷ್ಟೇ ಕೇಳುತ್ತಿದ್ದೇನೆ’ ಎಂದರು.

‘ಮಂಗಳೂರು, ಉಡುಪಿ ಸೇರಿದಂತೆ ಕರಾವಳಿ ಭಾಗದ ಜನರು ಉದ್ಯೋಗಕ್ಕಾಗಿ ವಲಸೆ ಹೋಗದಂತೆ ಪ್ರತ್ಯೇಕ ಪ್ರವಾಸೋದ್ಯಮ ನೀತಿ ರೂಪಿಸಲು ಆ ಭಾಗದ ಶಾಸಕರು, ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಅವರ ಜೊತೆ ನಾನು ಚರ್ಚೆ ಮಾಡಿದ್ದೇನೆ’ ಎಂದು ತಿಳಿಸಿದರು.

‘ಗುಣಮುಖರಾಗುವ ಭರವಸೆ ನೀಡಿ’



ಬೆಂಗಳೂರು: ‘ವೈದ್ಯರು ರೋಗಿಗಳಿಗೆ ಚಿಕಿತ್ಸೆ ಒದಗಿಸುವ ಜತೆಗೆ ಗುಣಮುಖರಾಗುವ ಬಗ್ಗೆ ಭರವಸೆ ನೀಡಬೇಕು. ವೈದ್ಯರ ಸಾಂತ್ವನದ ಮಾತುಗಳು ರೋಗ ಗುಣಪಡಿಸಲು ನಿರ್ಣಾಯಕ’ ಎಂದು ಸುತ್ತೂರು ಮಠದ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಸರ್ಜಾಪುರದಲ್ಲಿ ನಿರ್ಮಾಣವಾಗಿರುವ 250 ಹಾಸಿಗೆಗಳ ಸ್ಪರ್ಶ್ ಆಸ್ಪತ್ರೆ ಸಮೂಹದ ಒಂಬತ್ತನೆ ಶಾಖೆಗೆ ಭಾನುವಾರ ಚಾಲನೆ ನೀಡಿ, ಶುಭಹಾರೈಸಿದರು.

ಆಸ್ಪತ್ರೆ ಸಮೂಹದ ಅಧ್ಯಕ್ಷ ಡಾ.ಶರಣ್ ಶಿವರಾಜ್ ಪಾಟೀಲ, ‘ಬೆಂಗಳೂರು ದೇಶದ ಐಟಿ ರಾಜಧಾನಿಯೆಂದು ಬಿಂಬಿತವಾದಂತೆ, ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆಯೂ ಕೆಲವೇ ವರ್ಷಗಳಲ್ಲಿ ನಾಯಕನಾಗಿ ಹೊರಹೊಮ್ಮಲಿದೆ. ಮುಂಬರುವ ವರ್ಷಗಳಲ್ಲಿ ರಾಜ್ಯದ ಇತರ ಭಾಗಗಳಲ್ಲಿಯೂ ಅಗತ್ಯತೆ ಅನುಸಾರ ಆಸ್ಪತ್ರೆಯ ಶಾಖೆ ಪ್ರಾರಂಭಿಸಲಾಗುವುದು’ ಎಂದರು.

‘ಸ್ಪರ್ಶ್ ಆಸ್ಪತ್ರೆ ಸಮೂಹವು ಪ್ರತಿ ವರ್ಷ ನೂರಕ್ಕೂ ಅಧಿಕ ಶಿಕ್ಷಕರು ಮತ್ತು ಮಕ್ಕಳಿಗೆ ಉಚಿತವಾಗಿ ದೈಹಿಕ ಊನತೆ ಸರಿಪಡಿಸುವ ಶಸ್ತ್ರಚಿಕಿತ್ಸೆಗಳನ್ನು ನಡೆಸುತ್ತಿದೆ. ಈ ಮೂಲಕ ಸಾಮಾಜಿಕ ಜವಾಬ್ದಾರಿ ಮೆರೆಯುತ್ತಿದೆ’ ಎಂದು ಹೇಳಿದರು.

‘ಸಂಯಮ, ಕ್ಷಮಾ ಗುಣಕ್ಕೆ ವೀರೇಂದ್ರ ಹೆಗ್ಗಡೆ ಮಾದರಿ’

ಆರತಿಪುರದ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮೀಜಿ ಅಭಿಮತ

ಪ್ರಜಾವಾಣಿ ವಾರ್ತೆ



ಸಮಾರಂಭದಲ್ಲಿ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿದರು. ಅನಿತಾ ಸುರೇಂದ್ರ ಕುಮಾರ್, ಎಸ್. ಜಿತೇಂದ್ರ ಕುಮಾರ್, ಹಾಗೂ ಸುರೇಂದ್ರ ಕುಮಾರ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಅವರಿಗೆ ಅನೇಕ ಮಂದಿ ಅನೇಕ ರೀತಿಯ ತೊಂದರೆ ನೀಡುತ್ತಿದ್ದಾರೆ. ಆದರೆ, ಅವರು ಮಾತ್ರ ಸಂಯಮದಿಂದ ಇದ್ದು, ಧರ್ಮ ಕಾರ್ಯ ಮಾಡುತ್ತಿದ್ದಾರೆ. ಕ್ಷಮಾ ಗುಣಕ್ಕೆ ಅವರು ಉತ್ತಮ ಉದಾಹರಣೆ’ ಎಂದು ಆರತಿಪುರದ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮೀಜಿ ಹೇಳಿದರು.

ಕರ್ನಾಟಕ ಜೈನ್ ಅಸೋಷಿಯೇಷನ್ ಹಮ್ಮಿಕೊಂಡಿದ್ದ ಸಾಮೂಹಿಕ ಕ್ಷಮಾವಳಿ ಸಮಾರಂಭದಲ್ಲಿ ಸಾನ್ನಿಧ್ಯವಹಿಸಿ ಮಾತನಾಡಿದರು. ‘ಕಷ್ಟಗಳು, ತೊಂದರೆಗಳು ಎಲ್ಲರಿಗೂ ಬರುತ್ತವೆ. ವೀರೇಂದ್ರ ಹೆಗ್ಗಡೆ ಅವರು ಅನೇಕ ಲೋಕ ಕಲ್ಯಾಣ ಕಾರ್ಯಗಳನ್ನು ಮಾಡಿದ್ದಾರೆ. ಆದರೆ, ದುರುದ್ದೇಶದಿಂದ ಅವರಿಗೆ ತೊಂದರೆ ಮಾಡುತ್ತಿದ್ದಾರೆ. ಹೆಗ್ಗಡೆ ಅವರು ಭಗವಾನ್ ಪಾರ್ಶ್ವನಾಥರ ಚರಿತ್ರೆಯನ್ನು ಅಧ್ಯಯನ ಮಾಡಿದ್ದು, ಭಗವಾನ್ ಪಾರ್ಶ್ವನಾಥರ ರೀತಿಯೇ ಸಂಯಮದಿಂದ ಇದ್ದಾರೆ. ಭಟ್ಟಾರಕರೆಲ್ಲರೂ ಅವರ ಬಳಿ ಚರ್ಚಿಸಿದಾಗಲೂ, ಒಳ್ಳೆಯ ದಾರಿಯಲ್ಲಿ ಸಾಗುತ್ತಾ ಧರ್ಮಕಾರ್ಯ ಕೈಗೊಂಡಿರುವುದಾಗಿ ಹೇಳಿದರು. ಎಷ್ಟೇ ಕಷ್ಟ ಬಂದರೂ, ಯಾರು ಏನೇ ತೊಂದರೆ ಮಾಡಿದರೂ ನಾವು ಕ್ಷಮಾ ಗುಣವನ್ನು ಧಾರಣೆ ಮಾಡಬೇಕು ಎಂಬುದನ್ನು ಅವರು ಪಾಲಿಸುತ್ತಿದ್ದಾರೆ’ ಎಂದರು.

ತ್ಯಾಗಿ ಸೇವಾ ಸಮಿತಿ ಟ್ರಸ್ಟ್ ಅಧ್ಯಕ್ಷ ಸುರೇಂದ್ರ ಕುಮಾರ್, ‘ಕ್ಷಮಾವಳಿಗೆ ವಿಶೇಷ ಮಹತ್ವ ಇದೆ. ಹಿಂದೆ ಜಗಳವಾದರೆ ರಾಜಿಯಾಗಲು ಈ ಕ್ಷಮಾವಳಿ ಆಚರಣೆ ಅವಕಾಶ ಮಾಡಿಕೊಡುತ್ತಿತ್ತು. ನಮ್ಮ ಆಚಾರ ವಿಚಾರಗಳು ಹೆಚ್ಚು ಪ್ರಚಾರವಾಗಬೇಕು’ ಎಂದರು.

ಕರ್ನಾಟಕ ಜೈನ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಜಿತೇಂದ್ರ ಕುಮಾರ್, ‘ಅನ್ಯ ಧರ್ಮೀಯರು ಎಲ್ಲ ಜನರು ಸುಖವಾಗಿ ಇರಲಿ ಎನ್ನುತ್ತಾರೆ. ಆದರೆ, ಜೈನ ಧರ್ಮೀಯರು ಮಾತ್ರ ಎಲ್ಲ ಜೀವಗಳು ಸುಖವಾಗಿ, ನೆಮ್ಮದಿಯಾಗಿ ಇರಲಿ ಎಂದು ಬಯಸುತ್ತಾರೆ’ ಎಂದು ಹೇಳಿದರು.

ಪತ್ರಕರ್ತ ಪದ್ಮರಾಜ ದಂಡಾವತಿ ಅವರು ಕ್ಷಮಾವಳಿ ಬಗ್ಗೆ ಉಪನ್ಯಾಸ ನೀಡಿದರು.



ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷ ಬಿ.ಎಸ್. ಶಿವಣ್ಣ ಮಳವಳ್ಳಿ ಅವರು ನಗರದಲ್ಲಿ ವಿವಿಧ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ 20 ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಭಾನುವಾರ ಲ್ಯಾಪ್‌ಟಾಪ್ ವಿತರಿಸಿದರು – ಪ್ರಜಾವಾಣಿ ಚಿತ್ರ

ಮಕ್ಕಳ ಜಾತ್ರೆ ಸಾಂಸ್ಕೃತಿಕ ಹಬ್ಬದಲ್ಲಿ ಕೆ.ವಿ. ಪ್ರಭಾಕರ್

‘ಮೊಬೈಲೇ ಮೊದಲ ಶಾಲೆಯಾಗಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನೆಯೇ ಮೊದಲ ಶಾಲೆ ಎನ್ನುವುದು ಹೋಗಿ, ಮೊಬೈಲೇ ಮೊದಲ ಶಾಲೆಯಂತಾಗಿದೆ’ ಎಂದು ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಆತಂಕ ವ್ಯಕ್ತಪಡಿಸಿದರು.

ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ಹಾಗೂ ಜವಾಹರ್ ಬಾಲಭವನದ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ಮಕ್ಕಳ ಜಾತ್ರೆ ಸಾಂಸ್ಕೃತಿಕ ಹಬ್ಬಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ನಗರಗಳಲ್ಲಿ ಇರುವ ಮಕ್ಕಳು ನೆಲದ ಆಟ ಪಾಠಗಳಿಂದ ದೂರವಾಗಿದ್ದಾರೆ. ವೃದ್ಧಾಶ್ರಮಗಳು ಹೆಚ್ಚಾಗುತ್ತಿದ್ದು ಅಜ್ಜ-ಅಜ್ಜಿಯರ ಕತೆಗಳಿಂದ ವಂಚಿತರಾಗುತ್ತಿದ್ದಾರೆ. ತಮ್ಮ ಆಟದ ಸಾಮಾನುಗಳನ್ನು ತಾವೇ ಸೃಷ್ಟಿಸಿಕೊಳ್ಳುವ ಕ್ರಿಯಾಶೀಲತೆ ಕಾಣೆಯಾಗುತ್ತಿದ್ದು, ಪ್ಲಾಸ್ಟಿಕ್ ಹಾಗೂ ಬ್ಯಾಟರಿ ಚಾಲಿತ ಆಟದ ಸಾಮಾನುಗಳ ಸಹವಾಸದಿಂದಾಗಿ ಮನೋಲೋಕ ಹಿಗ್ಗುವ ಬದಲು ಕುಗ್ಗುತ್ತಿದೆ’ ಎಂದರು.

‘ಮಕ್ಕಳ ತಲೆಯೊಳಗೆ ರಾಗಿ ರೊಟ್ಟಿಯ ಬದಲಿಗೆ ಬರ್ಗರ್, ಜೋಳದ ರೊಟ್ಟಿಯ ಬದಲಿಗೆ ಪಿಜ್ಜಾ, ಮುದ್ದೆಯ ಬದಲಿಗೆ ಪಾಸ್ತಾ, ಡೋನಟ್ ತುಂಬಿದ್ದು ಕೂಡ ಕೆಟ್ಟ ಪ್ರವೃತ್ತಿ. ಇದನ್ನು ಆಳವಾಗಿ ಮತ್ತು ಗಂಭೀರವಾಗಿ ಯೋಚಿಸುವ ಅಗತ್ಯವಿದೆ. ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಇದನ್ನು ಮನಗಂಡಿದ್ದರು. ಮಕ್ಕಳ ದೃಷ್ಟಿಕೋನದಲ್ಲಿ ದೇಶದ ಅಭಿವೃದ್ಧಿ ಮತ್ತು ಪ್ರಗತಿಯ ನೀಲನಕ್ಷೆಯನ್ನು ನೆಹರೂ ಸಿದ್ಧಪಡಿಸಿದ್ದರು. ಈ ನೀಲನಕ್ಷೆಯ ಭಾಗವೇ ಬಾಲ ಭವನ’ ಎಂದು ಹೇಳಿದರು.

‘ಸಮಾಜ, ಸ್ನೇಹಿತರಿಂದ ಬೇರ್ಪಡಿಸುವ ವಿಡಿಯೊ ಗೇಮ್‌ಗಳು ಹಿಂಸಾತ್ಮಕ ಮನೋಭಾವ, ಕೋಪ, ಆಕ್ರಮಣಶೀಲತೆಯನ್ನು ಬೆಳೆಸುತ್ತವೆ. ಇಂತಹ ಮನಃಸ್ಥಿತಿಯ ಮಕ್ಕಳು ಭವಿಷ್ಯದಲ್ಲಿ ಯಾವ ರೀತಿ ರೂಪುಗೊಳ್ಳಬಹುದು? ಪ್ರೌಢಶಾಲಾ ಹಂತದಲ್ಲಿಯೇ ರ‍್ಯಾಗಿಂಗ್ ಪಿಡುಗು ಹೆಚ್ಚಾಗುತ್ತಿರುವುದಕ್ಕೆ ಕಾರಣ ಏನು ಎನ್ನುವುದನ್ನು ಆಲೋಚಿಸಬೇಕಿದೆ’ ಎಂದರು.

ನಟ ಅರುಣ್ ಸಾಗರ್ ಮತ್ತು ಅವರ ಪತ್ನಿ ಮೀರಾ, ಬಾಲ ಭವನದ ಅಧ್ಯಕ್ಷ ಬಿ.ಆರ್.ನಾಯ್ಡು, ಪ್ರೆಸ್‌ಕ್ಲಬ್ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಡಿ.ವಿ. ಪರಮಶಿವಮೂರ್ತಿ, ಪುರುಷೋತ್ತಮ ಬಿಳಿಮಲೆ, ಆರ್. ಶೇಷಶಾಸ್ತ್ರಿ, ದೇವರಕೊಂಡಾರೆಡ್ಡಿ, ಶ್ರೀನಿವಾಸ ವಿ. ಪಾಡಿಗಾರ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

‘ಬಹುಭಾಷಾ ತಜ್ಞತೆ ಸಂಶೋಧನೆಗೆ ಸಹಕಾರಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪುರುಷೋತ್ತಮ ಬಿಳಿಮಲೆ ಅಭಿಮತ
- ‘ಬಾ.ರಾ. ಗೋಪಾಲ–ಲೇಖ’ ಪುಸ್ತಕ ಜನಾರ್ಪಣೆ

ಬೆಂಗಳೂರು: ‘ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಬಾ.ರಾ. ಗೋಪಾಲ್ ಅಂಥವರು ವೈಜ್ಞಾನಿಕ ಹಾಗೂ ಶೈಕ್ಷಣಿಕವಾಗಿ ಭದ್ರವಾದ ನೆಲೆಗಟ್ಟನ್ನು ರೂಪಿಸಿದ್ದರು. ಈ ಕ್ಷೇತ್ರಕ್ಕೆ ಅವರು ಹಾಕಿಕೊಟ್ಟ ಬುನಾದಿ ಬಹುಭಾಷಾ ತಜ್ಞರ ಕೊರತೆಯಿಂದ ಈಗ ಕುಸಿಯುತ್ತಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಬೇಸರ ವ್ಯಕ್ತಪಡಿಸಿದರು.

ಎಚ್.ಎಸ್. ಗೋಪಾಲ ರಾವ್ ಅವರು ಸಂಪಾದಿಸಿರುವ, ರೂವಾರಿ ಅಭಿನವ ಇಂಪ್ರಿಂಟ್ ಪ್ರಕಟಿಸಿರುವ ಇತಿಹಾಸಕಾರ ಬಾ.ರಾ. ಗೋಪಾಲ್ ಅವರ ಆಂಗ್ಲ ಲೇಖನಗಳ ಸಂಗ್ರಹ ‘ಬಾ. ರಾ. ಗೋಪಾಲ–ಲೇಖ’ ಪುಸ್ತಕವನ್ನು ದಿ ಮಿಥಿಕ್ ಸೊಸೈಟಿಯಲ್ಲಿ ಭಾನುವಾರ ಜನಾರ್ಪಣೆ ಮಾಡಿ, ಮಾತನಾಡಿದರು.

‘ಡಿ.ಎಲ್. ನರಸಿಂಹಾಚಾರ್, ಮಂಜೇಶ್ವರ ಗೋವಿಂದ ಪೈ, ಪಿ.ಬಿ.ದೇಸಾಯಿ, ಶ್ರೀಕಂಠ ಶಾಸ್ತ್ರಿ ಮೊದಲಾದವರು ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಬಹುಭಾಷಾ ತಜ್ಞತೆ ಸಂಶೋಧನೆಗೆ ಸಹಕಾರಿಯಾಯಿತು. ಬಾ.ರಾ. ಗೋಪಾಲ್ ಅವರು ಆರೇಳು ಭಾಷೆ ಬಲ್ಲವರಾಗಿದ್ದರು. ಗೋವಿಂದ ಪೈ ಅವರು ಹದಿನಾಲ್ಕು ಭಾಷೆಗಳನ್ನು ಮಾತನಾಡುತ್ತಿದ್ದರು. ಕರ್ನಾಟಕದಲ್ಲಿ ಈಗ 230 ಭಾಷೆಗಳಿವೆ. ಹಾಗಾಗಿ, ಕರ್ನಾಟಕ ಕಟ್ಟಿದ ಸಂಶೋಧನಾ ಪರಂಪರೆ ಅರ್ಥ ಮಾಡಿಕೊಳ್ಳಲು ಬಹುಭಾಷಾ ತಜ್ಞತೆ ಮುಖ್ಯ’ ಎಂದು ಹೇಳಿದರು.

ಕೃತಿಯ ಬಗ್ಗೆ ಮಾತನಾಡಿದ ಇತಿಹಾಸಕಾರ ಶ್ರೀನಿವಾಸ ವಿ. ಪಾಡಿಗಾರ್, ‘ಚದುರಿ ಹೋಗಿದ್ದ ಬಾ.ರಾ. ಗೋಪಾಲ್ ಅವರ ಲೇಖನಗಳನ್ನು ಸಂಗ್ರಹಿಸಿ, ಪ್ರಕಟಿಸಲಾಗಿದೆ. 59 ಲೇಖನಗಳನ್ನು ಕೃತಿ ಒಳಗೊಂಡಿದ್ದು, ವಿದ್ವತ್ ಪರಿಚಯಿಸುವ ಜತೆಗೆ ವಿದ್ಯಾರ್ಥಿಗಳಿಗೆ ಆಕರವಾಗಲಿದೆ’ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆರ್. ಶೇಷಶಾಸ್ತ್ರಿ ಅವರು, ಗೋಪಾಲ್ ಅವರ ಜತೆಗಿನ ಒಡನಾಟವನ್ನು ಸ್ಮರಿಸಿದರು. ಕರ್ನಾಟಕ ಇತಿಹಾಸ ಅಕಾಡೆಮಿ ಅಧ್ಯಕ್ಷ ದೇವರಕೊಂಡಾರೆಡ್ಡಿ, ಹಂಪಿ ಕನ್ನಡ ವಿ.ವಿ ಕುಲಪತಿ ಡಿ.ವಿ. ಪರಮಶಿವಮೂರ್ತಿ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

‘ಗರುಡ ಪುರಾಣ’ ಧಾರ್ಮಿಕ ಪ್ರವಚನ

ಪ್ರವಚನ ನೀಡುವವರು: ಚಂದ್ರಶೇಖರ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ, ಸಂಜೆ 6.15

ಪ್ರವಚನ ನೀಡುವವರು: ಫಣಿಕುಮಾರ್ ಆಚಾರ್ಯ, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6.30

ಪ್ರವಚನ ನೀಡುವವರು: ಬ್ರಹ್ಮಣ್ಯಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ರಾಜರಾಜೇಶ್ವರಿನಗರ, ಸಂಜೆ 6.30

ಪ್ರವಚನ ನೀಡುವವರು: ಬಳ್ಳಾರಿ ಗುರುರಾಜಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, ಪ್ರಕಾಶನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in



ಸಂಕ್ಷಿಪ್ತ ಸುದ್ದಿ



ಡ್ರೋನ್ ದಾಳಿಯಿಂದ ಕೀವ್‌ನಲ್ಲಿರುವ ಸರ್ಕಾರಿ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿತು —ಎಪಿ ಚಿತ್ರ

ಉಕ್ರೇನ್ ಮೇಲೆ ಭಾರಿ ದಾಳಿ

ಕೀವ್ (ಉಕ್ರೇನ್) (ಎಪಿ/ ಎಎಫ್‌ಪಿ): ರಷ್ಯಾ ಸೇನೆಯು ಉಕ್ರೇನ್ ಮೇಲೆ ಭಾನುವಾರ ಅತಿದೊಡ್ಡ ವೈಮಾನಿಕ ದಾಳಿ ನಡೆಸಿದ್ದು, ನಾಲ್ವರು ಮೃತಪಟ್ಟಿದ್ದಾರೆ. ಕೀವ್‌ನಲ್ಲಿನ ಸರ್ಕಾರಿ ಕಟ್ಟಡಕ್ಕೆ ಹಾನಿಯಾಗಿದೆ.

ರಷ್ಯಾ ನಡೆಸಿದ ದಾಳಿಯು ಯುದ್ಧವನ್ನು ಇನ್ನಷ್ಟು ದೀರ್ಘಗೊಳಿಸಲಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಎಚ್ಚರಿಸಿದ್ದಾರೆ.

ಡ್ರೋನ್ ದಾಳಿಯಿಂದ ಕೀವ್‌ನಲ್ಲಿರುವ ಹಲವು ಬಹುಮಹಡಿ ಕಟ್ಟಡಗಳಿಗೆ ಹಾನಿಯಾಗಿವೆ ಎಂದು ತುರ್ತು ಸೇವೆಗಳ ಇಲಾಖೆ ತಿಳಿಸಿದೆ. ಸರ್ಕಾರಿ ಕಚೇರಿಗಳನ್ನು ಒಳಗೊಂಡಿರುವ ಕಟ್ಟಡದಿಂದ ಬೆಂಕಿ ಹಾಗೂ ದಟ್ಟ ಹೊಗೆ ಎದ್ದಿರುವ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಉಕ್ರೇನ್ ಸಂಸತ್ ಮತ್ತು ಸಚಿವರ ಕಚೇರಿಗಳು ಇದೇ ಕಟ್ಟಡದಲ್ಲಿವೆಎಂದು ಮೂಲಗಳು ತಿಳಿಸಿವೆ. 'ಶನಿವಾರ ರಾತ್ರಿಯಿಂದ ಭಾನುವಾರ ಬೆಳಗ್ಗಿನವರೆಗೆ ರಷ್ಯಾ 810 ಡ್ರೋನ್‌ಗಳು ಮತ್ತು 13 ಕ್ಷಿಪಣಿಗಳನ್ನು ಹಾರಿಸಿದೆ. ಅದರಲ್ಲಿ 747 ಡ್ರೋನ್‌ಗಳು ಮತ್ತು ನಾಲ್ಕು ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ' ಎಂದು ಉಕ್ರೇನ್ ಸೇನೆ ತಿಳಿಸಿದೆ.

ಕೀವ್‌ನಲ್ಲಿ ಇಬ್ಬರು ಹಾಗೂ ಉಕ್ರೇನ್‌ನ ಪೂರ್ವ ಮತ್ತು ಆಗ್ನೇಯ ಭಾಗದ ಪಟ್ಟಣದಲ್ಲಿ ಇಬ್ಬರು ಮೃತಪಟ್ಟಿದ್ದು, 44 ಮಂದಿ ಗಾಯಗೊಂಡಿದ್ದಾರೆ.

ಇನ್ನಷ್ಟು ನಿರ್ಬಂಧದ ಎಚ್ಚರಿಕೆ: ರಷ್ಯಾ ಮೇಲೆ 'ಎರಡನೇ ಹಂತದ' ನಿರ್ಬಂಧ ಹೇರಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ. ಯುದ್ಧ ಕೊನೆಗೊಳಿಸಲು ಟ್ರಂಪ್ ನಡೆಸುತ್ತಿರುವ ಪ್ರಯತ್ನದ ಮಧ್ಯೆಯೇ ರಷ್ಯಾದ ದಾಳಿ ನಡೆದಿದೆ.

ರಥೋತ್ಸವ: ಸಂಚಾರ ಮಾರ್ಪಾಡು

ಬೆಂಗಳೂರು: ಶಿವಾಜಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೆಂಟ್ ಮೇರಿ ಬೆಸಿಲಿಕಾ ಚರ್ಚ್‌ನ ರಥೋತ್ಸವದ ಪ್ರಯುಕ್ತ ಸೆಪ್ಟೆಂಬರ್ 8 ರಂದು ಮಧ್ಯಾಹ್ನ 1 ರಿಂದ ರಾತ್ರಿ 10ರವರೆಗೆ ವಾಹನ ಸಂಚಾರದಲ್ಲಿ ಮಾರ್ಪಾಡು ಮಾಡಲಾಗಿದೆ

ಸಂಚಾರ ನಿರ್ಬಂಧ: ಜ್ಯೋತಿ ಕೆಫೆ ವೃತ್ತದಿಂದ ರಸೆಲ್ ಮಾರ್ಕೆಟ್‌ವರೆಗೆ ರಸ್ತೆಯ ಎರಡೂ ಬದಿ, ಬ್ರಾಡ್ ವೇ ರಸ್ತೆಯಲ್ಲಿ ರಸೆಲ್ ಮಾರ್ಕೆಟ್ ಕಡೆಗೆ ರಸ್ತೆಯ ಎರಡೂ ಬದಿ, ಧರ್ಮರಾಜ ಕೋಯಿಲ್ ಸ್ಟ್ರೀಟ್–ಓ.ಪಿ.ಎಚ್. ರಸ್ತೆ ವರೆಗೆ ರಸೆಲ್ ಮಾರ್ಕೆಟ್ ಕಡೆಗೆ ಬರುವ ವಾಹನಗಳು, ಬಿ.ಆರ್.ವಿ. ಜಂಕ್ಷನ್ ನಿಂದ ಶಿವಾಜಿ ನಗರ ಬಸ್ ನಿಲ್ದಾಣಕ್ಕೆ ಬರುವ ಬಿಎಂಟಿಸಿ ಬಸ್‌ಗಳು ಮತ್ತು ಬಾಳೇಕುಂದ್ರಿ ವೃತ್ತದಿಂದ ಶಿವಾಜಿ ನಗರ ಬಸ್ ನಿಲ್ದಾಣಕ್ಕೆ ಬರುವ ಬಿಎಂಟಿಸಿ ಬಸ್‌ಗಳು ಸೇರಿ ಎಲ್ಲಾ ಮಾದರಿಯ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ಅನಿಲ್ ಕುಂಬ್ಳೆ ಜಂಕ್ಷನ್ ಕಡೆಯಿಂದ ಬರುವ ಬಿಎಂಟಿಸಿ ಬಸ್‌ಗಳು ಬಿ.ಆರ್.ವಿ. ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಸಿಟಿಓ–ಕ್ವೀನ್ಸ್ ಸರ್ಕಲ್–ಎಂ.ಜಿ. ರಸ್ತೆ ಮೂಲಕ ಸಂಚರಿಸಬಹುದು. ದ್ವಿ ಚಕ್ರ ಹಾಗೂ ಲಘು ಮೋಟಾರು ವಾಹನಗಳು ಬಿಆರ್‌ವಿ ಸೆಂಟ್ರಲ್ ಸ್ಟ್ರೀಟ್ ಬಳಿ ಬಲ ತಿರುವು ಪಡೆದು ಸಫೀನಾ ಪ್ಲಾಜಾ–ಕಮರ್ಷಿಯಲ್ ಸ್ಟ್ರೀಟ್, ಕಾಮರಾಜ ರಸ್ತೆ ಮೂಲಕ ಸಂಚರಿಸಬಹುದು.

ಎ.ಐ ವಿಡಿಯೊ ಬಳಸಿ ₹1 ಲಕ್ಷ ವಂಚನೆ

ಕಡಿಮೆ ಹಣ ಹೂಡಿದರೆ ಹೆಚ್ಚು ಲಾಭದ ಆಮಿಷ
ನಿರ್ಮಲಾ ಸೀತಾರಾಮನ್ ಹೆಸರಲ್ಲಿ ನಕಲಿ ವಿಡಿಯೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಾತನಾಡುತ್ತಿರುವುದು ಎಂಬಂತೆ ಬಿಂಬಿಸಿದ ನಕಲಿ ವಿಡಿಯೊ ತುಣುಕನ್ನು ಸೈಬರ್ ಕಳ್ಳರು ಬಳಸಿಕೊಂಡು, ವೃದ್ಧರೊಬ್ಬರಿಗೆ ₹1 ಲಕ್ಷ ವಂಚನೆ ಮಾಡಿದ್ದಾರೆ.

ದೊಡ್ಡಬೊಮ್ಮಸಂದ್ರ ನಿವಾಸಿ ಎಂ.ಆರ್. ವೇಣು ಕುಮಾರ್ (64) ಅವರು ನೀಡಿದ ದೂರು ಆಧರಿಸಿ ವಿದ್ಯಾರಣ್ಯಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ಕಡಿಮೆ ಹಣ ಹೂಡಿದರೆ ತ್ವರಿತವಾಗಿ ಹೆಚ್ಚು ಲಾಭ ಗಳಿಸಬಹುದು' ಎಂಬ ಜಾಹೀರಾತನ್ನು ಆಗಸ್ಟ್ 27ರಂದು ವೇಣುಗೋಪಾಲ್ ಅವರು ಸಾಮಾಜಿಕ ಜಾಲತಾಣ ಯೂಟ್ಯೂಬ್‌ನಲ್ಲಿ ನೋಡಿದ್ದರು. ಅದರಲ್ಲಿ ನಿರ್ಮಲಾ ಸೀತಾರಾಮನ್ ಅವರು ಮಾತನಾಡುತ್ತಿರುವಂತೆ ಸೃಷ್ಟಿಸಿರುವ ವಿಡಿಯೊ ತುಣುಕನ್ನು ವಂಚಕರು ಬಳಸಿಕೊಂಡಿದ್ದರು. ಹಣ ಹೂಡಿಕೆ ಮಾಡಲು ನಿರ್ಧರಿಸಿದ ವೇಣುಕುಮಾರ್, ಸಂಬಂಧಿಸಿದ ಆ್ಯಪ್ ಡೌನ್‌ಲೋಡ್ ಮಾಡಿ ನೋಂದಣಿ ಮಾಡಿಕೊಂಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.



'ನೋಂದಣಿಯಾದ ತಕ್ಷಣ ಕರೆ ಮಾಡಿದ ಅಪರಿಚಿತ ವ್ಯಕ್ತಿ ತಾನು 'ಟ್ರೇಡಿಂಗ್ ಮ್ಯಾನೇಜರ್' ಎಂದು ಪರಿಚಯಿಸಿಕೊಂಡು, ₹22 ಸಾವಿರ ಹೂಡಿಕೆ ಮಾಡುವಂತೆ ತಿಳಿಸಿದ್ದ. ಆತನ ಸೂಚನೆಯಂತೆ ಆನ್‌ಲೈನ್ ಮೂಲಕ ಹಣ ಪಾವತಿಸಿದೆ. ಬಳಿಕ ವಿವಿಧ ಕಾರಣಗಳನ್ನು ನೀಡಿ ಹಂತ, ಹಂತವಾಗಿ ₹1.04 ಲಕ್ಷ ಹೂಡಿಕೆ ಮಾಡಿಸಿಕೊಂಡ ಸೈಬರ್ ಕಳ್ಳರು ಹಣ ನೀಡದೆ ವಂಚಿಸಿದ್ದಾರೆ' ಎಂದು ವೇಣುಗೋಪಾಲ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಜನರ ವಿಶ್ವಾಸ ಗಳಿಸಲು ಜನಪ್ರಿಯ ವ್ಯಕ್ತಿಗಳು ಅಥವಾ ಸರ್ಕಾರಿ ಅಧಿಕಾರಿಗಳನ್ನು ಒಳಗೊಂಡ ನಕಲಿ ವಿಡಿಯೊಗಳನ್ನು ವಂಚಕರು ಬಳಸುತ್ತಾರೆ. ಈ ವಿಡಿಯೊ ಗಳನ್ನು ನಂಬಿ ಹೂಡಿಕೆ ಮಾಡಿದರೆ, ತಮ್ಮ ಹಣವನ್ನು ಮರಳಿ ಪಡೆಯುವುದು ಅಸಾಧ್ಯ. ಹಣಕಾಸು, ಹೂಡಿಕೆ ಯೋಜನೆಗಳು ಅಥವಾ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಯಾವುದೇ ಪ್ರಕಟಣೆಗಳಿಗೆ ಕೇಂದ್ರದ ಅಧಿಕೃತ ಸರ್ಕಾರಿ ವೆಬ್‌ಸೈಟ್‌ಗಳನ್ನು ಗಮನಿಸುವುದು ಸೂಕ್ತ' ಎಂದು ಪೊಲೀಸರು ತಿಳಿಸಿದ್ದಾರೆ.

'ಈ ವಿಡಿಯೊ ನಕಲಿಯಾಗಿದ್ದು, ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿ ನಿರ್ಮಲಾ ಸೀತಾರಾಮನ್ ಅವರ ಧ್ವನಿಯನ್ನು ಅನುಕರಿ ಸಲಾಗಿದೆ. ಈ ಬಗ್ಗೆ ಸಾರ್ವಜನಿಕರು ಎಚ್ಚರ ವಹಿಸಬೇಕು' ಎಂದು ಮನವಿ ಮಾಡಿದ್ದಾರೆ.

ವ್ಯವಸ್ಥಾಪಕ ಸೇರಿ ಮೂವರ ವಿರುದ್ಧ ಪ್ರಕರಣ

ಬೆಂಗಳೂರು: ವಸತಿ ಗೃಹದಲ್ಲಿ ನಿಯಮ ಉಲ್ಲಂಘಿಸಿ ವಿದೇಶಿ ಪ್ರಜೆಗಳಿಗೆ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಿದ ಆರೋಪದಡಿ ನಗರದ ರಾಯಲ್ ಗ್ರ್ಯಾಂಡ್ ಲಾಡ್ಜ್ ವ್ಯವಸ್ಥಾಪಕ ಸೇರಿ ಮೂವರ ವಿರುದ್ಧ ಬಸವೇಶ್ವರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಿದೇಶಿ ಪ್ರಜೆಗಳಿಗೆ ಮನೆ, ಕಚೇರಿ, ವಸತಿ ಗೃಹ ಸೇರಿ ಇತರ ಕಡೆ ವಾಸ್ತವ್ಯ ನೀಡುವ ಮುನ್ನ ಎಫ್‌ಆರ್‌ಆರ್‌ಓ (ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ) ಅಥವಾ ಸ್ಥಳೀಯ ಪೊಲೀಸ್ ಠಾಣೆಗೆ 'ಸಿ' ಫಾರ್ಮ್ ಭರ್ತಿಯೊಂದಿಗೆ ಮಾಹಿತಿ ನೀಡಬೇಕೆಂಬ ನಿಯಮವಿದೆ. ಆದರೆ, ರಾಯಲ್ ಗ್ರ್ಯಾಂಡ್ ಲಾಡ್ಜ್‌ನವರು ನಿಯಮ ಪಾಲಿಸಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಬ್ರಿಟನ್ ಹಾಗೂ ಉತ್ತರ ಐರ್ಲೆಂಡ್‌ನ ಪ್ರಜೆಗಳಾದ ಮುಖೇಶ್ ಶಾಮ್ಜಿ ಗೊಹಿಲ್, ಅಲ್ಪಾಬೇನ್ ಗೊಹಿಲ್, ಕು.ಮಿಷಾ ಮುಖೇಶ್ ಗೊಹಿಲ್, ಅರನ್ ಮುಖೇಶ್ ಗೊಹಿಲ್ ಎಂಬುವರು ವಸತಿ ಗೃಹದಲ್ಲಿ ವಾಸವಾಗಿದ್ದರು ಎಂದು ಹೇಳಿದ್ದಾರೆ.

ಮೊಬೈಲ್ ಕಸಿದು ಪರಾರಿ



ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಯುವಕನ ಮೊಬೈಲ್ ಕಸಿದುಕೊಂಡು ಪರಾರಿಯಾಗಿರುವ ಘಟನೆ ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಒಡಿಶಾದ ಯುವಕ ಮಂಗಳರಾಜ್ ಅವರು ಕೆಲಸ ಮುಗಿಸಿ ಶನಿವಾರ ರಾತ್ರಿ 10.30ರ ಸುಮಾರಿನಲ್ಲಿ ಬಿಳಿ ಶಿವಾಲಯದ ಪೂರ್ವಂಕರ ಅಪಾರ್ಟ್‌ಮೆಂಟ್ ಮುಂಭಾಗದ ರಸ್ತೆಯಲ್ಲಿ ಮೊಬೈಲ್‌ನಲ್ಲಿ ಮಾತನಾಡುತ್ತ ಹೋಗುತ್ತಿದ್ದರು.

ಅದೇ ರಸ್ತೆಯಲ್ಲಿ ಹಿಂದಿನಿಂದ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು, ಮೊಬೈಲ್ ಕಸಿದುಕೊಂಡು ಪರಾರಿಯಾಗಿದ್ದಾರೆ. ಮಂಗಳರಾಜ್ ಅವರ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದು, ಘಟನೆ ನಡೆದ ರಸ್ತೆಯಲ್ಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾಗಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ.



ಬೆಂಗಳೂರಿನಿಂದ ಬಂದಿದ್ದ ವಿದ್ಯಾರ್ಥಿಗಳ ತಂಡ ರೈಲು ನಿಲ್ದಾಣದಲ್ಲಿ ತೆಗೆದ ಚಿತ್ರ

ಬುದ್ಧಿ ಮಾತು ಕೇಳದೆ ಪ್ರಾಣ ಬಿಟ್ಟರು

ಪ್ರಜಾವಾಣಿ ವಾರ್ತೆ

ಕುಂದಾಪುರ: ಬೆಂಗಳೂರಿನಿಂದ ಪ್ರವಾಸಕ್ಕಾಗಿ ಉಡುಪಿಗೆ ಬಂದಿದ್ದ 10 ವಿದ್ಯಾರ್ಥಿಗಳು ಪೊಲೀಸರು ಮತ್ತು ಸ್ಥಳೀಯರು ನೀಡಿದ್ದ ಎಚ್ಚರಿಕೆ, ಬುದ್ಧಿಮಾತನ್ನು ಕಡೆಗಣಿಸಿ ಭಾನುವಾರ ಸಮುದ್ರಕ್ಕೆ ಇಳಿದಿದ್ದರಿಂದ ಸಂಜೆ ಮೂವರು ಪ್ರಾಣ ಬಿಡುವಂತಾಯಿತು.

ಶನಿವಾರ ಸಂಜೆಯ ವೇಳೆಗೆ ಕುಂಭಾಶಿಗೆ ಬಂದಿದ್ದ ವಿದ್ಯಾರ್ಥಿಗಳ ತಂಡ, ಖಾಸಗಿ ಲಾಡ್ಜ್ ಒಂದರಲ್ಲಿ ತಂಗಿತ್ತು. ತಡ ರಾತ್ರಿಯವರೆಗೂ ಸಮುದ್ರ ತೀರದಲ್ಲಿ ಅಲೆದಾಡುತ್ತಿದ್ದ ವಿದ್ಯಾರ್ಥಿಗಳನ್ನು ಕಂಡಿದ್ದ ರಾತ್ರಿಯ ಗಸ್ತು ಕರ್ತವ್ಯದಲ್ಲಿ ಇದ್ದ ಕುಂದಾಪುರದ ಪೊಲೀಸ್ ಅಧಿಕಾರಿಯೊಬ್ಬರು ಗದರಿಸಿ, ಲಾಡ್ಜ್‌ಗೆ ಕಳುಹಿಸಿದ್ದರು ಎನ್ನಲಾಗಿದೆ.

ಭಾನವಾರ ಬೆಳಿಗ್ಗೆ 7.30ರ ವೇಳೆಗೆ 3- 4 ವಿದ್ಯಾರ್ಥಿಗಳು ಗೋಪಾಡಿಯ ಚರ್ಕಿಕಡು ಎಂಬಲ್ಲಿನ ಸಮುದ್ರ ಕಿನಾರೆಗೆ ಬಂದಿದ್ದರು. ಅವರ ಉತ್ಸಾಹವನ್ನು ಕಂಡಿದ್ದ ಸ್ಥಳೀಯರು, ಅಲ್ಲಿನ ಅಪಾಯಗಳ ಬಗ್ಗೆ ಎಚ್ಚರಿಕೆಯನ್ನೂ ನೀಡಿದ್ದರು. ಮಧ್ಯಾಹ್ನದ ವೇಳೆಗೆ ಲಾಡ್ಜ್‌ನಲ್ಲಿ ಇದ್ದ ಉಳಿದ ಸಂಗಡಿಗರನ್ನು ಅಲ್ಲಿಗೆ ಕರೆಸಿಕೊಂಡಿದ್ದ ವಿದ್ಯಾರ್ಥಿಗಳು ನೀರಿಗೆ ಇಳಿದಿದ್ದರು. ಉಪ್ಪು ನೀರು ಚರ್ಮಕ್ಕೆ ಅಲರ್ಜಿ ಆಗುತ್ತದೆ ಎನ್ನುವ ಕಾರಣದಿಂದ ಅಂಜನ್ ಎಂಬ ವಿದ್ಯಾರ್ಥಿ ನೀರಿಗೆ ಇಳಿದಿರಲಿಲ್ಲ.

ಬೆಳಿಗ್ಗೆಯಷ್ಟೇ ಯುವಕರಿಗೆ ಬುದ್ಧಿಮಾತು ಹೇಳಿ ಹೋಗಿದ್ದ ಸ್ಥಳೀಯ ಮೀನುಗಾರ ಉಮೇಶ್ ಅವರು ಮಧ್ಯಾಹ್ನ ಊಟ ಮಾಡುತ್ತಿದ್ದಾಗ (ಮಧ್ಯಾಹ್ನ 1.30ರ ಸುಮಾರಿಗೆ) ಬೊಬ್ಬೆ ಕೇಳಿಸಿದೆ. ಊಟವನ್ನು ಅರ್ಧಕ್ಕೆ ಬಿಟ್ಟು ಓಡಿ ಬಂದು ಇಬ್ಬರನ್ನು ರಕ್ಷಿಸಿದ್ದಾರೆ. ಸುದ್ದಿ ತಿಳಿದ ಸ್ವಲ್ಪ ಹೊತ್ತಿನಲ್ಲೇ ಸ್ಥಳಕ್ಕೆ ಬಂದ ಈಶ್ವರ್ ಮಲ್ಪೆ ತಂಡದವರು, ನೀರು ಪಾಲಾದ ಮೂವರು ವಿದ್ಯಾರ್ಥಿಗಳ ಶವವನ್ನು ಮೇಲಕ್ಕೆ ಎತ್ತಿದರು.

ವಿದೇಶಿ ಮಹಿಳೆಯರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕವಸ್ತು ಮಾರಾಟ ದಂಧೆಯಲ್ಲಿ ತೊಡಗಿದ್ದ ಆರೋಪದಡಿ ಇಬ್ಬರು ವಿದೇಶಿ ಮಹಿಳೆಯರನ್ನು ಈಶಾನ್ಯ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಘಾನಾದ ಬೆನಡಿಕ್ಟ್ (24) ಮತ್ತು ಲೈಬೀರಿಯಾದ ಪ್ರೆಸಿಲ್ಲಾ(28) ಬಂಧಿತರು. ಆರೋಪಿಗಳಿಂದ 831 ಗ್ರಾಂ ಮಾದಕ ವಸ್ತು ಹಾಗೂ ₹87 ಸಾವಿರ ನಗದು ಜಪ್ತಿ ಮಾಡಲಾಗಿದೆ. ಆರೋಪಿಗಳು ಬ್ಯುಸಿನೆಸ್ ವೀಸಾ ಪಡೆದು ಭಾರತಕ್ಕೆ ಬಂದಿದ್ದು, ವೀಸಾ ಅವಧಿ ಮುಗಿದಿದ್ದರೂ ನಗರದಲ್ಲಿ ನೆಲಸಿರುವುದು ಕಂಡು ಬಂದಿದೆ. ಈ ಇಬ್ಬರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಹಾಗೂ ವಿದೇಶಿಯರ ಕಾಯ್ದೆಯಡಿ ಪ್ರಕರಣ ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.



ಈಶಾನ್ಯ ವಿಭಾಗದ ಪೊಲೀಸರು ಜುಲೈ 7ರಂದು ಯಲಹಂಕ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯ ದೊಡ್ಡಬೆಟ್ಟಹಳ್ಳಿಯಲ್ಲಿ ಘಾನಾದ ಇಬ್ಬರು ಪ್ರಜೆಗಳನ್ನು ಬಂಧಿಸಿ, ಸುಮಾರು ₹70 ಲಕ್ಷ ಮೌಲ್ಯದ 700 ಗ್ರಾಂ ಎಂಡಿಎಂಎ ಮಾದಕವಸ್ತು ಜಪ್ತಿ ಮಾಡಿದ್ದರು. ಈ ಇಬ್ಬರು ಆರೋಪಿಗಳ ವಿಚಾರಣೆ ವೇಳೆ ಸಿಕ್ಕ ಮಾಹಿತಿ ಮೇರೆಗೆ ಮಾದಕವಸ್ತು ಮಾರಾಟ ದಂಧೆಯಲ್ಲಿ ತೊಡಗಿದ್ದ ಮತ್ತಿಬ್ಬರು ವಿದೇಶಿ ಮಹಿಳೆಯನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತನಿಖೆ ವೇಳೆ ಘಾನಾ ಮೂಲದ ಇಬ್ಬರು ಡ್ರಗ್ಸ್ ಪೆಡ್ಲರ್‌ಗಳ ಜತೆಗೆ 9 ಮಂದಿ ವಿದೇಶಿ ಪ್ರಜೆಗಳು ಸಂಪರ್ಕದಲ್ಲಿರುವುದು ಕಂಡು ಬಂದಿದೆ. ಈ ಮಾಹಿತಿ ಮೇರೆಗೆ ಸೆಪ್ಟೆಂಬರ್ 3ರಂದು ನಗರದ ಗುಂಜೂರು, ವರ್ತೂರು, ಬೇಗೂರು ಕೊಪ್ಪ ರಸ್ತೆ, ಗಾಂಧೀಪುರ ವೈಟ್‌ಫೀಲ್ಡ್, ಕೆ.ಆರ್.ಪುರದ ಮಾರಗೊಂಡನಹಳ್ಳಿ, ಈಜಿಪುರ, ಸಂಜಯನಗರ, ಎಂ.ಎಸ್.ಪಾಳ್ಯ ಕಡೆಗಳಲ್ಲಿ ದಾಳಿ ನಡೆಸಿ 9 ಮಂದಿ ವಿದೇಶಿ ಪ್ರಜೆಗಳನ್ನು ವಶಕ್ಕೆ ಪಡೆದಿದ್ದರು.

9 ಆರೋಪಿಗಳ ಪೈಕಿ ಘಾನಾದ ಬೆನಡಿಕ್ಟ್ ಮತ್ತು ಲೈಬೀರಿಯಾದ ಪ್ರೆಸಿಲ್ಲಾ ಮನೆಗಳಲ್ಲಿ 831 ಗ್ರಾಂ ಮಾದಕ ವಸ್ತುಗಳು ಪತ್ತೆಯಾಗಿವೆ. ದಾಳಿ ವೇಳೆ ಪತ್ತೆಯಾದ ಉಳಿದ ಏಳು ಮಂದಿ ವಿದೇಶಿ ಪ್ರಜೆಗಳು ವಿವಿಧ ಕಾರಣಗಳಿಗೆ ವೀಸಾ ಪಡೆದು ಭಾರತಕ್ಕೆ ಬಂದಿದ್ದು, ವೀಸಾ ಅವಧಿ ಮುಗಿದಿದ್ದರೂ ಅಕ್ರಮವಾಗಿ ನಗರದಲ್ಲಿ ನೆಲಸಿರುವುದು ಕಂಡು ಬಂದಿದೆ. ಹೀಗಾಗಿ ಅವರನ್ನು ವಶಕ್ಕೆ ಪಡೆದು ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಒ) ಅಧಿಕಾರಿಗಳ ಎದುರು ಹಾಜರುಪಡಿಸಿ, ಸ್ವದೇಶಕ್ಕೆ ಕಳುಹಿಸಲು ಕ್ರಮ ವಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೋಟೆಲ್ ಮೇಲೆ ದಾಳಿ: ಬಂಧನ

ಬೆಂಗಳೂರು: ಪಾರ್ಟಿ ಹೆಸರಿನಲ್ಲಿ ಮಾದಕ ವಸ್ತು ಸೇವನೆ ಮಾಡುತ್ತಿದ್ದ ಮಾಹಿತಿ ಮೇರೆಗೆ ನಗರದ ಪ್ರತಿಷ್ಠಿತ ಹೋಟೆಲ್ ಮೇಲೆ ಸಿಸಿಬಿ ಪೊಲೀಸರು ಶನಿವಾರ ರಾತ್ರಿ ದಿಢೀರ್ ದಾಳಿ ನಡೆಸಿದ್ದು, ಒಬ್ಬನನ್ನು ಬಂಧಿಸಲಾಗಿದೆ.

ಯುಬಿ ಸಿಟಿ ಪಕ್ಕದಲ್ಲಿರುವ ಪ್ರತಿಷ್ಠಿತ ಹೋಟೆಲ್ ಮೇಲೆ ತಡರಾತ್ರಿ 1 ಗಂಟೆ ಸುಮಾರಿಗೆ ಸಿಸಿಬಿಯ ಡಿಸಿಪಿ ರಾಜ ಇಮಾಮ್ ಖಾಸೀಂ ನೇತೃತ್ವದಲ್ಲಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಮತ್ತು ಕೇಂದ್ರ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿ ದಾಳಿ ನಡೆಸಿದ್ದಾರೆ.

ದಾಳಿ ವೇಳೆ ಸುಮಾರು 150ಕ್ಕೂ ಹೆಚ್ಚು ಯುವ ಜನರು ಪಾರ್ಟಿಯಲ್ಲಿ ಮದ್ಯದ ಅಮಲಿನಲ್ಲಿರುವುದು ಕಂಡು ಬಂದಿದೆ. ಮಧ್ಯರಾತ್ರಿ 1ರಿಂದ ಕಾರ್ಯಾಚರಣೆ ನಡೆಸಿ, ಎಲ್ಲರನ್ನೂ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಈ ವೇಳೆ ರಾಹುಲ್ (27) ಎಂಬಾತ ಮಾದಕ ವಸ್ತು ಸೇವನೆ ಮಾಡಿರುವುದು ಪತ್ತೆಯಾಗಿದೆ.

ತಕ್ಷಣ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ವೈದ್ಯಕೀಯ ಪರೀಕ್ಷೆಯ ವರದಿ ಆಧರಿಸಿ ಬಂಧಿಸಲಾಗಿದೆ. ಇತರರ ವೈದ್ಯಕೀಯ ಪರೀಕ್ಷಾ ವರದಿ ಬರಬೇಕಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಘಟನೆ ಸಂಬಂಧ ಹೋಟೆಲ್‌ನಲ್ಲಿ ಪಾರ್ಟಿ ಆಯೋಜನೆ ಮಾಡಿದ್ದ ಕಿರಣ್ ಹಾಗೂ ಅವಧಿ ಮೀರಿ ಸೇವೆ ಒದಗಿಸಿದ ಕಾರಣ ಹೋಟೆಲ್ ಆಡಳಿತ ಮಂಡಳಿ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಹಣ ದರ್ಶನಕ್ಕೆ ಮೋಡದ ಅಡ್ಡಿ



ನಗರದಲ್ಲಿ ಭಾನುವಾರ ಮೋಡಗಳ ನಡುವೆಯೇ ಕಂಡ ಖಗ್ರಾಸ ಚಂದ್ರಗ್ರಹಣದ ವಿವಿಧ ದೃಶ್ಯಗಳು
ಪ್ರಜಾವಾಣಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೋಡಕವಿದ ವಾತಾವರಣದ ನಡುವೆಯೂ ಚಂದ್ರಗ್ರಹಣವನ್ನು ವೀಕ್ಷಿಸಲು ನಗರದ ನಿವಾಸಿಗಳು ಭಾನುವಾರ ತಡರಾತ್ರಿ ವರೆಗೂ ಕೌತುಕದಿಂದ ಕಾದರು. ಬಹುತೇಕ ಕಡೆ ಮೋಡಗಳ ಮರೆಯಲ್ಲೇ ಕಂಡ ಗ್ರಹಣವನ್ನು ಕಣ್ತುಂಬಿಕೊಂಡು ಸಂಭ್ರಮಿಸಿದರು.

ಗ್ರಹಣದ ಸಮಯದಲ್ಲಿ ಮನೆಯ ಆವರಣ, ರಸ್ತೆ, ಚಾವಣಿ ಮೇಲೆ ನಿಂತು, ಗ್ರಹಣ ಪ್ರಕ್ರಿಯೆಯನ್ನು ಮಕ್ಕಳು ಸೇರಿದಂತೆ ವಿವಿಧ ವಯೋಮಾನದವರು ವೀಕ್ಷಿಸಿದರು. ಜವಾಹರಲಾಲ್ ನೆಹರೂ ತಾರಾಲಯ ಸೇರಿ ವಿವಿಧೆಡೆ ಗ್ರಹಣ ವೀಕ್ಷಣೆಗೆ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಗವಿ ಗಂಗಾಧರೇಶ್ವರ ಸೇರಿ ನಗರದ ವಿವಿಧ ದೇವಾಲಯಗಳಲ್ಲಿ ಭಾನುವಾರ ಬೆಳಿಗ್ಗೆ ವಿಶೇಷ ಪೂಜೆ ಸಲ್ಲಿಸಿ, ಬಾಗಿಲು ಮುಚ್ಚಲಾಯಿತು.

ವಿವಿಧ ಸಂಸ್ಥೆಗಳು ಸಹ ಗ್ರಹಣ ವೀಕ್ಷಣೆಗೆ ನಗರದ ವಿವಿಧೆಡೆ ಕಾರ್ಯಕ್ರಮ ಆಯೋಜಿಸಿದ್ದವು. ಉಪನ್ಯಾಸ, ರಸಪ್ರಶ್ನೆ, ಗ್ರಹಣದ ಮಾದರಿ ಪ್ರದರ್ಶನ ನಡೆದವು. ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಭಾನುವಾರ ಸಂಜೆ ವೇಳೆಗೆ ನೂರಾರು ಮಂದಿ ಜಮಾಯಿಸಿದ್ದರು. ಗ್ರಹಣ ವೀಕ್ಷಣೆಗೆ ದೂರದರ್ಶಕಗಳನ್ನು ಇರಿಸಲಾಗಿತ್ತು. ಗ್ರಹಣ ಪ್ರಕ್ರಿಯೆ ಬಗ್ಗೆ ಸಹ ಇದೇ ವೇಳೆ ನೆರೆದಿದ್ದವರಿಗೆ ವಿವರಿಸಲಾಯಿತು.

ವಿಜಯನಗರದಲ್ಲಿ ಯಂಗ್ ಇನ್ನೋವೇಟರ್ಸ್ ಎಜುಕೇಷನಲ್ ಸರ್ವಿಸಸ್ ಸಂಸ್ಥೆ, ಕೋರಮಂಗಲದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್, ಲಾಲ್‌ಬಾಗ್ ರಸ್ತೆಯಲ್ಲಿ ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ ಹಾಗೂ ರಾಜಾಜಿನಗರದಲ್ಲಿ ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿ ಗ್ರಹಣ ವೀಕ್ಷಣೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು.

ಮುಖ್ಯಾಂಶಗಳು

- ಜವಾಹರಲಾಲ್ ನೆಹರೂ ತಾರಾಲಯ ಸೇರಿ ವಿವಿಧೆಡೆ ವೀಕ್ಷಣೆ
- ದೇವಾಲಯಗಳಲ್ಲಿ ಪೂಜೆ ಬಳಿಕ ಬಾಗಿಲು ಬಂದ್

ಆಹಾರ ಸೇವಿಸಿ ಜಾಗೃತಿ

ಹಣ್ಣು, ಸಿಹಿ, ಹೋಳಿಗೆ, ಸಮೋಸ, ಮೊಟ್ಟೆ, ಬಿರಿಯಾನಿ ಸೇವಿಸುವ ಮೂಲಕ ಮೂಢನಂಬಿಕೆ ವಿರೋಧಿ ಒಕ್ಕೂಟ, ಪ್ರಗತಿಪರ ಸಂಘಟನೆಗಳ ಸದಸ್ಯರು ಪುರಭವನದ ಮುಂಭಾಗದಲ್ಲಿ ಭಾನುವಾರ ಚಂದ್ರಗ್ರಹಣ ವೀಕ್ಷಿಸಿದರು.

'ಸೂರ್ಯಗ್ರಹಣ, ಚಂದ್ರಗ್ರಹಣ ಆಕಾಶಕಾಯಗಳ ಸಹಜ, ನೈಸರ್ಗಿಕ ಪ್ರಕ್ರಿಯೆಗಳು. ಇಂತಹ ವೈಜ್ಞಾನಿಕ ಸನ್ನಿವೇಶಗಳನ್ನು ಮೂಢನಂಬಿಕೆಗಳ ಜತೆ ಬೆಸೆದು ಜನರನ್ನು ಹಾದಿ ತಪ್ಪಿಸಲಾಗುತ್ತಿದೆ. ಸಂಪ್ರದಾಯದ ಹೆಸರಿನಲ್ಲಿ ಮೌಢ್ಯ ಬಿತ್ತಲಾಗುತ್ತಿದೆ. ಮೂಢನಂಬಿಕೆ ತೊಲಗಬೇಕು, ವಿಜ್ಞಾನದ ಕುರಿತು ಜಾಗೃತಿ ಮೂಡಿಸಬೇಕು' ಎಂದು ಒಕ್ಕೂಟದ ಮುಖಂಡರಾದ ಟಿ. ನರಸಿಂಹಮೂರ್ತಿ, ಎಚ್.ಸಿ. ಉಮೇಶ್, ಯುವರಾಜ್, ಈ. ಬಸವರಾಜು, ಅಭಿಗೌಡ, ನಾಗೇಶ್ ಅರಳಕುಪ್ಪೆ, ಮಹಾದೇವಪ್ಪ ಹೇಳಿದರು.

ಜನರಿಗೂ ಆಹಾರ ಪದಾರ್ಥ, ತುಂಪುಪಾನೀಯ, ಕಾಫಿ ಹಂಚುವ ಮೂಲಕ ವೈಜ್ಞಾನಿಕ ಚಿಂತನೆಗಳನ್ನು ಅಳವಡಿಸಿಕೊಳ್ಳುವಂತೆ ಜನಜಾಗೃತಿ ಮೂಡಿಸಿದರು.

ಜಾಗೃತಿಗಾಗಿ ಸೈಕ್ಲೋಥಾನ್



ನಾರಾಯಣ ನೇತ್ರಾಲಯವು 40ನೇ ವರ್ಷದ ನೇತ್ರದಾನ ಪಾಕ್ಷಿಕದ ಪ್ರಯುಕ್ತ ನಗರದಲ್ಲಿ ಭಾನುವಾರ 'ರೈಡ್ ಫಾರ್ ಸೈಟ್' ಶೀರ್ಷಿಕೆಯಡಿ ಸೈಕ್ಲೋಥಾನ್ ನಡೆಸಿ, ಕಣ್ಣುಗಳ ದಾನದ ಬಗ್ಗೆ ಜಾಗೃತಿ ಮೂಡಿಸಿತು. ನಾರಾಯಣ ನೇತ್ರಾಲಯದ ನಿರ್ದೇಶಕ ಡಾ. ನರೇನ್ ಶೆಟ್ಟಿ ಪಾಲ್ಗೊಂಡಿದ್ದರು

ನಿಧನ ವಾರ್ತೆ

ದೇವಿದಾಸ್ ಶೇಟ್

ಸೂಲಿಬೆಲೆ (ಹೊಸಕೋಟೆ): ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಅವರ ತಂದೆ, ನಿವೃತ್ತ ಶಿಕ್ಷಕ ದೇವಿದಾಸ್ ಸುಬ್ರಾಯ್ ಶೇಟ್ (82) ಭಾನುವಾರ ನಿಧನರಾದರು.



ಕೆಲವು ದಿನಗಳಿಂದ ಅವರು ಶ್ವಾಸಕೋಶ ಸಮಸ್ಯೆಯಿಂದ ಬಳಲುತ್ತಿದ್ದರು. ಅವರಿಗೆ ಪತ್ನಿ, ಮಗ ಮತ್ತು ಮಗಳು ಇದ್ದಾರೆ. ಸೂಲಿಬೆಲೆಯಲ್ಲಿ ಭಾನುವಾರ ಅಂತ್ಯಕ್ರಿಯೆ ನಡೆಯಿತು.

ಕಾರವಾರ ಜಿಲ್ಲೆಯ ಹೊನ್ನಾವರದ ದೇವಿದಾಸ್ ಅವರು ಸೂಲಿಬೆಲೆಯ ಸ್ವಾಮಿ ವಿವೇಕಾನಂದ ಪ್ರೌಢಶಾಲೆಯಲ್ಲಿ 33 ವರ್ಷ ಕನ್ನಡ ಶಿಕ್ಷಕರಾಗಿದ್ದರು.

ಕುಂದು ಕೊರತೆ ಜನದನಿ




ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

'ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ'



ಬಿಟಿಎಂ ಲೇಔಟ್‌ನಿಂದ ಈಸ್ಟ್‌ಎಂಡ್ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ಜಲಭವನ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಬಿದ್ದಿದೆ. ಕಸದೊಂದಿಗೆ ಮಾಂಸದ ತುಂಡುಗಳನ್ನು ತಂದು ಹಾಕಲಾಗುತ್ತದೆ. ಇದರಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದ್ದು, ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿರುವ ಕಸವನ್ನು ವಿಲೇವಾರಿ ಮಾಡುವಂತೆ ಪಾಲಿಕೆ ಸಿಬ್ಬಂದಿಗೆ ಹೇಳಿದರೂ, ಸ್ಪಂದಿಸುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿರುವ ಕಸವನ್ನು ವಿಲೇವಾರಿ ಮಾಡಿ, ನಗರದ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ವಿ.ಎಸ್.ಕುಮಾರ್, ಬಿಟಿಎಂ ಲೇಔಟ್



'ಕೆಸರು ಗದ್ದೆಯಾದ ರಸ್ತೆ'

ಹೊರಮಾವು ಬಳಿ ಇರುವ ಬಂಜಾರ ಬಡಾವಣೆಯ ಓಂ ಶಕ್ತಿ ದೇವಸ್ಥಾನದ ಪಕ್ಕದಲ್ಲಿ ನಗರ ಪಾಲಿಕೆ ಕೊಳವೆ ಬಾವಿ ಕೊರೆಸಿದೆ. ಕೊರೆಯುವಾಗ ಹೊರಬಿದ್ದ ಮಣ್ಣಿನ ರಾಶಿಯನ್ನು ರಸ್ತೆಯ ಮೇಲೆ ಹಾಕಲಾಗಿದೆ. ಮಳೆ ಬಂದಾಗ ಇಡೀ ರಸ್ತೆ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಇದರಲ್ಲಿ ವಾಹನ ಸಂಚಾರ ಮಾಡುವುದೇ ದುಸ್ತರವಾಗಿದೆ. ರಸ್ತೆಯ ಮೇಲೆ ಹಾಕಿರುವ ಮಣ್ಣಿನ ರಾಶಿಯನ್ನು ಸಂಬಂಧಪಟ್ಟ ಅಧಿಕಾರಿಗಳು ವಿಲೇವಾರಿ ಮಾಡಬೇಕು.

ಇಂದಿರಾ, ಬಂಜಾರ ಬಡಾವಣೆ



'ಇಂದಿರಾ ಕ್ಯಾಂಟೀನ್‌ಗೆ ಮೂಲಸೌಲಭ್ಯ ಒದಗಿಸಿ'

ಹೆಬ್ಬಾಳದ ವಿ.ನಾಗೇನಹಳ್ಳಿಯ (ವಾರ್ಡ್ ಸಂಖ್ಯೆ 22) ಇಂದಿರಾ ಕ್ಯಾಂಟೀನ್‌ನಲ್ಲಿ ಮೂಲಸೌಲಭ್ಯಗಳು ಇಲ್ಲದಂತಾಗಿದೆ. ಕ್ಯಾಂಟೀನ್ ಹೊರಾಂಗಣಕ್ಕೆ ಹಾಕಿದ್ದ ಕಾಂಕ್ರೀಟ್ ಕಿತ್ತು ಹೋಗಿ, ಗುಂಡಿಗಳು ಬಿದ್ದಿವೆ. ಇದರಿಂದ ವೃದ್ಧರು, ಮಹಿಳೆಯರು ನಡೆದುಕೊಂಡು ಕ್ಯಾಂಟೀನ್‌ನ ಒಳಾಂಗಣಕ್ಕೆ ಪ್ರವೇಶಿಸಲು ಸಮಸ್ಯೆ ಆಗುತ್ತಿದೆ. ಇಲ್ಲಿ ಶುದ್ಧ ಕುಡಿಯುವ ನೀರಿನ ಸಮಸ್ಯೆ ಇದ್ದು, ಪಂಪ್‌ನಲ್ಲಿನ ಸಮಸ್ಯೆಯಿಂದಾಗಿ ಕೊಳವೆ ಬಾವಿಯಿಂದ ನೀರು ಪೂರೈಕೆ ಆಗಾಗ ಸ್ಥಗಿತವಾಗುತ್ತಿದೆ. ಪಾಲಿಕೆ ಅಧಿಕಾರಿಗಳು ಇಲ್ಲಿನ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು.

ರಮೇಶ್, ಹೆಬ್ಬಾಳ



'ರಸ್ತೆ ದುರಸ್ತಿಗೊಳಿಸಿ'

ಮೆಜೆಸ್ಟಿಕ್ ಪ್ರದೇಶಕ್ಕೆ ಹೊಂದಿಕೊಂಡಿರುವ ಆಸ್ಪತ್ರೆ ರಸ್ತೆಯ ಉದ್ದಕ್ಕೂ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ರಸ್ತೆ ದುರಸ್ತಿಗೊಳಿಸುವಂತೆ ಪಾಲಿಕೆ ಸಿಬ್ಬಂದಿಗೆ ಹಲವಾರು ಬಾರಿ ದೂರು ನೀಡಿದರೂ ಸ್ಪಂದಿಸುತ್ತಿಲ್ಲ.

ಶಿವಪ್ರಸಾದ್ ಎಸ್, ಗಾಂಧಿನಗರ

ಬ್ರಹ್ಮ ಶ್ರೀ ನಾರಾಯಣ ಗುರು ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಈಡಿಗ-ಬಿಲ್ಲವ ನಿಗಮ ಅನುಷ್ಠಾನ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಡಿಗ, ಬಿಲ್ಲವ ಸಮುದಾಯದ ಬೇಡಿಕೆಯಂತೆ ಪ್ರತ್ಯೇಕ ಅಭಿವೃದ್ಧಿ ನಿಗಮದ ಆರಂಭಕ್ಕೆ ಆದಷ್ಟು ಬೇಗ ಕ್ರಮ ವಹಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಬ್ರಹ್ಮ ಶ್ರೀ ನಾರಾಯಣ ಗುರು ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಎರಡು ವರ್ಷದ ಹಿಂದೆಯೇ ಪ್ರತ್ಯೇಕ ನಿಗಮ ರಚನೆ ಘೋಷಣೆ ಆಗಿದೆ. ಇದಕ್ಕಾಗಿ ₹10 ಕೋಟಿ ತೆಗೆದಿರಿಸಲಾಗಿದೆ. ಆದರೆ ಕಂಪನಿ ಕಾಯ್ದೆ ಪ್ರಕಾರ ನೋಂದಣಿ ಆಗುವುದು ವಿಳಂಬವಾಗಿದ್ದರಿಂದ ನಿಗಮ ಪ್ರತ್ಯೇಕವಾಗಿ ಕಾರ್ಯನಿರ್ವಹಿಸಲು ತೊಡಕಾಗಿದೆ ಎಂದು ಹೇಳಿದರು.



ನಗರದಲ್ಲಿ ಆಯೋಜಿಸಿದ್ದ ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮದಲ್ಲಿ ಮಧು ಬಂಗಾರಪ್ಪ, ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ ಮತ್ತು ಎಚ್.ಎಂ. ರೇವಣ್ಣ ಅವರು ಬ್ರಹ್ಮಶ್ರೀ ನಾರಾಯಣಗುರು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

'ಸಮುದಾಯದಿಂದಲೇ ಪ್ರತ್ಯೇಕ ವೈದ್ಯಕೀಯ, ಎಂಜಿನಿಯರಿಂಗ್ ಕಾಲೇಜು ಆರಂಭ, ಹಾಸ್ಟೆಲ್‌ಗೆ ಜಾಗ, ಅನುದಾನ ಸೇರಿದಂತೆ ಒಂಬತ್ತು ಬೇಡಿಕೆಗಳಲ್ಲಿ ಐದು ಬೇಡಿಕೆಗೆ ಸಮ್ಮತಿ ನೀಡಲಾಗಿದೆ. ಈ ಕುರಿತ ಆದೇಶ ಜಾರಿಗೊಳಿಸಲು ಗಮನ ವಹಿಸುವೆ' ಎಂದು ಭರವಸೆ ನೀಡಿದರು.

'ನಮ್ಮ ಸರ್ಕಾರ 28 ತಿಂಗಳಿನಲ್ಲಿ ಗ್ಯಾರಂಟಿ ಯೋಜನೆಗಳಿಗೆ ₹1 ಲಕ್ಷ ಕೋಟಿ ವಿನಿಯೋಗ ಮಾಡಿದೆ. ಒಂದೇ ಜಾತಿಗಾಗಿ ಈ ಯೋಜನೆಗಳನ್ನು ಜಾರಿಗೊಳಿಸಿಲ್ಲ. ಎಲ್ಲ ಜಾತಿ, ಧರ್ಮದವರಲ್ಲದೇ ಎಲ್ಲ ಪಕ್ಷದವರೂ ಉಪಯೋಗ ಪಡೆಯುತ್ತಿದ್ದಾರೆ. ಜಾತಿಗಿಂತ ನೀತಿ ಮೂಲಕ ಯೋಜನೆ ಜಾರಿಗೊಳಿಸುತ್ತಿದ್ದೇವೆ. ನನ್ನ ರಾಜಕೀಯ ಜೀವನವೇ ಸಾಮಾಜಿಕ ನ್ಯಾಯ ಜಾರಿಗೆ ಮೀಸಲಾಗಿದೆ' ಎಂದು ಸಿದ್ದರಾಮಯ್ಯ ನುಡಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಜಾತಿ ತಾರತಮ್ಯ ಮಾಡದೇ ಪ್ರತಿಯೊಬ್ಬರೂ ಗೌರವದಿಂದ ಬದುಕುವಂತಾಗಬೇಕು ಎಂದು ನಾರಾಯಣಗುರುಗಳು ಹೋರಾಡಿದರು. ಅವರ ಚಿಂತನೆಗಳು ಬರೀ ಮಾತಿಗೆ ಸೀಮಿತವಾಗದೇ ಸಮಾಜದ ಬದಲಾವಣೆಗೆ ದಾರಿ ಮಾಡಿಕೊಡಲಿ' ಎಂದರು.

ಉಪನ್ಯಾಸ ನೀಡಿದ ಪತ್ರಕರ್ತ ದಿನೇಶ್ ಅಮಿನ್ ಮಟ್ಟು, 'ನಾರಾಯಣ ಗುರುಗಳು ಹುಟ್ಟು ಹಾಕಿದ ಸಾಮಾಜಿಕ, ಆರ್ಥಿಕ ಹೋರಾಟದ ಕ್ರಾಂತಿಯ ಫಲ ಕೇರಳಕ್ಕೆ ಮಾತ್ರವಲ್ಲದೇ ಕರ್ನಾಟಕಕ್ಕೂ ಸಿಕ್ಕಿದೆ. ಬರೀ ಧಾರ್ಮಿಕ ಹೋರಾಟದ ಬದಲು ಅಹಿಂದ ವರ್ಗಗಳಿಗೆ ಬಲ ತುಂಬಿ ಅವರ ಬದುಕಿನಲ್ಲಿ ಬದಲಾವಣೆ ಮಾಡಿದ್ದು, ಹಲವು ಸಮುದಾಯಗಳಿಗೆ ಬಲ ತುಂಬಿದೆ' ಎಂದರು.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ ಅವರು ಸಮುದಾಯದ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡಿದರು.

ಸೋಲೂರಿನ ಆರ್ಯ ಈಡಿಗ ಮಹಾಸಂಸ್ಥಾನದ ವಿಖ್ಯಾತಾನಂದ ಸ್ವಾಮೀಜಿ, ನಿಟ್ಟೂರು ಮಠದ ರೇಣುಕಾನಂದ ಸ್ವಾಮೀಜಿ, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ, ಬಿಲ್ಲವ ಸಮಾಜದ ಅಧ್ಯಕ್ಷ ಎಂ.ವೇದಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎಂ.ವಿ.ವೆಂಕಟೇಶ್, ನಿರ್ದೇಶಕಿ ಕೆ.ಎಂ.ಗಾಯತ್ರಿ ಹಾಜರಿದ್ದರು.

ಸಮಗ್ರ ಕೃಷಿ ವಿ.ವಿ ಸ್ಥಾಪನೆಗೆ ಶಿಫಾರಸು

ಟಿ.ಎಂ.ವಿಜಯ ಭಾಸ್ಕರ್ ನೇತೃತ್ವದ ತಜ್ಞರ ಸಮಿತಿಯಿಂದ ರಾಜ್ಯ ಸರ್ಕಾರಕ್ಕೆ ವರದಿ

• ಕೆ.ಎಂ.ಸಂತೋಷ್‌ಕುಮಾರ್

ಮೈಸೂರು: ರಾಜ್ಯದಲ್ಲಿ ಸಮಗ್ರ ಕೃಷಿ ವಿಶ್ವವಿದ್ಯಾಲಯಗಳ ಸ್ಥಾಪನೆ ಸಂಬಂಧ ತಜ್ಞರ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಕೃಷಿ ವಿಶ್ವವಿದ್ಯಾಲಯಗಳ ಸಮಗ್ರೀಕರಣ ಮತ್ತು ಪುನರ್ ಸಂಯೋಜನೆಯನ್ನು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲು ಶಿಫಾರಸು ಮಾಡಿದೆ.

ಸಮಗ್ರ ಕೃಷಿ ವಿಶ್ವವಿದ್ಯಾಲಯಗಳ ಸ್ಥಾಪನೆ ಸಾಧ್ಯತೆ ಕುರಿತು ಪರಿಶೀಲಿಸಲು ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ ಭಾಸ್ಕರ್ ಅವರ ಅಧ್ಯಕ್ಷತೆಯಲ್ಲಿ ಸರ್ಕಾರ ತಜ್ಞರ ಸಮಿತಿ ರಚಿಸಿತ್ತು. ಈ ಸಮಿತಿ ಮೂರು ದಿನದ ಹಿಂದೆಯಷ್ಟೇ ವರದಿ ಸಲ್ಲಿಸಿದೆ.

ಮುಖ್ಯಾಂಶಗಳು
- ಮೊದಲು ಸೌಕರ್ಯ ಮತ್ತು ಸಿಬ್ಬಂದಿ ಒದಗಿಸಿ
- ಒಂದೇ ಸ್ಥಳದಲ್ಲಿ ಬಹುವಿಷಯಗಳ ಪರಿಣತಿ ಸಿಗಲಿ
- ಕೃಷಿ ವಿ.ವಿ., ಅಧ್ಯಾಪಕರು, ವಿದ್ಯಾರ್ಥಿಗಳಿಂದ ಅಭಿಪ್ರಾಯ ಸಂಗ್ರಹ

ಮೊದಲ ಹಂತದಲ್ಲಿ ಕೃಷಿ, ತೋಟಗಾರಿಕೆ, ಅರಣ್ಯ, ರೇಷ್ಮೆ ಕೃಷಿ ವಿಷಯಗಳನ್ನೊಳಗೊಂಡ ಕೃಷಿ-ತೋಟಗಾರಿಕೆ ವಿಶ್ವವಿದ್ಯಾಲಯಗಳನ್ನು ಜಿಲ್ಲಾವಾರು ವ್ಯಾಪ್ತಿಯೊಳಗೆ ‘ಆರು ಸಮಗ್ರ ಕೃಷಿ ವಿಶ್ವವಿದ್ಯಾಲಯ’ಗಳಾಗಿ ಸಂಯೋಜಿಸಲು ತಜ್ಞರು ಶಿಫಾರಸು ಮಾಡಿದ್ದಾರೆ.

> **ಕೇರಳ, ತಮಿಳುನಾಡು ಸೇರಿ ಹಲವು ರಾಜ್ಯಗಳಲ್ಲಿ ಕೃಷಿ-ತೋಟಗಾರಿಕೆ ವಿಶ್ವವಿದ್ಯಾಲಯಗಳು ಒಟ್ಟಿಗೆ ಇವೆ. ನಮ್ಮಲ್ಲೂ ಒಂದೇ ಸೂರಿನಡಿ ತರಲು ಹೇಳಿದ್ದೇವೆ. ಇದರಿಂದ ಸರ್ಕಾರ, ರೈತರು, ವಿದ್ಯಾರ್ಥಿಗಳಿಗೆ ಅನುಕೂಲ**
> **ಟಿ.ಎಂ. ವಿಜಯ ಭಾಸ್ಕರ್**
> ತಜ್ಞರ ಸಮಿತಿ ಅಧ್ಯಕ್ಷ

> **ದೇಶದಲ್ಲಿ ಭೂ ಹಿಡುವಳಿ ಕಡಿಮೆ ಇದೆ. ಏಕ ಬೆಳೆ ನಂಬಲಾಗದು. ಸಮಗ್ರ ಕೃಷಿ ಅನಿವಾರ್ಯವಾಗಿದೆ. ರೈತರಿಗೆ ಒಂದೇ ಸೂರಿನಡಿ ಸಮಗ್ರ ಮಾಹಿತಿ ಕಲ್ಪಿಸಲು ಅಂಥ ವಿಶ್ವವಿದ್ಯಾಲಯಗಳು ಇರಬೇಕು**
> **ಎಸ್.ವಿ. ಸುರೇಶ್**
> ಸಮಿತಿ ಸಂಚಾಲಕ, ಕುಲಪತಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ

ಎರಡನೇ ಹಂತದಲ್ಲಿ, ಭಾರತೀಯ ಪಶುವೈದ್ಯಕೀಯ ಮಂಡಳಿ (ವಿಸಿಐ) ಮಾನದಂಡಗಳ ಪ್ರಕಾರ, ಮೂಲಸೌಕರ್ಯ, ಬೋಧಕ ಸಿಬ್ಬಂದಿ ಒದಗಿಸಿದ ನಂತರ, ಪುನರ್ ರಚಿಸುವ ವಿಶ್ವವಿದ್ಯಾಲಯಗಳ ಜೊತೆಗೇ ಪಶುವೈದ್ಯಕೀಯ, ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ವಿಜ್ಞಾನ ಕಾಲೇಜುಗಳನ್ನು ಸಮಗ್ರೀಕರಿಸಬಹುದು ಎಂದು ಸಲಹೆ ಮಾಡಿದೆ.

ಸಮಗ್ರ ಕೃಷಿ ವಿಶ್ವವಿದ್ಯಾಲಯಗಳ ಸ್ಥಾಪನೆಯು ರಾಜ್ಯದಲ್ಲಿ ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಯನ್ನು ಬಲಪಡಿಸುವ ದಿಕ್ಕಿನಲ್ಲಿ ಮಹತ್ವಪೂರ್ಣ ಹೆಜ್ಜೆಯಾಗಲಿದೆ. ರೈತರಿಗೆ ಆಧುನಿಕ ಕೃಷಿ ಪದ್ಧತಿಯ ಸವಾಲುಗಳಿಗೂ ಇದರಿಂದ ಸಮಗ್ರ ಪರಿಹಾರ ಸಿಗಲಿದೆ. ಆಧುನಿಕ ಕೃಷಿಯಲ್ಲಿ ರೈತರ ಆದಾಯ ಸುಧಾರಿಸಲು ಮತ್ತು ವೆಚ್ಚ ತಗ್ಗಿಸಲು ಒಂದೇ ಸ್ಥಳದಲ್ಲಿ ಬಹು-ವಿಷಯಗಳ ಪರಿಣತಿ ಒದಗಿಸುವ ಅಗತ್ಯವಿದೆ ಎಂದು ತಜ್ಞರ ಸಮಿತಿ ಪ್ರತಿಪಾದಿಸಿದೆ.

ಪ್ರಮುಖ ಶಿಫಾರಸುಗಳು
- ಪ್ರತಿ ಸಮಗ್ರ ವಿಶ್ವವಿದ್ಯಾಲಯದಲ್ಲಿ ವಿಶೇಷ ತೋಟಗಾರಿಕೆ ವಿಭಾಗಗಳನ್ನು ರಚಿಸಬೇಕು
- ಬೆಳೆ, ನಿರ್ದಿಷ್ಟ-ವಿಷಯ ಸಂಶೋಧನೆಗೆ ಸಂಶೋಧನಾ ಕೇಂದ್ರ ಸ್ಥಾಪಿಸಿ
- ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ವಿಸ್ತರಣಾ ಘಟಕಗಳನ್ನು ಬಹು ವಿಷಯಗಳ ರೈತ ತರಬೇತಿ ಕೇಂದ್ರಗಳನ್ನಾಗಿಸಬೇಕು
- ಕೃಷಿ, ತೋಟಗಾರಿಕೆ, ಪಶು ಸಂಗೋಪನಾ ಇಲಾಖೆಗಳ ಜಂಟಿ ಮೇಲ್ವಿಚಾರಣೆಯಲ್ಲಿ ಸಮನ್ವಯ ಬಲಪಡಿಸಬೇಕು

ತಜ್ಞರ ಸಮಿತಿ ಈ ವರ್ಷದ ಏಪ್ರಿಲ್‌ನಿಂದ ಜೂನ್‌ವರೆಗೆ ರಾಜ್ಯದ ಎಲ್ಲ ಕೃಷಿ ವಿ.ವಿ.ಗಳು, 18 ಮಹಾವಿದ್ಯಾಲಯಗಳು, 16 ಕೃಷಿ ಸಂಶೋಧನಾ ಕೇಂದ್ರಗಳು, 11 ಕೃಷಿ ವಿಜ್ಞಾನ ಕೇಂದ್ರಗಳಿಗೆ (ಕೆವಿಕೆ) ಭೇಟಿ ನೀಡಿ, 2600ಕ್ಕೂ ಹೆಚ್ಚು ವಿದ್ಯಾರ್ಥಿಗಳು, 900 ಅಧ್ಯಾಪಕರು, 350 ರೈತರು, 38 ಕೈಗಾರಿಕಾ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿತ್ತು. ಕುಲಪತಿಗಳು, ವಿಶ್ರಾಂತ ಕುಲಪತಿಗಳು, ಇಲಾಖಾ ಕಾರ್ಯದರ್ಶಿಗಳೊಂದಿಗೂ ಚರ್ಚಿಸಿತ್ತು.

ಸುದ್ದಿ 2 ನಿಮಿಷ

‘ಮೋದಿ ದೇಶದ ಪಾಲಿನ ಶತ್ರು’

ಕಲಬುರಗಿ: ‘ಮೋದಿ–ಟ್ರಂಪ್ ಸ್ನೇಹಿತರಾಗಿರಬಹುದು. ಆದರೆ, ಮೋದಿ ದೇಶದ ಪಾಲಿನ ಶತ್ರುವಾದರು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

ಭಾನುವಾರ ನಗರದಲ್ಲಿ ತಮ್ಮ ನಿವಾಸದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ನರೇಂದ್ರ ಮೋದಿ ಅವರಿಗೆ ತಾನು ಏನು ಮಾಡಿದರೂ ನಡೆಯುತ್ತದೆ ಎಂಬ ಅಹಂಕಾರವಿದೆ’ ಎಂದು ಟೀಕಿಸಿದರು.

‘ಟ್ರಂಪ್ ಪರ ಮೋದಿ ಪ್ರಚಾರ ಮಾಡಿದರು. ಆದರೆ, ಟ್ರಂಪ್ ಸುಂಕಾಸ್ತ್ರದಿಂದ ದೇಶಕ್ಕೆ ತೊಂದರೆ ಆಯಿತು. ಹಿಂದಿನಂತೆಯೇ ಭಾರತ ಅಲಿಪ್ತ ನೀತಿ ಅನುಸರಿಸಿದ್ದರೆ ಅಮೆರಿಕದ ಸುಂಕಾಸ್ತ್ರ, ಚೀನಾದ ಅತಿಕ್ರಮಣ ಎದುರಿಸುತ್ತಿರಲಿಲ್ಲ’ ಎಂದು ಅಭಿಪ್ರಾಯಪಟ್ಟರು.



‘ಜಿಎಸ್‌ಟಿ ಸ್ಲ್ಯಾಬ್ ಪರಿಷ್ಕರಣೆಯಿಂದ ಬಡವರಿಗೆ ಅನುಕೂಲವಾಗಲಿದೆ. ಇದನ್ನು ಟೀಕಿಸುವುದಿಲ್ಲ. ಆದರೆ, ಜಿಎಸ್‌ಟಿ ಇಳಿಸುವಂತೆ ನಾವು ಎಂಟು ವರ್ಷಗಳ ಹಿಂದೆಯೇ ಹೇಳಿದ್ದೆವು. ಅವರು ನಿರ್ಲಕ್ಷ್ಯಿಸಿದ್ದರು. ಈಗ ದಿಢೀರ್ ಆಗಿ ಜಿಎಸ್‌ಟಿ ಯಾಕೆ ಪರಿಷ್ಕರಿಸುತ್ತಿದ್ದಾರೆ ಎಂಬುದು ಮೋದಿ ಅವರಿಗೇ ಗೊತ್ತು’ ಎಂದರು.

ಅಕ್ರಮ ಗಣಿ: ವಸೂಲಾತಿ ಕಮಿಷನರ್ ನೇಮಕಕ್ಕೆ ಒತ್ತಾಯ

ಧಾರವಾಡ: ‘ಅಕ್ರಮ ಗಣಿಗಾರಿಕೆಯಿಂದ ಆಗಿರುವ ನಷ್ಟ ವಸೂಲಾತಿಗೆ (ರಿಕವರಿ) ಕಮಿಷನರ್ ನೇಮಿಸಲು ತಕ್ಷಣ ಕ್ರಮ ವಹಿಸಬೇಕು’ ಎಂದು ಸಮಾಜ ಪರಿವರ್ತನ ಸಮುದಾಯದ ಸಂಸ್ಥಾಪಕ ಅಧ್ಯಕ್ಷ ಎಸ್.ಆರ್. ಹಿರೇಮಠ ಸರ್ಕಾರಕ್ಕೆ ಒತ್ತಾಯಿಸಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ‘ಗಣಿ ಅಕ್ರಮಗಳ ಪರಿಶೀಲನೆಗೆ ನೇಮಿಸಿದ್ದ ಅಧ್ಯಕ್ಷ ಎಚ್.ಕೆ.ಪಾಟೀಲ ಅಧ್ಯಕ್ಷತೆಯ ಸಚಿವ ಸಂಪುಟದ ಉಪಸಮಿತಿಯು ಸರ್ಕಾರಕ್ಕೆ ವರದಿ ನೀಡಿದ್ದು, ಅದರಂತೆ ಸರ್ಕಾರ ಕಾರ್ಯಪ್ರವೃತವಾಗಬೇಕು’ ಎಂದು ಒತ್ತಾಯಿಸಿದರು.

ಎಸ್.ಎಸ್.ಮಲ್ಲಿಕಾರ್ಜುನ್ ಬದಲಾಯಿಸಿ: ಗಣಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ 13 ಡಂಪ್‌ಗಳನ್ನು ಹರಾಜು ಮಾಡಿಸಿದ್ದಾರೆ. ಸುಪ್ರೀಂ ಕೋರ್ಟ್ ಆದೇಶಗಳನ್ನು ಉಲ್ಲಂಘಿಸಿದ್ದಾರೆ ಎಂದು ಎಸ್.ಆರ್.ಹಿರೇಮಠ ಇದೇ ವೇಳೆ ಆರೋಪಿಸಿದರು.

‘ಎಸ್.ಎಸ್.ಮಲ್ಲಿಕಾರ್ಜುನ ಅವರನ್ನು ಗಣಿ ಖಾತೆಯಿಂದ ಬದಲಾಯಿಸಬೇಕು. ಪ್ರಾಮಾಣಿಕ ಮತ್ತು ದಕ್ಷ ವ್ಯಕ್ತಿಯನ್ನು ಗಣಿ ಸಚಿವರಾಗಿ ನೇಮಿಸಬೇಕು’ ಎಂದೂ ಆಗ್ರಹಿಸಿದರು.

ಚಿಟಿಕೆ ಸುದ್ದಿ

ಕಡಲಿಗಿಳಿದ ಮೂವರು ವಿದ್ಯಾರ್ಥಿಗಳು ನೀರುಪಾಲು

ಕುಂದಾಪುರ: ತಾಲ್ಲೂಕಿನ ಗೋಪಾಡಿಯ ಚರ್ಕಿಕಡು ಎಂಬಲ್ಲಿ ಸಮುದ್ರಕ್ಕಿಳಿದ್ದ ಬೆಂಗಳೂರಿನ ಮೂವರು ವಿದ್ಯಾರ್ಥಿಗಳು ಅಲೆಗಳ ಸೆಳೆತಕ್ಕೆ ಸಿಕ್ಕಿ ಭಾನುವಾರ ಮೃತಪಟ್ಟಿದ್ದಾರೆ. ಇಬ್ಬರನ್ನು ಸ್ಥಳೀಯರು ರಕ್ಷಿಸಿದ್ದಾರೆ.

ಗೌತಮ್ (19), ಲೋಕೇಶ್ (19), ಆಶಿಶ್ (18) ಮೃತರು. ಇಬ್ಬರು ವಿದ್ಯಾರ್ಥಿಗಳನ್ನು ಸ್ಥಳೀಯ ಮೀನುಗಾರ ಉಮೇಶ್ ರಕ್ಷಿಸಿದ್ದು, ಒಬ್ಬನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈಶ್ವರ ಮಲ್ಪೆ ಅವರ ತಂಡ ಮೂವರ ಮೃತ ದೇಹಗಳನ್ನು ಸಮುದ್ರದಿಂದ ಮೇಲಕ್ಕೆತ್ತಿದೆ.

ಬೆಂಗಳೂರಿನ ಪಿ.ಎಸ್. ಹಾಗೂ ಇತರ ಕಾಲೇಜಿನ ಒಟ್ಟು 10 ವಿದ್ಯಾರ್ಥಿಗಳು ರೈಲಿನ ಮೂಲಕ ಶುಕ್ರವಾರ ಉಡುಪಿಗೆ ಬಂದಿದ್ದರು. ತಂಡದಲ್ಲಿ ಗುಜರಾತ್, ನೇಪಾಳ ಮೂಲದ ವಿದ್ಯಾರ್ಥಿಗಳು ಸಹ ಇದ್ದರು ಎಂದು ತಿಳಿದುಬಂದಿದೆ.

‘ಇವಿಎಂ ವಿರೋಧ ಮೂರ್ಖತನ’

ಬೆಂಗಳೂರು: ಇವಿಎಂಗಳ ಮೂಲಕ ನಡೆದ ಚುನಾವಣೆಯಲ್ಲೇ ಗೆದ್ದಿರುವ ಕಾಂಗ್ರೆಸ್, ಈಗ ಅದನ್ನೇ ಪ್ರಶ್ನಿಸುತ್ತಿರುವುದು ಮೂರ್ಖತನದ ಪರಮಾವಧಿ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದರು.



ವಿಜಯೇಂದ್ರ

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ಮೋದಿ ಅವರಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂಬುದನ್ನು ದೇಶದ ಜನ ಒಪ್ಪಿದ್ದಾರೆ. ಆದರೆ ರಾಹುಲ್ ಗಾಂಧಿ ಅವರಿಗೆ ಒಪ್ಪಲಾಗುತ್ತಿಲ್ಲ. ಹೀಗಾಗಿಯೇ ಇವಿಎಂ ಅನ್ನು ದೂರುತ್ತಿದ್ದಾರೆ’ ಎಂದರು.

‘ಬ್ಯಾಲಟ್ ಪೇಪರ್‌ಗೆ ಬಿಜೆಪಿ ಹೆದರುವುದಿಲ್ಲ. ಸತತ ಮೂರು ಬಾರಿ ಗೆದ್ದಿದ್ದೇವೆ. ದೇಶದ ಜನರೇ ನಮ್ಮನ್ನು ಆರಿಸಿರುವಾಗ ಯಾವುದಕ್ಕೂ ಹೆದರಬೇಕಾಗಿಲ್ಲ. ಮೋದಿ ಅವರು ಚುನಾವಣೆಗಳಲ್ಲಿ ಹಣ–ಸಮಯ ವ್ಯರ್ಥವಾಗಬಾರದು ಎಂದು ‘ಒಂದು ದೇಶ–ಒಂದು ಚುನಾವಣೆ’ ಜಾರಿಗೆ ತರಲು ಹೊರಟಿದ್ದರೆ, ರಾಜ್ಯದ ಕಾಂಗ್ರೆಸ್ ಸರ್ಕಾರ ಪುರಾತನ ಕಾಲಕ್ಕೆ ಮರಳುತ್ತಿದೆ’ ಎಂದರು.

> **ಮತಯಂತ್ರ ಅಥವಾ ಮತಪತ್ರ ಬಳಕೆ ಮಾಡಬಹುದೆಂದು ಬಿಜೆಪಿ ಮಾಡಿದ್ದ ಕಾನೂನಿನಲ್ಲಿದೆ. ಕಾನೂನು ಪ್ರಕಾರ ನಡೆದರೆ ತಪ್ಪೇನಿದೆ**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

₹ 1.90 ಕೋಟಿ ಅಕ್ರಮ: ಐವರ ವಿರುದ್ಧ ಎಫ್‌ಐಆರ್

ಯಾದಗಿರಿ: ಜಲಜೀವನ್ ಮಿಷನ್ ಕಾಮಗಾರಿಯಲ್ಲಿ ಅವ್ಯವಹಾರ ಆರೋಪದಡಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್ (ಎಇ) ಸೇರಿ ಐವರ ವಿರುದ್ಧ ಯಾದಗಿರಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿ ವೆಂಕಟೇಶ ಚಟ್ನಳ್ಳಿ ದೂರು ನೀಡಿದ್ದರು. ಎಇ ಆನಂದ, ಎಇಇ ಬನ್ನಪ್ಪ, ಶಹಾಪುರ ಉಪವಿಭಾಗದ ಹೆಚ್ಚುವರಿ ಪ್ರಭಾರ ಸಹಾಯಕ ಎಂಜಿನಿಯರ್–2 ಎನ್.ಶ್ರೀನಿವಾಸ, ಗುತ್ತಿಗೆದಾರ ವೆಂಕಟೇಶ ಗುರಸಣಗಿ ಮತ್ತು ಥರ್ಡ್ ಪಾರ್ಟಿ ಸಂಸ್ಥೆ ಬೆಂಗಳೂರಿನ ಟ್ರಾನ್ಸ್‌ಪೋರ್ಟೆಕ್ ವಿರುದ್ಧ ಪ್ರಕರಣ ದಾಖಲಾಗಿದೆ.

‘ಗುತ್ತಿಗೆದಾರ ₹ 1.45 ಕೋಟಿ ಮೊತ್ತದ ಕಾಮಗಾರಿ ಮಾಡಿದ್ದರೂ ಹೆಚ್ಚುವರಿಯಾಗಿ ₹ 1.90 ಕೋಟಿ ಬಿಲ್ ಪಾವತಿಸಿ ವಂಚನೆ ಎಸಗಿದ್ದಾರೆ’ ಎಂದು ದೂರಿನಲ್ಲಿ ತಿಳಿಸಲಾಗಿತ್ತು.

‘ಲಿಂಗಾಯತ-ಮುಸ್ಲಿಂ: ಹೋಲಿಕೆ ಸಲ್ಲ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಲಿಂಗಾಯತ, ಮುಸ್ಲಿಂ ಧರ್ಮದ ತತ್ವಗಳು ಭಿನ್ನವಾದುವು. ಪರಸ್ಪರ ಹೋಲಿಕೆ ತಪ್ಪು. ಲಿಂಗಾಯತರದ್ದು ಅಹಿಂಸಾ ತತ್ವ. ಅವರಲ್ಲಿ ಗೋಮಾಂಸ ಸೇವನೆ ಇಲ್ಲ’ ಎಂದು ಹರಿಹರ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ತಿಳಿಸಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿ, ‘ಬಸವ ಸಂಸ್ಕೃತಿ ಯಾತ್ರೆ ವೇಳೆ ಸ್ವಾಮೀಜಿಯೊಬ್ಬರು ಲಿಂಗಾಯತ, ಮುಸ್ಲಿಂ ಧರ್ಮ ಒಂದೇ ಎಂಬಂತೆ ಮಾತನಾಡಿದ್ದಾರೆ. ಆ ಮೂಲಕ ಜನರಲ್ಲಿ ನಾಸ್ತಿಕವಾದ ಬಿತ್ತಲು ಹೊರಟಿರುವುದು ಸರಿಯಲ್ಲ’ ಎಂದರು.

‘ಬಸವ ಸಂಸ್ಕೃತಿ ಯಾತ್ರೆ ಹಿಂದಿನ ತಂತ್ರ ಬೇರೆಯೇ ಇದೆ. ಹಾಗಂತ ಅದಕ್ಕೆ ನಮ್ಮ ವಿರೋಧ ಇಲ್ಲ. ಬಸವಣ್ಣ ಸಾಕಾರ, ನಿರಾಕಾರ ತತ್ವಗಳೆರಡನ್ನೂ ಒಪ್ಪಿಕೊಂಡವರು. ಮೊದಲಿನಿಂದ ಹಿಂದೂಗಳ ಜೊತೆಗಿದ್ದದ್ದು ಲಿಂಗಾಯತರು.



> **ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರೇ ಒಂದು ಸರ್ಕಾರವಿದ್ದಂತೆ. ಸರ್ಕಾರ ಮಾಡದ ಕೆಲಸವನ್ನು ಅವರು ಮಾಡುತ್ತಿದ್ದಾರೆ**
> **ವಚನಾನಂದ ಸ್ವಾಮೀಜಿ**
> ಹರಿಹರ ಪಂಚಮಸಾಲಿ ಗುರುಪೀಠ

ಹೀಗಾಗಿ ನಾವೆಲ್ಲರೂ ಹಿಂದೂಗಳೇ. ಪಂಚಮಸಾಲಿ ದೊಡ್ಡ ಸಮಾಜ. ಅದರ ದುರ್ಬಳಕೆ ಸಲ್ಲದು’ ಎಂದರು.

‘ಧರ್ಮಸ್ಥಳ ಕ್ಷೇತ್ರದ ವಿರುದ್ಧ ಷಡ್ಯಂತ್ರ ರೂಪಿಸಿದವರ ಕುರಿತೂ ತನಿಖೆ ಆಗಬೇಕು. ಆ ಕಾರಣಕ್ಕೆ ಮಠಾಧೀಶರ ನಿಯೋಗದೊಂದಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದೆವು. ನಾವು ಎನ್‌ಐಎ ತನಿಖೆಗೆ ಆಗ್ರಹಿಸಿಲ್ಲ’ ಎಂದು ಸ್ಪಷ್ಟಪಡಿಸಿದರು.

ಪದವೀಧರರ ಸಂಭ್ರಮ...

ಪ್ರಜಾವಾಣಿ ಚಿತ್ರ:



ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಬೆಂಗಳೂರಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ 33ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರದೊಂದಿಗೆ ಸಂಭ್ರಮಿಸಿದರು. ಈ ಘಟಿಕೋತ್ಸವದಲ್ಲಿ 1,557 ವಿದ್ಯಾರ್ಥಿಗಳು ಪದವಿ ಪಡೆದರೆ, ಅಧಿಕ ಅಂಕ ಪಡೆದ 25 ಅಭ್ಯರ್ಥಿಗಳು 52 ಚಿನ್ನದ ಪದಕಗಳಿಗೆ ಭಾಜನರಾದರು

ಮಹಜರು ವೇಳೆ ಶವದ ಅವಶೇಷ ಪತ್ತೆ?

ಸ್ನಾನಘಟ್ಟ ಪಕ್ಕದ ಕಾಡಿನಲ್ಲಿ ವಿಠಲ ಗೌಡ ಸಮ್ಮುಖದಲ್ಲಿ ಎಸ್‌ಐಟಿ ಮಹಜರು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಪ್ರಕರಣ ಕುರಿತು ವಿಶೇಷ ತನಿಖಾ ತಂಡ (ಎಸ್‌ಐಟಿ) ಪಾಂಗಾಳದ ವಿಠಲ ಗೌಡ ಅವರನ್ನು ನೇತ್ರಾವತಿ ಸ್ನಾನಘಟ್ಟ ಪಕ್ಕದ ಕಾಡಿನೊಳಗೆ ಕರೆದೊಯ್ದು ಶನಿವಾರ ಮಹಜರು ನಡೆಸಿದ ವೇಳೆ ಮೃತದೇಹದ ಕೆಲ ಅವಶೇಷಗಳು ನೆಲದ ಮೇಲೆಯೇ ಪತ್ತೆಯಾಗಿವೆ ಎಂದು ಗೊತ್ತಾಗಿದೆ.

ಸಾಕ್ಷಿ ದೂರುದಾರ ಎಸ್‌ಐಟಿಗೆ ಒಪ್ಪಿಸಿದ್ದ ತಲೆ ಬುರುಡೆ ಹೊರತೆಗೆದ ಜಾಗದ ಮಹಜರಿನ ಸಲುವಾಗಿ ವಿಠಲ ಗೌಡ (ಕೊಲೆಯಾದ ಸೌಜನ್ಯಾ ಅವರ ಮಾವ) ಅವರನ್ನು ಬಂಗ್ಲಗುಡ್ಡೆಯ ಕಾಡಿನೊಳಗೆ ಶನಿವಾರ ಕರೆದೊಯ್ದ ಅಧಿಕಾರಿಗಳ ತಂಡ, ಮರಳುವಾಗ ಕತ್ತಲಾವರಿಸಿತ್ತು. ವಿಧಿವಿಜ್ಞಾನ ಪ್ರಯೋಗಾಲಯ ತಜ್ಞರು ಇದ್ದರು. ತಂಡದ ಅಧಿಕಾರಿಗಳು ಮೃತದೇಹದ ಅವಶೇಷಗಳನ್ನು ಬಕೆಟ್‌ನಲ್ಲಿ ತುಂಬಿ ಒಯ್ದಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಮತ್ತೆ ಶೋಧ?: ಮಹಜರು ನಡೆದ ವೇಳೆ ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಅವರಾಗಲಿ, ಬೆಳ್ತಂಗಡಿಯ ತಹಶೀಲ್ದಾರ್ ಪೃಥ್ವಿ ಸಾನಿಕಂ ಅವರಾಗಲೀ ಇರಲಿಲ್ಲ. ಮಹಜರಿನ ವೇಳೆ ನೆಲವನ್ನೂ ಅಗೆದಿರಲಿಲ್ಲ. ಹಾಗಾಗಿ ಅಲ್ಲಿ ಎಸ್‌ಐಟಿ ಮತ್ತೆ ಶೋಧಕಾರ್ಯ ಮುಂದುವರಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಮಹಜರು ಬಳಿಕ ವಿಠಲ ಗೌಡ ಅವರನ್ನು ಎಸ್‌ಐಟಿ ಅಧಿಕಾರಿಗಳು ಬೆಳ್ತಂಗಡಿ ಕಚೇರಿಗೆ ಕರೆದೊಯ್ದಿದ್ದು, ಅಲ್ಲೇ ಇದ್ದಾರೆ. ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಜಯಂತ್ ಟಿ., ಗಿರೀಶ್ ಮಟ್ಟಣ್ಣವರ್ ಅವರನ್ನು ಭಾನುವಾರ ಮತ್ತೆ ಬೆಳ್ತಂಗಡಿಯ ಕಚೇರಿಗೆ ಅಧಿಕಾರಿಗಳು ಕರೆಸಿಕೊಂಡಿದ್ದಾರೆ. ಇಬ್ಬರು ಶನಿವಾರವೂ ಎಸ್‌ಐಟಿ ಕಚೇರಿಗೆ ತೆರಳಿ ಹೇಳಿಕೆ ನೀಡಿದ್ದರು.

ಅಗೆದಿದ್ದ ಕಡೆ ಪೊಲೀಸ್ ಕಾವಲು

ಸಾಕ್ಷಿ ದೂರುದಾರ, ಶವಗಳನ್ನು ಹೂತಿರುವುದಾಗಿ ತೋರಿಸಿದ್ದ ಎಲ್ಲ ಜಾಗಗಳಲ್ಲಿ ಶೋಧ ಪೂರ್ಣಗೊಂಡ ಬಳಿಕ ನೇತ್ರಾವತಿ ಸ್ನಾನ ಘಟ್ಟದ ಆಸುಪಾಸಿನ ಪ್ರದೇಶದಲ್ಲಿ ಪೊಲೀಸ್ ಕಾವಲು ಹಿಂಪಡೆಯಲಾಗಿತ್ತು. ಶನಿವಾರ ರಾತ್ರಿಯಿಂದ ನೇತ್ರಾವತಿ ಸೇತುವೆ, ಸ್ನಾನಘಟ್ಟ ಹಾಗೂ ಪಕ್ಕದ ಕಾಡಿನ ಪರಿಸರದಲ್ಲಿ ಕಾವಲಿಗೆ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ರಾತ್ರಿ ವೇಳೆಯೂ ಈ ಪರಿಸರದಲ್ಲಿ ಪೊಲೀಸರು ಕಾವಲು ಕಾಯುತ್ತಿದ್ದಾರೆ.

ಸಾಕ್ಷಿ ದೂರುದಾರನಿಗೆ ಪ್ರತ್ಯೇಕ ಸೆಲ್

ಶಿವಮೊಗ್ಗ: ಧರ್ಮಸ್ಥಳ ಬೆಳವಣಿಗೆ ಪ್ರಕರಣದ ಸಾಕ್ಷಿ ದೂರುದಾರನನ್ನು ಇಲ್ಲಿನ ಜಿಲ್ಲಾ ಕೇಂದ್ರ ಕಾರಾಗೃಹದ ಪ್ರತ್ಯೇಕ ಸೆಲ್‌ನಲ್ಲಿ ಇರಿಸಲಾಗಿದೆ.

ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದ ಬೆನ್ನಲ್ಲೇ ದಕ್ಷಿಣ ಕನ್ನಡ ಪೊಲೀಸರ ತಂಡ ಶನಿವಾರ ಮಧ್ಯರಾತ್ರಿ ಬಿಗಿ ಭದ್ರತೆಯಲ್ಲಿ ಇಲ್ಲಿಗೆ ಕರೆತಂದರು.

ಜೈಲಿನ ಅಧಿಕಾರಿಗಳು ನಿಯಮಾವಳಿಯಂತೆ ಆರೋಗ್ಯ ತಪಾಸಣೆ ಸೇರಿದಂತೆ ಇತರೆ ಪ್ರಕ್ರಿಯೆ ಪೂರ್ಣಗೊಳಿಸಿ ವಿಚಾರಣಾಧೀನ ಬಂಧಿ ಸಂಖ್ಯೆ 1104 ನೀಡಿ, ಸೆಲ್‌ನಲ್ಲಿ ಇರಿಸಿದ್ದಾರೆ.

‘ಬದುಕಿದ್ದೇವೆಂದು ತೋರಿಸಲು ಪಿಐಎಲ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಾವು ಬದುಕಿದ್ದೇವೆ ಎಂದು ತೋರಿಸಿಕೊಳ್ಳಲು ಕೆಲವರು ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಮಾಡಿಸುವುದನ್ನು ವಿರೋಧಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.



ಡಿ.ಕೆ. ಶಿವಕುಮಾರ್

ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವುದನ್ನು ಪ್ರಶ್ನಿಸಿ ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಹೈಕೋರ್ಟ್ ಮೆಟ್ಟಿಲೇರಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಬಗ್ಗೆ ಮುಖ್ಯಮಂತ್ರಿ ಈಗಾಗಲೇ ಉತ್ತರ ನೀಡಿದ್ದಾರೆ. ಅವರ ಪಕ್ಷ (ಬಿಜೆಪಿ) ಅವರನ್ನು (ಪ್ರತಾಪ್ ಸಿಂಹ) ಕಡೆಗಣಿಸಿದೆ. ಪಾಪ ಆತನಿಗೂ ರಾಜಕೀಯ ಮಾಡಬೇಕಿದೆ. ಹೀಗಾಗಿ, ತನ್ನ ಅಸ್ತಿತ್ವ ತೋರಿಸಿಕೊಳ್ಳಲು ಹೀಗೆಲ್ಲಾ ಮಾಡುತ್ತಿದ್ದಾರೆ’ ಎಂದರು.

ಬಾನು ಮುಷ್ತಾಕ್‌ಗೆ ಆಹ್ವಾನ

ಬಿಜೆಪಿ ಷಡ್ಯಂತ್ರ: ‘ಧರ್ಮಸ್ಥಳ ವಿಚಾರದಲ್ಲಿ ಸತ್ಯಾಂಶ ಒದಗಿಸಿರುವವರು ನಾವು. ಆದರೆ, ಅವರು ನಮಗಿಂತ ಮುಂಚಿತವಾಗಿ ಅತಿ ವೇಗದಲ್ಲಿ ಹೊರಟಿದ್ದಾರೆ. ಧರ್ಮಸ್ಥಳ ವಿಚಾರದಲ್ಲಿ ಷಡ್ಯಂತ್ರ ಮಾಡುತ್ತಿರುವವರು ಬಿಜೆಪಿಯವರು’ ಎಂದರು.

‘ಬುರುಡೆ ಗಿರಾಕಿ ಯಾರು? ಬಿಜೆಪಿ ಕಾರ್ಯಕರ್ತರಲ್ಲವೇ? ಧರ್ಮಸ್ಥಳಕ್ಕೆ ಅಪಮಾನ ಆಗಿದ್ದರೆ ಅದು ಬಿಜೆಪಿ ನಾಯಕರು ಹಾಗೂ ಅದರ ಸಂಘಟನೆಯವರಿಂದ ಮಾತ್ರ’ ಎಂದರು.

‘ಬಿಜೆಪಿ ರಾಜಕೀಯ ನಾಚಿಕೆಗೇಡಿನದು’

ಮೈಸೂರು: ‘ನಾಡು, ನುಡಿ, ಸಂಸ್ಕೃತಿ ಮತ್ತು ಸಾಹಿತ್ಯದ ಗಂಧ–ಗಾಳಿ ಇಲ್ಲದೇ ದ್ವೇಷವನ್ನೇ ಉಸಿರಾಡುತ್ತಿರುವ ಬಿಜೆಪಿಗರು ಮಹಿಳೆ ವಿಷಯದಲ್ಲಿ ರಾಜಕೀಯ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ’ ಎಂದು ಸಚಿವ ಡಾ.ಎಚ್.ಸಿ. ಮಹದೇವಪ್ಪ ಆರೋಪಿಸಿದ್ದಾರೆ.

‘ಸಾಹಿತಿ ಬಾನು ಮುಷ್ತಾಕ್ ಅವರು ಸುತ್ತಲಿನ ಸಾಮಾಜಿಕ ಪಿಡುಗುಗಳು ಹಾಗೂ ಅವರೊಳಗಿನ ಧಾರ್ಮಿಕ ಸಂಕೋಲೆಗಳ ವಿರುದ್ಧ ಗಟ್ಟಿಯಾಗಿ ದನಿ ಎತ್ತಿದವರು. ಇತ್ತೀಚೆಗೆ ಬುಕರ್ ಪ್ರಶಸ್ತಿ ಬಂದಿದೆ. ಅವರ ಆಯ್ಕೆ ವಿರೋಧ ಸರಿಯಲ್ಲ’ ಎಂದು ಹೇಳಿದರು.

‘ಬಿಜೆಪಿಗರಿಂದಲೇ ಛೀಮಾರಿ ಹಾಕಿಸಿಕೊಂಡು, ಟಿಕೆಟ್ ತಪ್ಪಿ ವಿಚಲಿತರಾಗಿರುವ ಪ್ರತಾಪ ಸಿಂಹ ಈಗ ಪಿಐಎಲ್ ಸಲ್ಲಿಸಿರುವುದರ ಹಿಂದೆ, ದ್ವೇಷದ ಹಿತಾಸಕ್ತಿ ಬಿಟ್ಟರೆ ಸಾರ್ವಜನಿಕ ಹಿತಾಸಕ್ತಿ ಇಲ್ಲ. ಅವರ ಕೋಮುರಾಜಕೀಯಕ್ಕೆ ತಲೆಕೆಡಿಸಿಕೊಳ್ಳುವ ಪ್ರಶ್ನೆ ಇಲ್ಲ’ ಎಂದರು.

ಯುವ ಕಾಂಗ್ರೆಸ್ ಕಾರ್ಯಕಾರಿಣಿ • ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಲಹೆ

‘ಚುನಾವಣೆಗೆ ಹಣವಲ್ಲ, ಸಂಘಟನಾ ಸಾಮರ್ಥ್ಯ ಮುಖ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣೆಗೆ ಹಣ ಮುಖ್ಯವಲ್ಲ, ಸಂಘಟನಾ ಸಾಮರ್ಥ್ಯ ಮುಖ್ಯ. ಹೀಗಾಗಿ, ಬೂತ್ ಮಟ್ಟದಲ್ಲಿ ಪಕ್ಷವನ್ನು ಸಂಘಟಿಸಿ’ ಎಂದು ಕಾಂಗ್ರೆಸ್ ಕಾರ್ಯಕರ್ತರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು.

ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ನಡೆದ ಯುವ ಕಾಂಗ್ರೆಸ್ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ‘ನೀವು ನಾಯಕರುಗಳ ಹಿಂದೆ ಓಡಾಡಿದರೆ ಪ್ರಯೋಜನವಿಲ್ಲ. ಬೂತ್ ಮಟ್ಟದಲ್ಲಿ ಸಾಮರ್ಥ್ಯ ಪ್ರದರ್ಶಿಸಿದರೆ ಮಾತ್ರ ರಾಜಕೀಯದಲ್ಲಿ ಎತ್ತರಕ್ಕೆ ಬೆಳೆಯಲು ಸಾಧ್ಯ’ ಎಂದರು.

ಮುಖ್ಯಾಂಶಗಳು
- ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಿ
- ಬೆಂಗಳೂರು: ಐದು ಪಾಲಿಕೆಯಿಂದ ಹೆಚ್ಚು ಮಂದಿಗೆ ಅವಕಾಶ
- ಸಂಘಟನಾ ಸಾಮರ್ಥ್ಯ ಬೆಳೆಸಿಕೊಳ್ಳಿ

‘ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರ ವಿರುದ್ಧ ಹೋರಾಟ ಮಾಡಿದ್ದಕ್ಕೆ ನನಗೆ ಸಾತನೂರು ಕ್ಷೇತ್ರದಿಂದ ಟಿಕೆಟ್ ಸಿಕ್ಕಿತ್ತು. ಏಕೆಂದರೆ, ನನ್ನ ಸಂಘಟನಾ ಸಾಮರ್ಥ್ಯ ಅಷ್ಟು ಚೆನ್ನಾಗಿತ್ತು. ಯುವ ನಾಯಕನಾಗಿ ನಾನು ಪಕ್ಷವನ್ನು ತಳಮಟ್ಟದಿಂದ ಕಟ್ಟಿದ್ದೆ’ ಎಂದು ಹೇಳಿದರು.

‘ಪಂಚಾಯತ್‌ರಾಜ್ ಕಾಯ್ದೆಯ 73, 74ನೇ ತಿದ್ದುಪಡಿ ಕಾರಣಕ್ಕೆ ಸ್ಥಳೀಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದು ನೂರಾರು ನಾಯಕರು ಹುಟ್ಟಿಕೊಂಡರು. ನಾನು, ರಾಮಲಿಂಗಾ ರೆಡ್ಡಿ, ಬಿಜೆಪಿಯ ಎಸ್. ಸುರೇಶ್ ಕುಮಾರ್, ವಿ. ಸೋಮಣ್ಣ ಹೀಗೆ ಅನೇಕರು ಸ್ಥಳೀಯ ಸಂಸ್ಥೆಗಳ ಮೂಲಕವೇ ಬೆಳೆದವರು. ಬೆಂಗಳೂರಿನಲ್ಲಿ ನೂತನ ಐದು ಪಾಲಿಕೆಗಳನ್ನು ರಚನೆ ಮಾಡಿರುವ ಕಾರಣಕ್ಕೆ 500ಕ್ಕೂ ಹೆಚ್ಚು ಹೊಸ ನಾಯಕರಿಗೆ ಅವಕಾಶ ಸಿಗಲಿದೆ’ ಎಂದರು.

> **ವಿದ್ಯಾರ್ಥಿ ಕಾಂಗ್ರೆಸ್, ಯುವ ಕಾಂಗ್ರೆಸ್ ಮೂಲಕ ಪಕ್ಷದಲ್ಲಿ ನಾಯಕರಾಗಿ ಬೆಳೆದವರು ಯಾವುದೇ ಕಾರಣಕ್ಕೂ ಪಕ್ಷ ತೊರೆಯುವುದಿಲ್ಲ. ಅವರು ಪಕ್ಷದ ಆಸ್ತಿಯಾಗಿ, ದೇಶದ ಆಸ್ತಿಯಾಗುತ್ತಾರೆ**
> **ಡಿ.ಕೆ.ಶಿವಕುಮಾರ್**
> ಅಧ್ಯಕ್ಷ, ಕೆಪಿಸಿಸಿ

‘ಪಕ್ಷದ ಅನೇಕ ಘಟಕಗಳ ಜವಾಬ್ದಾರಿ ತೆಗೆದುಕೊಂಡವರಿಗೆ ಅತ್ಯುತ್ತಮ ಸ್ಥಾನಗಳನ್ನು ನೀಡಲಾಗಿದೆ. ಗ್ಯಾರಂಟಿ ಸಮಿತಿಯಲ್ಲಿಯೂ ಸ್ಥಾನ ನೀಡಲಾಗಿದೆ’ ಎಂದ ಅವರು, ‘ಯುವ ಕಾಂಗ್ರೆಸ್ ಸೇರಿದಂತೆ ಪಕ್ಷದ ಎಲ್ಲ ಘಟಕಗಳು ಕೆಲಸ ಮಾಡಿದರೆ 2028ರಲ್ಲಿ ಮತ್ತೆ ಪಕ್ಷ ಅಧಿಕಾರಕ್ಕೆ ಬರುವುದರಲ್ಲಿ ಅನುಮಾನವಿಲ್ಲ’ ಎಂದರು.

‘ಕಳೆದ ವಿಧಾನಸಭಾ ಚುನಾವಣೆ ವೇಳೆ ಚಿಲುಮೆ ಸಂಸ್ಥೆ ಮೂಲಕ ಏಳು ಸಾವಿರ ಖಾಸಗಿ ವ್ಯಕ್ತಿಗಳಿಗೆ ಬಿಎಲ್‌ಒ ಸ್ಥಾನ ನೀಡಿ ಬಿಜೆಪಿ ಅಕ್ರಮ ಎಸಗಿತ್ತು. ಈ ಅಕ್ರಮವನ್ನು ನಾನು, ಪಕ್ಷದ ಉಸ್ತುವಾರಿ ಸುರ್ಜೇವಾಲಾ ಹೋರಾಟ ಮಾಡಿ ನಿಲ್ಲಿಸಿದೆವು. ರಾಹುಲ್ ಗಾಂಧಿಯವರು ಕೂಡಾ ಇದರ ಬಗ್ಗೆ ದನಿ ಎತ್ತಿದ್ದರು’ ಎಂದು ಹೇಳಿದರು.

ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಉದಯ ಬಾನು ಚಿಬ್, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್. ಮಂಜುನಾಥ ಪಾಲ್ಗೊಂಡಿದ್ದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.97	17,649	15,156
ಹಾರಂಗಿ	2,859	2,858.58	2,874	2,458
ಕಬಿನಿ	2,284.00	2,283.92	10,294	9,942
ಹೇಮಾವತಿ	2,922	2,921.87	7,735	7,460
ಲಿಂಗನಮಕ್ಕಿ	1,819	1,817.75	9,245	9,049
ಸೂಪಾ (ಮೀ)	564	560.23	5,572.75	4,636
ಮಾಣಿ	595	594.16	1,196	653
ತುಂಗಭದ್ರಾ	1,633	1,626.00	42,064	41,553
ಮಲಪ್ರಭಾ	2,079.5	2,079.50	4,094	4,094
ಘಟಪ್ರಭಾ	2,175	2,174.80	5,438	5,438
ಭದ್ರಾ *	186	184.5	12,977	11,785
ಆಲಮಟ್ಟಿ (ಮೀ)	519.6	519.54	64,876	77,885
ನಾರಾಯಣಪುರ (ಮೀ)	492.25	492.18	45,000	36,850

* ನೆಲಮಟ್ಟದಿಂದ

ಬಾಗಿಲು ಮುಚ್ಚದ ನೀಲಕಂಠೇಶ್ವರ ದೇಗುಲ • ಎಂದಿನಂತೆ ಪೂಜೆ, ವರ್ಷವಿಡೀ ದರ್ಶನ

ಪೂಜೆಗೆ ಇಲ್ಲಿ ‘ಗ್ರಹಣ’ ಹಿಡಿಯುವುದಿಲ್ಲ..

• ಕೆ.ಪಿ.ಓಂಕಾರಮೂರ್ತಿ

ಚಿತ್ರದುರ್ಗ: ಗ್ರಹಣ ದಿನದಂದು ಬಹುತೇಕ ದೇವಸ್ಥಾನಗಳು ಪೂಜೆ ಸ್ಥಗಿತಗೊಳಿಸಿ ಬಾಗಿಲು ಮುಚ್ಚುವುದು ಸಾಮಾನ್ಯ. ಆದರೆ ಚಿತ್ರದುರ್ಗದ ನೀಲಕಂಠೇಶ್ವರ ದೇಗುಲ ಗ್ರಹಣ ಕಾಲದಲ್ಲೂ ಭಕ್ತರಿಗಾಗಿ ತೆರೆದಿರುತ್ತದೆ.

ಭಾನುವಾರ (ರಾತ್ರಿ 9.45 ರಿಂದ 1.27 ರವರೆಗೆ) ರಾಹುಗ್ರಸ್ತ ಚಂದ್ರಗ್ರಹಣದ ವೇಳೆ ಜಿಲ್ಲೆಯ ಬಹುಪಾಲು ದೇಗುಲಗಳು ಮಧ್ಯಾಹ್ನವೇ ಮುಚ್ಚಿದ್ದವು. ಆದರೆ, ಹೊಳಲ್ಕೆರೆ ರಸ್ತೆಯ ಐತಿಹಾಸಿಕ ನೀಲಕಂಠೇಶ್ವರ ದೇವಸ್ಥಾನದಲ್ಲಿ ನಿಗದಿಯಂತೆ ಪೂಜಾಕಾರ್ಯಗಳು ನಡೆದವು.

ನಿತ್ಯ ಮುಂಜಾನೆ 5 ರಿಂದ ಪೂಜೆ ಆರಂಭವಾಗಲಿದೆ. ಮಧ್ಯಾಹ್ನ 1ಕ್ಕೆ ಪೂಜೆ ಸಲ್ಲಿಸಿ ಬಾಗಿಲು ಮುಚ್ಚಲಾಗುತ್ತದೆ. ಪುನಃ ಸಂಜೆ 4.30ಕ್ಕೆ ಬಾಗಿಲು ತೆರೆದು 8.30ರವರೆಗೆ ದೇವರ ದರ್ಶನಕ್ಕೆ ಅನುವು ಮಾಡಿಕೊಡಲಾಗುತ್ತದೆ. ಎಂತಹುದೇ ಗ್ರಹಣವಿದ್ದರೂ ವರ್ಷವಿಡೀ ನಡೆವ ಸೇವೆ.



ಚಿತ್ರದುರ್ಗದ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಭಾನುವಾರ ಪೂಜೆ ಸಲ್ಲಿಸುತ್ತಿರುವ ಭಕ್ತರು ಪ್ರಜಾವಾಣಿ ಚಿತ್ರ; ವಿ.ಚಂದ್ರಪ್ಪ

ಗ್ರಹಣ ಎಂಬ ಕಾರಣಕ್ಕೆ ನಾನಾ ದೇವಸ್ಥಾನಗಳಲ್ಲಿ ಪೂಜಾ ಸ್ಥಳವನ್ನು ಗಂಗಾಜಲ, ತುಳಸಿ ನೀರಿನಿಂದ ಶುದ್ಧಿ ಮಾಡಲಾಗುತ್ತದೆ. ದೇವಸ್ಥಾನದಲ್ಲಿ ಹೋಮ, ಅಭಿಷೇಕ, ಮಂತ್ರ ಪಠಣೆ ಸೇರಿದಂತೆ ಇತರೆ ವಿಶೇಷ ಪೂಜೆ ನಡೆಸಲಾಗುವುದಿಲ್ಲ. ಆದರೆ ಇಲ್ಲಿ ಗ್ರಹಣ ಕಾಲದಲ್ಲೂ ಪೂಜೆ ನಡೆಯಲಿದ್ದು, ಭಕ್ತರಿಗೆ ಶಿವನ ದರ್ಶನದ ಅವಕಾಶ ನೀಡಲಾಗುತ್ತದೆ.

‘ಗ್ರಹಣ ಪ್ರಕೃತಿ ಸಹಜ ಪ್ರಕ್ರಿಯೆ. ಈ ಕಾರಣಕ್ಕೆ ದೇವಸ್ಥಾನದ ಬಾಗಿಲು ಮುಚ್ಚಿ ಪೂಜೆ ಸ್ಥಗಿತಗೊಳಿಸುವ ಸಂಪ್ರದಾಯ ನಮ್ಮಲ್ಲಿ ಇಲ್ಲ. ಇಲ್ಲಿ ವರ್ಷದ ಎಲ್ಲಾ ದಿನಗಳಲ್ಲೂ ಪೂಜೆ ಪುನಸ್ಕಾರಗಳು ನಡೆಯುತ್ತವೆ’ ಎನ್ನುತ್ತಾರೆ ದೇವಸ್ಥಾನದ ಪ್ರಧಾನ ಅರ್ಚಕ ಶಾಂತಮೂರ್ತಿ.



> **ಗ್ರಹಣದ ವೇಳೆ ದೇವಸ್ಥಾನಕ್ಕೆ ಬರುವ ಭಕ್ತರಿಗೆ ತೀರ್ಥ ಪ್ರಸಾದ ವಿತರಿಸಲಾಗುತ್ತದೆ. ಬೇರೆ ಕಡೆ ಗ್ರಹಣ ಮುಗಿದ ಬಳಿಕ ದೇಗುಲವನ್ನು ಸ್ವಚ್ಛಗೊಳಿಸಲಾಗುತ್ತದೆ. ನಮ್ಮಲ್ಲಿ ಆ ಸಂಪ್ರದಾಯ ಇಲ್ಲ**
> **ಶಾಂತಮೂರ್ತಿ,**
> ದೇವಸ್ಥಾನದ ಪ್ರಧಾನ ಅರ್ಚಕರು

ಭವ್ಯ ಇತಿಹಾಸ ಹೊಂದಿರುವ ಈ ದೇವಸ್ಥಾನವನ್ನು ದೊರೆ ಭರಮಣ್ಣನಾಯಕನ ಕಾಲದಲ್ಲಿ ನಿರ್ಮಿಸಲಾಗಿದೆ ಎಂದು ಇತಿಹಾಸ ತಜ್ಞರು ಹೇಳುತ್ತಾರೆ.

ಡಿಜೆಗೆ ಆಗ್ರಹಿಸಿ ಧರಣಿ–ಶ್ರೀರಾಮುಲು ನೇತೃತ್ವ

ಪ್ರಜಾವಾಣಿ ವಾರ್ತೆ

ಮೊಳಕಾಲ್ಮುರು (ಚಿತ್ರದುರ್ಗ): ಗಣಪತಿ ಮೂರ್ತಿಯ ವಿಸರ್ಜನಾ ಮೆರವಣಿಗೆಯಲ್ಲಿ ಡಿ.ಜೆ ಇಲ್ಲವೇ ಧ್ವನಿವರ್ಧಕ ಬಳಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿ ಮಾಜಿ ಸಚಿವ ಬಿ. ಶ್ರೀರಾಮುಲು ನೇತೃತ್ವದಲ್ಲಿ ಅಭಿಮಾನಿಗಳು ಹಾಗೂ ಯುವಕರು ಭಾನುವಾರ ಸುಮಾರು 2 ಗಂಟೆ ರಸ್ತೆ ತಡೆ ನಡೆಸಿದರು.

ಇಲ್ಲಿನ ಮಹಾಗಣಪತಿ ಸಮಿತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಮೂರ್ತಿ ವಿಸರ್ಜನೆ ಮೆರವಣಿಗೆಯು ಪೊಲೀಸರು ಹಾಗೂ ಧರಣಿ ನಿರತರ ನಡುವಣ ವಾಗ್ವಾದಕ್ಕೆ ಕಾರಣವಾಗಿ, ಪಟ್ಟಣದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಮಧ್ಯಾಹ್ನ 1 ಗಂಟೆಗೆ ಶಾಸಕ ಎನ್.ವೈ.ಗೋಪಾಲಕೃಷ್ಣ, ಶೋಭಾಯಾತ್ರೆಗೆ ಚಾಲನೆ ನೀಡಿ ತೆರಳಿದರು. ನಂತರ ಬಿ. ಶ್ರೀರಾಮುಲು ಸ್ಥಳಕ್ಕೆ ಬಂದರು. ಅವರ ನೇತೃತ್ವದಲ್ಲಿ ಯುವಕರು ಡಿ.ಜೆ ಅಥವಾ ಸೌಂಡ್ ಬಾಕ್ಸ್ ಬಳಸಲು ಅವಕಾಶಕ್ಕೆ ಪೊಲೀಸರಿಗೆ ಮನವಿ ಮಾಡಿದರು.



ಮೊಳಕಾಲ್ಮುರಿನಲ್ಲಿ ಭಾನುವಾರ ಮಾಜಿ ಸಚಿವ ಬಿ. ಶ್ರೀರಾಮುಲು ನೇತೃತ್ವದಲ್ಲಿ ಧರಣಿ ನಡೆಸಲಾಯಿತು

ಪೊಲೀಸರು ಅವಕಾಶ ನಿರಾಕರಿಸಿದಾಗ, ಕೆರಳಿದ ಜನರು ರಸ್ತೆಯಲ್ಲೇ ಧರಣಿ ಕುಳಿತರು. ರಾಜ್ಯ ಸರ್ಕಾರ ಹಾಗೂ ಪೊಲೀಸ್ ಇಲಾಖೆಯ ವಿರುದ್ಧ ಘೋಷಣೆ ಕೂಗಿದರು.

ಕೆಲ ಮುಖಂಡರು, ‘ನೀವೇ ಮೂರ್ತಿ ವಿಸರ್ಜನೆ ಮಾಡಿಕೊಳ್ಳಿ’ ಎಂದು ಪೊಲೀಸರಿಗೆ ಹೇಳಿ ಮೆರವಣಿಗೆ ನಿಲ್ಲಿಸಿದ್ದು, ಸ್ಥಳದಿಂದ ನಿರ್ಗಮಿಸಿದರು. ಪರಿಸ್ಥಿತಿ ಕೈಮೀರಬಹುದು ಎಂದು ಪೊಲೀಸರು ಎರಡು ಸೌಂಡ್ ಬಾಕ್ಸ್‌ಗಳ ಬಳಕೆಗೆ ಅನುಮತಿ ನೀಡಿದರು. ಇದರ ಬೆನ್ನಲ್ಲೇ ಶ್ರೀರಾಮುಲು ಕೂಡ ಅಲ್ಲಿಂದ ಬೇರೆಡೆಗೆ ಪ್ರಯಾಣ ಬೆಳೆಸಿದರು.

ಸೌಂಡ್ ಬಾಕ್ಸ್‌ಗಳು ಕೈಕೊಟ್ಟಿದ್ದರಿಂದ ಬೇಸತ್ತ ಜನರು, ಡೊಳ್ಳು ಕುಣಿತ ತಂಡ ಕರೆಸಿ ಮೆರವಣಿಗೆ ನಡೆಸಿದರು. ರಾತ್ರಿ ಮೂರ್ತಿಯನ್ನು ಶಾಂತಿಯುತವಾಗಿ ವಿಸರ್ಜಿಸಲಾಯಿತು.

ಸಂಘರ್ಷ, 8 ಮಂದಿಗೆ ಗಾಯ

ಮದ್ದೂರು: ಗಣೇಶ ಮೂರ್ತಿ ವಿಸರ್ಜನೆ ವೇಳೆ ಕಲ್ಲುತೂರಾಟ, ಪ್ರಕ್ಷುಬ್ಧ ವಾತಾವರಣ

ಪ್ರಮುಖ ಅಂಶಗಳು

- ಪರಿಸ್ಥಿತಿ ನಿಯಂತ್ರಿಸಲು ಹರಸಾಹಸ
- ರಾತ್ರಿ 8ರ ಸುಮಾರಿಗೆ ನಡೆದ ಘಟನೆ
- ಅಂಗಡಿಗಳ ಬಾಗಿಲು ಮುಚ್ಚಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಮಂಡ್ಯ: ಗಣೇಶ ಮೂರ್ತಿ ವಿಸರ್ಜನೆ ವೇಳೆ ಭಾನುವಾರ ರಾತ್ರಿ ಹಿಂದೂ ಮತ್ತು ಮುಸ್ಲಿಂ ಯುವಕರ ಗುಂಪುಗಳ ನಡುವೆ ಕಲ್ಲು ತೂರಾಟ ನಡೆದಿದ್ದು, ಮದ್ದೂರು ಪಟ್ಟಣದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ.

ನಾಲ್ವರು ಪೊಲೀಸರು ಸೇರಿದಂತೆ ಒಟ್ಟು 8 ಮಂದಿಗೆ ಗಾಯಗಳಾಗಿದ್ದು, ಅವರನ್ನು ಮದ್ದೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮದ್ದೂರು ಪಟ್ಟಣದ ಸಿದ್ಧಾರ್ಥ ನಗರದ 5ನೇ ಕ್ರಾಸ್‌ನಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ಸೂಕ್ತ ಪೊಲೀಸ್ ಬಂದೋಬಸ್ತ್‌ ನಡುವೆ ಸಾಗುತ್ತಿತ್ತು.

ರಾಮ್ ರಹೀಂ ನಗರದ ಮಸೀದಿ ಬಳಿ ಹೋದಾಗ ರಾತ್ರಿ 8ರ ಸುಮಾರಿಗೆ ಕಲ್ಲು ತೂರಾಟ ನಡೆದಿದೆ. ಪ್ರತಿಯಾಗಿ ಕೆಲವೇ ತಿಂಗಳ ಹಿಂದೆ ಉದ್ಘಾಟನೆಯಾಗಿದ್ದ ಮಸೀದಿ ಮೇಲೂ ಕಲ್ಲು ತೂರಾಟವಾಯಿತು. ಆಗ ಉಭಯ ಗುಂಪಿನ ನಡುವೆ ಘರ್ಷಣೆ ತೀವ್ರ ಸ್ವರೂಪ ಪಡೆಯಿತು.

ಎರಡು ಗುಂಪುಗಳ ಮುಖಂಡರು ಅಲ್ಲಿ ಜಮಾಯಿಸಿದ್ದರು. ಬಿಜೆಪಿ, ಆರ್‌.ಎಸ್‌.ಎಸ್‌., ಬಜರಂಗದಳ ಕಾರ್ಯಕರ್ತರು ಕೂಡ ಸ್ಥಳಕ್ಕೆ ಧಾವಿಸಿದರು. ಸ್ಥಳದಲ್ಲಿದ್ದ ಪೊಲೀಸರು ಗುಂಪನ್ನು ಚದುರಿಸಿ, ಪರಿಸ್ಥಿತಿ ನಿಯಂತ್ರಿಸಲು ಹರಸಾಹಸಪಟ್ಟರು.

ಗಣೇಶ ಮೂರ್ತಿಯ ವಿಸರ್ಜನಾ ತಂಡದ ಕೆಲವು ಸದಸ್ಯರು ಪಟ್ಟಣದ ಪೇಟೆ ಬೀದಿಯ ಕೆಮ್ಮಣ್ಣು ನಾಲಾ ವೃತ್ತದ ಬಳಿಯಿರುವ ಮತ್ತೊಂದು ಮಸೀದಿ ಮುಂಭಾಗ ಧರಣಿ ನಡೆಸಿ, ನ್ಯಾಯಕ್ಕಾಗಿ ಆಗ್ರಹಿಸಿ ಘೋಷಣೆ ಮೊಳಗಿಸಿದರು. ಸ್ಥಳಕ್ಕೆ ದೌಡಾಯಿಸಿದ ಪೊಲೀಸ್ ಪಡೆ, ಪೇಟೆ ಬೀದಿಯ ಎಲ್ಲ ಅಂಗಡಿಗಳ ಬಾಗಿಲು ಮುಚ್ಚಿಸಿದರು.



ಮದ್ದೂರು ಪಟ್ಟಣದ ಕೆಮ್ಮಣ್ಣು ನಾಲಾ ವೃತ್ತದ ಸಮೀಪದಲ್ಲಿರುವ ಮಸೀದಿ ಮುಂಭಾಗ ಭಾನುವಾರ ರಾತ್ರಿ ಧರಣಿ ನಡೆಸುತ್ತಿದ್ದ ಗಣೇಶ ವಿಸರ್ಜನಾ ಸಮಿತಿ ತಂಡದ ಸದಸ್ಯರು ಮತ್ತು ಅಲ್ಲಿ ಸೇರಿದ್ದ ಗುಂಪನ್ನು ಪೊಲೀಸರು ಚದುರಿಸಿದರು –ಪ್ರಜಾವಾಣಿ ಚಿತ್ರ

ಬೂದಿ ಮುಚ್ಚಿದ ಕೆಂಡ, ಬಿಗಿ ಭದ್ರತೆ

ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಅವರು ಸ್ಥಳಕ್ಕೆ ಭೇಟಿ ನೀಡಿ, ಜಿಲ್ಲೆಯ ಇತರ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ಮದ್ದೂರು ಪಟ್ಟಣಕ್ಕೆ ಕರೆಸಿಕೊಂಡು ಬಂದೋಬಸ್ತ್ ಬಿಗಿಗೊಳಿಸಿದರು.

ಪೊಲೀಸ್ ಅಧಿಕಾರಿಗಳು ಎರಡು ಕೋಮುಗಳ ಮುಖಂಡರ ಜೊತೆಗೆ ಸಮಾಲೋಚಿಸಿ, ಸಮಾಧಾನ ಪಡಿಸಲು ಯತ್ನಿಸಿದರು. ಸದ್ಯಕ್ಕೆ ಪರಿಸ್ಥಿತಿ ತಹಬದಿಗೆ ಬಂದಿದ್ದರೂ, ವಾತಾವರಣ ಬೂದಿ ಮುಚ್ಚಿದ ಕೆಂಡದಂತಿದೆ.

ಕಳೆದ ವರ್ಷ ನಾಗಮಂಗಲ ಪಟ್ಟಣದಲ್ಲಿ ಗಣೇಶ ಮೂರ್ತಿ ವಿಸರ್ಜನೆ ವೇಳೆ ಮಸೀದಿ ಬಳಿಯೇ ಕಲ್ಲು ತೂರಾಟ ನಡೆದು, ಹತ್ತಾರು ಅಂಗಡಿಗಳಿಗೆ ಬೆಂಕಿ ಹಚ್ಚಲಾಗಿತ್ತು. ಈ ಗಲಭೆಯಿಂದ ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿತ್ತು.

ಚಿಟಿಕೆ ಸುದ್ದಿ

ಎಸ್‌ಐಆರ್‌: ಇಂದು ವಿಚಾರಣೆ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್‌) ನಡೆಸುವ ಚುನಾವಣಾ ಆಯೋಗದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸೋಮವಾರ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಪಟ್ಟಿ ಮಾಡಿದೆ.

ಚುನಾವಣಾ ಆಯೋಗ ಸಲ್ಲಿಸಿರುವ ವರದಿಗೆ ಸಂಬಂಧಿಸಿದಂತೆ ಆರ್‌ಜೆಡಿ, ಎಐಎಂಐಎಂ ಮತ್ತು ಇತರ ಅರ್ಜಿದಾರರು ಸಲ್ಲಿಸಿರುವ ಪ್ರತಿಕ್ರಿಯೆಗಳನ್ನು ನ್ಯಾಯಪೀಠ ಪರಿಗಣಿಸಲಿದೆ.

ಮಲಗುಂಡಿ ಸಚ್ಛತೆ: ಇಬ್ಬರ ಸಾವು

ಪ್ರಯಾಗರಾಜ್ (ಪಿಟಿಐ): ಮಲಗುಂಡಿ ಸ್ವಚ್ಛಗೊಳಿಸುತ್ತಿದ್ದ ವೇಳೆ ವಿಷಕಾರಿ ಅನಿಲ ಸೇವನೆಯಿಂದಾಗಿ ಉಸಿರುಗಟ್ಟಿ ಇಬ್ಬರು ಮೃತಪಟ್ಟಿರುವ ಘಟನೆ ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆದಿದೆ.

‘ವೀರಶೈವ ಲಿಂಗಾಯತ ನಮೂದಿಸಿ’

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕರೆ

ಪ್ರಜಾವಾಣಿ ವಾರ್ತೆ



ಈಶ್ವರ ಖಂಡ್ರೆ

ಬೆಂಗಳೂರು: ಜಾತಿವಾರು ಸಮೀಕ್ಷೆ ವೇಳೆ ಲಿಂಗಾಯತ ವೀರಶೈವ ಸಮುದಾಯದ ಯಾರೂ ಧರ್ಮದ ಕಾಲಂನಲ್ಲಿ ಹಿಂದೂ ಎಂದು ನಮೂದಿಸಬಾರದು. ಬದಲಿಗೆ ‘ವೀರಶೈವ ಲಿಂಗಾಯತ’ ಎಂದು ಬರೆಯಿಸಿ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕರೆ ನೀಡಿದೆ.

ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ ಈಶ್ವರ ಬಿ.ಖಂಡ್ರೆ ಅವರು, ನಗರದಲ್ಲಿ ಭಾನುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಈ ಕರೆ ನೀಡಿದರು.

ವೀರಶೈವ ಲಿಂಗಾಯತರು ಹಿಂದೂ ಎಂದು ಬರೆಯಿಸಬಾರದೆ ಎಂದು ಸುದ್ದಿಗಾರರ ಪ್ರಶ್ನಿಸಿದಾಗ, ‘ಹೌದು. ಹಾಗೆ ಬರೆಯಿಸಬಾರದು. ಹಿಂದೂ ಸನಾತನ ಧರ್ಮಕ್ಕೂ, ವೀರಶೈವ ಲಿಂಗಾಯತ ಧರ್ಮಕ್ಕೂ ಸಂಬಂಧವಿಲ್ಲ. ಹೀಗಾಗಿ ನಮ್ಮ ಸಮುದಾಯದ ಎಲ್ಲರೂ, ‘ವೀರಶೈವ ಲಿಂಗಾಯತ’ ಧರ್ಮದವರು ಎಂದೇ ಬರೆಯಿಸಬೇಕು’ ಎಂದರು.

‘ಇದು ಜಾತಿ ಪ್ರಮಾಣಪತ್ರಕ್ಕಾಗಿ ನಡೆಸುತ್ತಿರುವ ಸಮೀಕ್ಷೆ ಅಲ್ಲ. ಬದಲಿಗೆ ರಾಜ್ಯದ ಜನರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಯ ಬಗ್ಗೆ ಅರಿತುಕೊಳ್ಳಲು ಮತ್ತು ಅದರ ಆಧಾರದಲ್ಲಿ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ನಡೆಸುತ್ತಿರುವ ಸಮೀಕ್ಷೆ. ಹೀಗಾಗಿ ವೀರಶೈವ ಲಿಂಗಾಯತ ಸಮುದಾಯದ ಎಲ್ಲರೂ ಸಮೀಕ್ಷೆಯಲ್ಲಿ ಕಡ್ಡಾಯವಾಗಿ ಭಾಗಿಯಾಗಬೇಕು’ ಎಂದರು.

‘ಸಮೀಕ್ಷೆಯಲ್ಲಿ ಭಾಗವಹಿಸುವಾಗ ಬಹಳ ಎಚ್ಚರಿಕೆಯಿಂದ ವಿವರ ನೀಡಬೇಕು. ಜಾತಿಯ ಕಾಲಂನಲ್ಲಿ ಉಪಜಾತಿಯ ಹೆಸರು ಬರೆಯಿಸಬಾರದು. ಬದಲಿಗೆ ‘ಲಿಂಗಾಯತ’ ಅಥವಾ ‘ವೀರಶೈವ’ ಅಥವಾ ‘ವೀರಶೈವ ಲಿಂಗಾಯತ’ ಎಂದು ಬರೆಯಿಸಬೇಕು. ಉಪಜಾತಿ ಕಾಲಂನಲ್ಲಿ ತಮ್ಮ ಉಪಜಾತಿಗಳ ಸರಿಯಾದ ಹೆಸರನ್ನು ಬರೆಯಿಸಬೇಕು. ಗಣತಿದಾರರು ಸರಿಯಾಗಿ ಮಾಹಿತಿ ದಾಖಲಿಸಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು’ ಎಂದು ವಿವರಿಸಿದರು.

‘ಪ್ರತ್ಯೇಕ ಧರ್ಮದ ಮಾನ್ಯತೆ ಪರಿಗಣಿಸಿ’

‘ಈ ಹಿಂದಿನ ಸಮೀಕ್ಷೆಗಳಲ್ಲಿ ವೀರಶೈವ ಮತ್ತು ಲಿಂಗಾಯತರನ್ನು ಒಂದು ಜಾತಿ ಎಂದು ಪರಿಗಣಿಸಲಾಗಿದೆ. ಪ್ರತ್ಯೇಕ ಧರ್ಮದ ಮಾನ್ಯತೆಯನ್ನು ಅಧಿಕೃತವಾಗಿ ನೀಡಿಲ್ಲ. ಅದನ್ನು ಪರಿಗಣಿಸುವ ಅಗತ್ಯವಿದೆ’ ಎಂದು ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಹೇಳಿದರು.

‘ನಮ್ಮ ಸಮಾಜದಲ್ಲಿ ಹಿಂದುಳಿದವರು, ಅತಿ ಹಿಂದುಳಿದವರು ಮತ್ತು ಅತ್ಯಂತ ಹಿಂದುಳಿದವರಿದ್ದಾರೆ. ಸಮುದಾಯದ ಬಡವ ಮತ್ತು ಕಡು ಬಡವರಿಗೆ ಸರ್ಕಾರವು ಪ್ರಾಮಾಣಿಕವಾಗಿ ಅಂಕ ನೀಡಿ, ಸೂಕ್ತ ಪ್ರವರ್ಗಕ್ಕೆ ಸೇರಿಸಬೇಕು’ ಎಂದು ಅವರು ಒತ್ತಾಯಿಸಿದರು.

ಮೇಲ್ಮನೆಯಲ್ಲಿ ಕಾಂಗ್ರೆಸ್ ಮೇಲುಗೈ

ಒಂದನೇ ಪುಟದಿಂದ...

ಬಿಜೆಪಿ–ಜೆಡಿಎಸ್ ಸೇರಿ 37 ಸದಸ್ಯರ ಬಲ ಹೊಂದಿವೆ. ಮೇಲ್ನೋಟಕ್ಕೆ ಸಮಬಲ ಎನಿಸುವಂತಿದ್ದರೂ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ತಮ್ಮ ಲಖನ್ ಜಾರಕಿಹೊಳಿ ಪಕ್ಷೇತರ ಸದಸ್ಯರಾಗಿ ಮೇಲ್ಮನೆಯಲ್ಲಿದ್ದಾರೆ. ಹೀಗಾಗಿ, ಪರಿಷತ್ತಿನಲ್ಲಿ ಎದುರಿಸುತ್ತಿದ್ದ ಮುಜುಗರದಿಂದ ಪಾರಾಗುವ ದಾರಿ ಕಾಂಗ್ರೆಸ್ ಸಿಕ್ಕಂತಾಗಿದೆ.



ಕೆ. ಶಿವಕುಮಾರ್



ರಮೇಶ್ ಬಾಬು



ಜಕ್ಕಪ್ಪನವರ



ಆರತಿ ಕೃಷ್ಣ

ಬಿಜೆಪಿಯಿಂದ ಆಯ್ಕೆ ಆಗಿರುವ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಉಪಸಭಾಪತಿ ಎಂ.ಕೆ. ಪ್ರಾಣೇಶ್ ಅವರನ್ನು ಪಟ್ಟದಿಂದ ಕೆಳಗಿಳಿಸಿ, ಪಕ್ಷದ ಸದಸ್ಯರನ್ನು ಆ ಸ್ಥಾನಗಳಲ್ಲಿ ಕುಳ್ಳಿರಿಸಲು ಕೂಡಾ ಕಾಂಗ್ರೆಸ್‌ಗೆ ಅವಕಾಶ ಸಿಕ್ಕಂತಾಗಿದೆ.

ಐವರೇ ಮಹಿಳೆಯರು

ಕಾಂಗ್ರೆಸ್
- ಬಲ್ಕೀಸ್ ಬಾನು
- ಉಮಾಶ್ರೀ
- ಆರತಿ ಕೃಷ್ಣ

ಬಿಜೆಪಿ
- ಹೇಮಲತಾ ನಾಯಕ್
- ಭಾರತಿ ಶೆಟ್ಟಿ

ಜೆಡಿಎಸ್ - ಇಲ್ಲ

ಯಾರು ನಾಮ ನಿರ್ದೇಶನ?

ರಾಜ್ಯ ಸರ್ಕಾರದ ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷೆ, ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಆರತಿ ಕೃಷ್ಣ, ಎಐಸಿಸಿ ಪರಿಶಿಷ್ಟ ಜಾತಿ ವಿಭಾಗದ ಪ್ರಧಾನ ಕಾರ್ಯದರ್ಶಿ ಹುಬ್ಬಳ್ಳಿಯ ಎಫ್.ಎಚ್. ಜಕ್ಕಪ್ಪನವರ್, ಪತ್ರಕರ್ತ ಮೈಸೂರಿನ ಕೆ. ಶಿವಕುಮಾರ್ ಮತ್ತು ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಅವರನ್ನು ಕಾಂಗ್ರೆಸ್ ಪಕ್ಷ ನಾಮನಿರ್ದೇಶನ ಮಾಡಿದೆ.

ರಮೇಶ್ ಬಾಬು ಅವರಿಗೆ 2026ರ ಜುಲೈ 21ರ ವರೆಗೆ, ಉಳಿದವರಿಗೆ ಆರು ವರ್ಷ ಅವಕಾಶ ಸಿಗಲಿದೆ.

‘ನಮೋ ಯುವ ರನ್’ಗೆ ಚಾಲನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ 75ನೇ ಜನ್ಮ ದಿನಾಚರಣೆಯ ಅಂಗವಾಗಿ ಬಿಜೆಪಿ ಯುವ ಮೋರ್ಚಾವು ‘ನಮೋ ಯುವ ರನ್’ ಎಂಬ ಅಭಿಯಾನವನ್ನು ಆರಂಭಿಸಿದೆ.

ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ ಮತ್ತು ಅಭಿಯಾನದ ರಾಯಭಾರಿ, ನಟ ಮಿಲಿಂದ್ ಸೋಮನ್ ಅವರು ದೆಹಲಿಯಲ್ಲಿನ ಬಿಜೆಪಿಯ ಪ್ರಧಾನ ಕಚೇರಿಯಲ್ಲಿ ಅಭಿಯಾನಕ್ಕೆ ಭಾನುವಾರ ಚಾಲನೆ ನೀಡಿದರು. ‘ದೈಹಿಕ ಸಾಮರ್ಥ್ಯ ಕಾಪಾಡಿಕೊಳ್ಳುವಂತೆ ಮತ್ತು ಮಾದಕ ವಸ್ತುಗಳಿಂದ ದೂರವಿರುವಂತೆ ಯುವಕರನ್ನು ಪ್ರೇರೇಪಿಸಲು ಅಭಿಯಾನ ಆರಂಭಿಸಲಾಗಿದೆ ಎಂದು ಮಾಂಡವೀಯ ತಿಳಿಸಿದರು.

ಅಭಿಯಾನದ ಅಧಿಕೃತ ನೋಂದಣಿ ವೆಬ್‌ಸೈಟ್‌(www.namoyuvarun.com)ಅನಾವರಣಗೊಳಿಸಲಾಯಿತು.

ಸಿಐಡಿ ತನಿಖೆಯ ಹಾದಿತಪ್ಪಿಸಲು ಬಿಜೆಪಿಯು ಒತ್ತಡ ಹೇರುತ್ತಿದೆಯೇ– ಎಐಸಿಸಿ ಅಧ್ಯಕ್ಷ

‘ಮತಗಳ್ಳರಿಗೆ ಆಯೋಗದಿಂದ ರಕ್ಷಣೆ’

ನವದೆಹಲಿ (ಪಿಟಿಐ): ಚುನಾವಣಾ ಆಯೋಗವು ನಿರ್ಣಾಯಕ ಮಾಹಿತಿಯನ್ನು ಮುಚ್ಚಿಡುವ ಮೂಲಕ ‘ಮತ ಕಳ್ಳತನ’ದಲ್ಲಿ ಭಾಗಿಯಾಗಿದವರನ್ನು ರಕ್ಷಿಸುತ್ತಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಆರೋಪಿಸಿದರು.

2023ರ ಕರ್ನಾಟಕ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ನಕಲು ಮಾಡಿದ ಫಾರ್ಮ್ 7 ಬಳಸಿಕೊಂಡು ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಲು ವ್ಯವಸ್ಥಿತ ಪ್ರಯತ್ನ ನಡೆಸಲಾಗಿತ್ತು. ಪ್ರಕರಣದ ತಪ್ಪಿತಸ್ಥರನ್ನು ಬಂಧಿಸಲು ಅಗತ್ಯವಾದ ಮಾಹಿತಿಯನ್ನು ಚುನಾವಣಾ ಆಯೋಗ ಹಂಚಿಕೊಳ್ಳದ ಕಾರಣ ಸದ್ಯ ಪ್ರಕರಣವು ತಣ್ಣಗಾಗಿದೆ ಎಂದು ಹೇಳಲಾದ ಮಾಧ್ಯಮ ವರದಿಯನ್ನು ಖರ್ಗೆ ಅವರು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

2023ರ ಚುನಾವಣೆಗೂ ಮುನ್ನ ಆಳಂದ ಕ್ಷೇತ್ರದಲ್ಲಿ ಸಾವಿರಾರು ಮತದಾರರನ್ನು ಪಟ್ಟಿಯಿಂದ ಹೊರಗಿಡಲಾಯಿತು. ಈ ಬಗ್ಗೆ ಫೆಬ್ರುವರಿಯಲ್ಲಿ ದೂರು ದಾಖಲಿಸಲಾಯಿತು. 5,994 ನಕಲಿ ಅರ್ಜಿಗಳಿರುವುದು ತನಿಖೆ ವೇಳೆ ಪತ್ತೆಯಾಯಿತು. ಬಳಿಕ ಕಾಂಗ್ರೆಸ್ ಸರ್ಕಾರವು ಪ್ರಕರಣವನ್ನು ಸಿಐಡಿಗೆ ವಹಿಸಿತು. ಆಯೋಗವು ಮೊದಮೊದಲು ಕೆಲವು ದಾಖಲೆಗಳನ್ನು ಹಂಚಿಕೊಂಡಿತ್ತು. ಆದರೆ ಸದ್ಯ ನಿರ್ಣಾಯಕ ಮಾಹಿತಿಯನ್ನು ಮರೆಮಾಚುತ್ತಿದೆ. ಈ ಮೂಲಕ ಮತಗಳ್ಳರ ರಕ್ಷಣೆ ಮಾಡುತ್ತಿದೆ ಎಂದು ದೂರಿದರು.

‘ಆಯೋಗವು ಯಾರನ್ನು ರಕ್ಷಿಸುತ್ತಿದೆ; ಬಿಜೆಪಿಯ ಮತ ಕಳ್ಳತನ ಇಲಾಖೆಯನ್ನೇ? ಸಿಐಡಿ ತನಿಖೆಯ ಹಾದಿ ತಪ್ಪಿಸಲು ಬಿಜೆಪಿಯು ಒತ್ತಡ ಹೇರುತ್ತಿದೆಯೇ’ ಎಂದು ಅವರು ಪ್ರಶ್ನಿಸಿದರು.

ಖರ್ಗೆ ಅವರು ಆರೋಪಕ್ಕೆ ಸಂಬಂಧಿಸಿದಂತೆ ಆಯೋಗ ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ ಇದಕ್ಕೂ ಮುನ್ನ ಕಾಂಗ್ರೆಸ್ ಮಾಡಿದ್ದ ಎಲ್ಲ ಆರೋಪಗಳನ್ನೂ ಆಯೋಗ ಅಲ್ಲಗಳೆದಿತ್ತು.

‘ಕರ್ನಾಟಕ ಸರ್ಕಾರದ ನಡೆ ಸ್ವಾಗತಾರ್ಹ’



ಕಲಬುರಗಿ: ‘ದೇಶದಲ್ಲಿ 15–16 ವರ್ಷಗಳಿಂದ ಈಚೆಗೆ ಬಳಸುತ್ತಿರುವ ಇವಿಎಂಗಳನ್ನೇ ನೀವೆಲ್ಲ ನಂಬುವುದಾದರೆ, ದೇಶದಲ್ಲಿ 50 ವರ್ಷಗಳ ಕಾಲ ಬಳಸಿದ್ದ ಮತಪತ್ರಗಳನ್ನು ಯಾಕೆ ನಂಬಬಾರದು? ಎಂದು ಮಲ್ಲಿಕಾರ್ಜುನ ಖರ್ಗೆ ಇಲ್ಲಿ ಪ್ರತಿಕ್ರಿಯಿಸಿದರು.

‘ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರಗಳನ್ನು ಬಳಸುವ ಕರ್ನಾಟಕ ಸರ್ಕಾರದ ನಡೆ ಸ್ವಾಗತಾರ್ಹ’ ಎಂದು ಇಲ್ಲಿ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.


ಯಾವುದೇ ವ್ಯವಸ್ಥೆಯ ಆಗು–ಹೋಗುಗಳನ್ನು ನೋಡಿಕೊಂಡು ಬದಲಾವಣೆ ತರಲಾಗುತ್ತದೆ. ಕರ್ನಾಟಕ ಸರ್ಕಾರ ಅಂಥ ಬದಲಾವಣೆ ತರಲು ನಿರ್ಧರಿಸಿದೆ ಎಂದರು. ‘ನೀವು ಇವಿಎಂ ಬದಲಾಯಿಸುತ್ತೀರಿ, ಮತಗಳನ್ನೂ ಕಳ್ಳತನ ಮಾಡುತ್ತೀರಿ. ಕರ್ನಾಟಕದ ಕಲಬುರಗಿ ಹಾಗೂ ಬಿಹಾರದಲ್ಲೂ ಇದನ್ನು ನೋಡಿದ್ದೇವೆ. 2019ರ ಲೋಕಸಭೆ ಚುನಾವಣೆಯಲ್ಲಿ ಕಲಬುರಗಿ ಮತಕ್ಷೇತ್ರದ ಐದಾರು ಕಡೆ 20 ಸಾವಿರದಷ್ಟು ಮತಗಳ ಅಂತರ ಹೇಗೆ ಬರಲು ಸಾಧ್ಯ? ಹೀಗಾದರೆ ಇವಿಎಂ ಮೇಲೆ ನಂಬಿಕೆ ಹೇಗೆ ಬರಬೇಕು?’ ಎಂದರು.

ಎನ್‌ಡಿಎ–ವಿಪಕ್ಷ ಮಧ್ಯೆ ಪೈಪೋಟಿ

ಕುತೂಹಲ ಮೂಡಿಸಿರುವ ಬಿಜೆಡಿ, ಬಿಆರ್‌ಎಸ್ ನಡೆ

ಪ್ರಜಾವಾಣಿ ವಾರ್ತೆ/ಪಿಟಿಐ


ರಾಧಾಕೃಷ್ಣನ್


ಸುದರ್ಶನ ರೆಡ್ಡಿ

ನವದೆಹಲಿ: ಉಪರಾಷ್ಟ್ರಪತಿ ಚುನಾವಣೆ ಇದೇ 9ರಂದು ನಡೆಯಲಿದ್ದು, ಆಡಳಿತಾರೂಢ ಎನ್‌ಡಿಎ ಮತ್ತು ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿ ಭರದಿಂದ ಪ್ರಚಾರ ನಡೆಸುತ್ತಿದ್ದಾರೆ.

ಆದರೆ ಬಿಜೆಡಿ, ಬಿಆರ್‌ಎಸ್ ಸೇರಿದಂತೆ 17 ಸಂಸದರು ತಾವು ಯಾರಿಗೆ ಮತ ಚಲಾಯಿಸುತ್ತೇವೆ ಎಂಬುದರ ಕುರಿತ ನಿರ್ಧಾರವನ್ನು ಪ್ರಕಟಿಸದ ಕಾರಣ ಕುತೂಹಲ ಮೂಡಿಸಿದೆ.

ಎನ್‌ಡಿಎ ಅಭ್ಯರ್ಥಿಯಾಗಿ ಮಹಾರಾಷ್ಟ್ರದ ರಾಜ್ಯಪಾಲ, ತಮಿಳುನಾಡಿನ ಸಿ.ಪಿ.ರಾಧಾಕೃಷ್ಣನ್ ಮತ್ತು ವಿರೋಧ ಪಕ್ಷಗಳ ಅಭ್ಯರ್ಥಿಯಾಗಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ, ತೆಲಂಗಾಣದ ಬಿ.ಸುದರ್ಶನ ರೆಡ್ಡಿ ಕಣದಲ್ಲಿ ಇದ್ದಾರೆ. ಯಾರಿಗೆ ಮತ ಚಲಾಯಿಸಬೇಕು ಎಂಬುದನ್ನು ನಿರ್ಧರಿಸದ 17 ಸಂಸದರನ್ನು ಹೊರತುಪಡಿಸಿ, ಉಳಿದ ಎಲ್ಲ ಸಂಸದರು ತಮ್ಮ ಪಕ್ಷಗಳ ಆಧಾರದ ಮೇಲೆ ಮತ ಚಲಾಯಿಸಿದರೆ ರಾಧಾಕೃಷ್ಣನ್ ಅವರು ರೆಡ್ಡಿ ಅವರ ವಿರುದ್ಧ 439-324 ಮತಗಳೊಂದಿಗೆ ಮುನ್ನಡೆ ಪಡೆದುಕೊಳ್ಳಲಿದ್ದಾರೆ.

ಪ್ರಸ್ತುತ ಮತದಾರರ ಸಂಖ್ಯೆ 781 (ರಾಜ್ಯಸಭೆ, ಲೋಕಸಭೆಯ ಸದಸ್ಯರು) ಆಗಿದೆ. ಮತದಾರರ ಪಟ್ಟಿ ಸಿದ್ಧವಾದ ಬಳಿಕ ಶಿಬು ಸೊರೇನ್ ಅವರು ನಿಧನರಾದರು. ಅವರ ಸ್ಥಾನವೂ ಸೇರಿದಂತೆ ಒಟ್ಟು ಏಳು ಸ್ಥಾನಗಳು ಖಾಲಿ ಇವೆ. ಬಿಜೆಡಿ ಏಳು, ಬಿಆರ್‌ಎಸ್‌ನ ನಾಲ್ವರು, ಅಕಾಲಿದಳ, ಜಡ್‌ಪಿಎಮ್ ಮತ್ತು ವಿಒಟಿಟಿಪಿಯ ತಲಾ ಒಬ್ಬರು ಹಾಗೂ ಮೂವರು ಪಕ್ಷೇತರ ಸದಸ್ಯರು ತಮ್ಮ ಆದ್ಯತೆ ಯಾರಿಗೆ ಎಂಬುದರ ಸ್ಪಷ್ಟ ಸೂಚನೆ ಇಲ್ಲಿಯವರೆಗೂ ನೀಡಿಲ್ಲ.

'ಯಾರಿಗೆ ಮತ ಚಲಾಯಿಸಬೇಕು ಎಂಬುದರ ಬಗ್ಗೆ ಪಕ್ಷದ ನಾಯಕತ್ವ ಸೂಕ್ತ ಸಮಯದಲ್ಲಿ ನಿರ್ಧರಿಸಲಿದೆ' ಎಂದು ಬಿಜೆಡಿಯ ಸಸ್ಮಿತ್ ಪಾತ್ರ, ಬಿಆರ್‌ಎಸ್‌ನ ಕೆ. ಸುರೇಶ್ ರೆಡ್ಡಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ. ಜಡ್‌ಪಿಎಂ, ವಿಒಟಿಟಿಪಿ ಸಂಸದರು ಈ ಕುರಿತು ಪ್ರತಿಕ್ರಿಯಿಸಲಿಲ್ಲ. ಅಕಾಲಿದಳ ಮತ್ತು ಪಕ್ಷೇತರ ಸಂಸದರ ಸಂಪರ್ಕ ಸಾಧ್ಯವಾಗಲಿಲ್ಲ.

'ಇಂಡಿಯಾ' ಕೂಟ ತೊರೆದಿರುವ ಎಎಪಿ ತನ್ನ 10 ಸಂಸದರ ಬೆಂಬಲವನ್ನು ರೆಡ್ಡಿ ಅವರಿಗೆ ಸೂಚಿಸಿದ್ದರೆ, ಯಾವುದೇ ಬಣದ ಜತೆ ಗುರುತಿಸಿಕೊಳ್ಳದ ವೈಎಸ್‌ಆರ್ ಕಾಂಗ್ರೆಸ್ ತನ್ನ 11 ಸದಸ್ಯರ ಬೆಂಬಲವನ್ನು ರಾಧಾಕೃಷ್ಣನ್ ಅವರಿಗೆ ನೀಡುವುದಾಗಿ ತಿಳಿಸಿದೆ.

ಗೋಪ್ಯ ಮತದಾನ ಆದ್ದರಿಂದ ಅಡ್ಡ ಮತದಾನದ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಇದರ ನಿರೀಕ್ಷೆಯಲ್ಲಿರುವ ಆಡಳಿತ ಮತ್ತು ವಿರೋಧ ಪಕ್ಷಗಳ ನಾಯಕರು ತಮ್ಮ ಅಭ್ಯರ್ಥಿಯ ಮತಗಳಿಕೆಯಲ್ಲಿ ಆಗಬಹುದಾದ ಏರಿಳಿತ ಕುರಿತು ಲೆಕ್ಕಾಚಾರದಲ್ಲಿ ತೊಡಗಿದ್ದಾರೆ.

ಸಂಜೆ 6ಕ್ಕೆ ಮತ ಎಣಿಕೆ

ಮತದಾನ ಇದೇ 9ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೂ ನಡೆಯಲಿದೆ. ಅದೇ ದಿನ ಸಂಜೆ 6 ಗಂಟೆಗೆ ಮತ ಎಣಿಕೆ ನಡೆಯಲಿದ್ದು, ಬಳಿಕ ಫಲಿತಾಂಶ ಪ್ರಕಟವಾಗಲಿದೆ.

ಕಾಡುತ್ತಿರುವ ಅಮಾನ್ಯ ಮತಗಳು

ಪ್ರಾಶಸ್ತ್ಯ ಮತದಾನ ಪದ್ಧತಿಯಡಿ ನಡೆಯುವ ಉಪರಾಷ್ಟ್ರಪತಿ ಚುನಾವಣೆಯಲ್ಲಿ ಚಲಾವಣೆಯಾದ ಮತಗಳು ಈ ಹಿಂದೆ ಅಮಾನ್ಯಗೊಂಡದ್ದಿದೆ. ಹೀಗಾಗಿಯೇ ಸಂಸದರಿಗೆ ಈ ಮತದಾನ ಪದ್ಧತಿಯ ಬಗ್ಗೆ ಸೂಕ್ತ ತರಬೇತಿ ನೀಡಲು ಆಡಳಿತ ಮತ್ತು ವಿರೋಧ ಪಕ್ಷಗಳು ಕಾಳಜಿವಹಿಸಿವೆ.

ಈ ಪದ್ಧತಿಯಡಿ ಹೇಗೆ ಮತ ಚಲಾಯಿಸಬೇಕು ಎಂಬುದರ ಕುರಿತು ಬಿಜೆಪಿ ಈಗಾಗಲೇ ತನ್ನ ಸಂಸದರಿಗೆ ತರಬೇತಿ ನೀಡಲು ಆರಂಭಿಸಿದೆ. ವಿರೋಧ ಪಕ್ಷವು ಸಂವಿಧಾನ ಸದನದ ಸೆಂಟ್ರಲ್ ಹಾಲ್‌ನಲ್ಲಿ ಸೋಮವಾರ ಅಣಕು ಮತದಾನ ಏರ್ಪಡಿಸಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಂಸತ್ತಿನ ಅನೆಕ್ಸ್‌ನಲ್ಲಿ ರಾತ್ರಿ ಭೋಜನ ಕೂಟ ಆಯೋಜಿಸಿದ್ದಾರೆ.

2017 ಮತ್ತು 2022ರ ಚುನಾವಣೆಯಲ್ಲಿ ಕ್ರಮವಾಗಿ 11 ಮತ್ತು 15 ಮತಗಳು ಅಮಾನ್ಯವಾಗಿದ್ದವು. 1997ರಲ್ಲಿ ಅತ್ಯಧಿಕ ಅಂದರೆ 46 ಮತಗಳು ಅಮಾನ್ಯಗೊಂಡಿದ್ದವು.

ಮೈತ್ರಿಗಳ ನಡುವೆ ತೀವ್ರ ಸ್ಪರ್ಧೆ

ವಿಪಕ್ಷಗಳ ಎಲ್ಲ 324 ಮತಗಳು ಚಲಾವಣೆಯಾಗಿ ಅದರ ಅಭ್ಯರ್ಥಿ ಸೋತರೂ, ಅದು ಇಲ್ಲಿಯವರೆಗೆ ಸೋತ ಅಭ್ಯರ್ಥಿ ಪಡೆದ ಅತ್ಯಧಿಕ ಮತಗಳಾಗಿರುತ್ತವೆ. 2002ರಲ್ಲಿ ನಡೆದ ಉಪರಾಷ್ಟ್ರ-ಪತಿ ಚುನಾವಣೆಯಲ್ಲಿ ಸುಶೀಲ್ ಕುಮಾರ್ ಶಿಂಧೆ ಅವರು 305 ಮತಗಳನ್ನು ಪಡೆದು ಸೋತಿದ್ದರು. ಆ ಚುನಾವಣೆಯಲ್ಲಿ ಭೈರೋನ್ ಸಿಂಗ್ ಶೆಖಾವತ್ ಅವರು 454 ಮತಗಳನ್ನು ಪಡೆದು ಗೆದ್ದಿದ್ದರು. ಇದು ಉಪರಾಷ್ಟ್ರಪತಿ ಸ್ಥಾನಕ್ಕೆ ಇಲ್ಲಿಯವರೆಗೂ ನಡೆದಿರುವ ಅತ್ಯಂತ ಬಿಗಿಯಾದ ಚುನಾವಣೆ ಎಂದೇ ಗುರುತಿಸಲಾಗಿದೆ.

2022ರ ಚುನಾವಣೆಯಲ್ಲಿ ಟಿಎಂಸಿ ಸಂಸದರು ಮತ ಚಲಾಯಿಸದಿದ್ದರೂ ಜಗದೀಪ್ ಧನಕರ್ 528 ಮತಗಳನ್ನು ಪಡೆದು ಗೆದ್ದಿದ್ದರು. ಅದಕ್ಕೂ ಹಿಂದಿನ ಚುನಾವಣೆಯಲ್ಲಿ ಎಂ. ವೆಂಕಯ್ಯ ನಾಯ್ಡು ಅವರು 516 ಮತಗಳನ್ನುಗಳಿಸಿ ಉಪರಾಷ್ಟ್ರಪತಿ ಆಗಿದ್ದರು. ಆದರೆ ಈ ಬಾರಿ ಎನ್‌ಡಿಎ ಅಭ್ಯರ್ಥಿ 500 ಮತಗಳನ್ನು ದಾಟುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

ಅಶೋಕ ಲಾಂಛನದ ಫಲಕ ಧ್ವಂಸ: 50 ಜನರು ವಶಕ್ಕೆ

ಶ್ರೀನಗರ (ಪಿಟಿಐ): ಹಜರತ್‌ಬಾಲ್ ಮಸೀದಿಯಲ್ಲಿ ಅಶೋಕ ಲಾಂಛನ ಹೊಂದಿದ್ದ ಫಲಕವನ್ನು ಧ್ವಂಸಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ 50ಕ್ಕೂ ಹೆಚ್ಚು ಜನರನ್ನು ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಲ್ಲದೆ ಈ ಕೃತ್ಯ ಎಸಗಿದವರಿಗಾಗಿ ಪೊಲೀಸರು ತೀವ್ರ ಶೋಧ ನಡೆಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ಭಾನುವಾರ ಹೇಳಿದ್ದಾರೆ.

ಶುಕ್ರವಾರದ ಸಾಮೂಹಿಕ ಪ್ರಾರ್ಥನೆ ಬಳಿಕ ಈ ಘಟನೆ ನಡೆದಿದ್ದು, ಪೊಲೀಸರು ಸಿಸಿಟಿವಿ ಕ್ಯಾಮೆರ ದೃಶ್ಯಗಳು ಮತ್ತು ಘಟನೆಯ ವಿಡಿಯೊಗಳನ್ನು ಪರಿಶೀಲಿಸಿ, ಇಷ್ಟು ಜನರನ್ನು ವಶಕ್ಕೆ ಪಡೆದಿದ್ದಾರೆ.

'ಪಕ್ಷಕ್ಕಿಂತ ದೇಶಪ್ರೇಮ ಮುಖ್ಯ'

ನವದೆಹಲಿ (ಪಿಟಿಐ): 'ಮತ ಚಲಾಯಿಸುವ ಸಂದರ್ಭದಲ್ಲಿ ಪಕ್ಷ ನಿಷ್ಠೆಯನ್ನು ಬದಿಗಿಟ್ಟು, ದೇಶದ ಮೇಲೆ ನಿಮಗಿರುವ ಪ್ರೀತಿಯನ್ನು ಗಮನದಲ್ಲಿಡಿ' ಎಂದು ಉಪರಾಷ್ಟ್ರಪತಿ ಚುನಾವಣೆಯ ವಿಪಕ್ಷಗಳ ಅಭ್ಯರ್ಥಿ ಬಿ.ಸುದರ್ಶನ ರೆಡ್ಡಿ ಅವರು ಸಂಸದರಿಗೆ ಮನವಿ ಮಾಡಿದ್ದಾರೆ.

ಸಂಸದರನ್ನು ಉದ್ದೇಶಿಸಿ ಭಾನುವಾರ ವಿಡಿಯೊ ಸಂದೇಶ ಕಳುಹಿಸಿರುವ ಅವರು, 'ನನಗಾಗಿ ಬೆಂಬಲ ಕೊಡಿ ಎಂದು ನಿಮ್ಮನ್ನು ಕೇಳುತ್ತಿಲ್ಲ. ನಮ್ಮ ದೇಶವನ್ನು ಸಾರ್ವಭೌಮ ಪ್ರಜಾಪ್ರಭುತ್ವ ಗಣರಾಜ್ಯ ಎಂದು ವ್ಯಾಖ್ಯಾನಿಸುವ ಮೌಲ್ಯಗಳಿಗೆ ಬೆಂಬಲ ಕೊಡಿ' ಎಂದು ಕೋರಿದ್ದಾರೆ.

'ಈ ಚುನಾವಣೆಯಲ್ಲಿ ಯಾವುದೇ ರಾಜಕೀಯ ಪಕ್ಷಕ್ಕೆ ನಿಷ್ಠೆ ತೋರಿಸಬೇಡಿ. ದೇಶದ ಮೇಲಿನ ಪ್ರೀತಿ ನಿಮ್ಮ ಆಯ್ಕೆಯ ಮೇಲೆ ಪ್ರಭಾವ ಬೀರಬೇಕು. ನಮ್ಮ ಪ್ರಜಾಪ್ರಭುತ್ವ ಗಣರಾಜ್ಯದ ಆತ್ಮವನ್ನು ರಕ್ಷಿಸುವ ನೈತಿಕ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ' ಎಂದು ಹೇಳಿದ್ದಾರೆ.

'ಈ ಹುದ್ದೆಯ (ಉಪರಾಷ್ಟ್ರಪತಿ) ಜವಾಬ್ದಾರಿಯನ್ನು ನನಗೆ ವಹಿಸುವ ಮೂಲಕ ನೀವು ಸಂಸದೀಯ ಸಂಪ್ರ-ದಾಯಗಳನ್ನು ರಕ್ಷಿಸಲು ಮತ್ತು ರಾಜ್ಯಸಭೆಯು ಪ್ರಜಾಪ್ರಭುತ್ವದ ನಿಜವಾದ ದೇವಾಲಯವಾಗಿ ನಿಲ್ಲುವಂತೆ ನೋಡಿಕೊಳ್ಳಲು ನೆರವಾಗುವಿರಿ' ಎಂದಿದ್ದಾರೆ.

ದೇಶಕ್ಕೆ ಚೈತನ್ಯ ತುಂಬುವ ಮತ: ಸುದರ್ಶನ ರೆಡ್ಡಿ

'ನೀವು ಚಲಾಯಿಸಲಿರುವ ಮತ ಕೇವಲ ಉಪರಾಷ್ಟ್ರಪತಿಯನ್ನು ಆಯ್ಕೆ ಮಾಡುತ್ತಿಲ್ಲ. ಇದು ದೇಶಕ್ಕೆ ಚೈತನ್ಯ ತುಂಬುವ ಮತ' ಎಂದು ಬಿ. ಸುದರ್ಶನ ರೆಡ್ಡಿ ಪ್ರತಿಪಾದಿಸಿದ್ದಾರೆ.

'ವಿನಯದಿಂದ ಮತ್ತು ಬಲುದೊಡ್ಡ ಜವಾಬ್ದಾರಿಯೊಂದಿಗೆ ಉಪರಾಷ್ಟ್ರಪತಿ ಹುದ್ದೆಯ ಅಭ್ಯರ್ಥಿಯಾಗಿ ನಿಮ್ಮ ಮುಂದೆ ನಿಂತಿದ್ದೇನೆ. ಎಲ್ಲರೂ ಒಟ್ಟಾಗಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸೋಣ ಮತ್ತು ಭವಿಷ್ಯದ ಪೀಳಿಗೆಯ ಮಂದಿ ಹೆಮ್ಮೆಪಟ್ಟುಕೊಳ್ಳುವಂತಹ ಪರಂಪರೆಯನ್ನು ನಿರ್ಮಿಸೋಣ' ಎಂದು ಅವರು ಮನವಿ ಮಾಡಿದ್ದಾರೆ.

ಗಣೇಶ ವಿಸರ್ಜನೆ: 10ಕ್ಕೂ ಹೆಚ್ಚು ಸಾವು

ಪ್ರಜಾವಾಣಿ ವಾರ್ತೆ

ಮುಂಬಯಿ: ವಾರಾಂತ್ಯದಲ್ಲಿ ನಡೆದ ಗಣೇಶ ಮೂರ್ತಿ ವಿಸರ್ಜನೆ ವೇಳೆ ಮಹಾರಾಷ್ಟ್ರದಾದ್ಯಂತ 10ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು ಐವರು ಗಾಯಗೊಂಡಿದ್ದಾರೆ. ಅಲ್ಲದೆ, ಅನೇಕರು ನಾಪತ್ತೆಯಾಗಿದ್ದಾರೆ.

ರಾಜ್ಯದಾದ್ಯಂತ ನಡೆದ ಪ್ರತ್ಯೇಕ ಘಟನೆಗಳಲ್ಲಿ ಹೆಚ್ಚಿನವರು ನೀರಲ್ಲಿ ಮುಳುಗಿ ಮೃತಪಟ್ಟಿದ್ದು, ಮುಂಬೈಯಲ್ಲಿ ವಿದ್ಯುತ್ ಅವಘಡದಿಂದಾಗಿ ದುರಂತ ಸಂಭವಿಸಿರುವ ಉದಾಹರಣೆಗಳೂ ಇವೆ.

ಮುಂಬೈನ ಕುರ್ಲಾದ ಖೈರಾನಿ ರಸ್ತೆಯಲ್ಲಿ ನೇತಾಡುತ್ತಿದ್ದ ವಿದ್ಯುತ್ ತಂತಿಯು ಗಣೇಶ ಮೂರ್ತಿಗೆ ತಗುಲಿ ಆರು ಜನರಿಗೆ ವಿದ್ಯುತ್ ಆಘಾತವಾಗಿದೆ. ಘಟನೆಯಲ್ಲಿ ಸುಕುಮಾರನ್ ಕುಮಾರನ್ (36) ಮೃತಪಟ್ಟಿದ್ದು, ಇಬ್ಬರು ಬಾಲಕರು ಸೇರಿ ಐವರು ಚಿಕಿತ್ಸೆ ಪಡೆಯುತ್ತಿದ್ದಾರೆ.

ಮತ್ತೊಂದು ದುರಂತವು ಠಾಣೆ ಜಿಲ್ಲೆಯ ಶಹಾಪುರ ತಾಲ್ಲೂಕಿನಲ್ಲಿ ಗಣೇಶ ವಿಸರ್ಜನೆ ಸಂದರ್ಭ ಭಾರಂಗಿ ನದಿಯಲ್ಲಿ ಸಂಭವಿಸಿದೆ. ಐವರು ನೀರಿನಲ್ಲಿ ಮುಳುಗಿದ್ದು, ಪ್ರತೀಕ್ ಮುಂಡೆ ಎಂಬವರು ಮೃತಪಟ್ಟಿದ್ದಾರೆ. ಇಬ್ಬರನ್ನು ರಕ್ಷಿಸಲಾಗಿದ್ದು, ಇನ್ನಿಬ್ಬರ ಶೋಧ ಕಾರ್ಯ ನಡೆಯುತ್ತಿದೆ.

ಪುಣೆಯಲ್ಲಿ ಸಂಭವಿಸಿದ ಪ್ರತ್ಯೇಕ ಘಟನೆಗಳಲ್ಲಿ ನಾಲ್ವರು ನೀರು ಪಾಲಾಗಿದ್ದು, ಇಬ್ಬರ ಶವ ಪತ್ತೆಯಾಗಿದೆ. ಇನ್ನಿಬ್ಬರ ಪತ್ತೆಗೆ ಶೋಧ ಕಾರ್ಯ ನಡೆದಿದೆ.

ನಾಂದೇಡ್ ಜಿಲ್ಲೆಯಲ್ಲಿ ಗಡೇಗಾಂವ್‌ನ ನದಿಯೊಂದರಲ್ಲಿ ಮೂವರು ಕೊಚ್ಚಿಕೊಂಡು ಹೋಗಿದ್ದು, ಒಬ್ಬರನ್ನು ರಕ್ಷಿಸಲಾಗಿದೆ. ಇನ್ನಿಬ್ಬರ ಪತ್ತೆ ಕಾರ್ಯ ಮುಂದುವರೆದಿದೆ. ನಾಸಿಕ್ ಜಿಲ್ಲೆಯಲ್ಲಿ ನಾಲ್ವರು ಕೊಚ್ಚಿಕೊಂಡು ಹೋಗಿದ್ದು, ಒಬ್ಬರ ಮೃತದೇಹ ಪತ್ತೆಯಾಗಿದೆ. ಜಲಗಾಂವ್‌ನಲ್ಲಿ ನಡೆದ ಪತ್ಯೇಕ ಘಟನೆಗಳಲ್ಲಿ ಮೂವರು ಕೊಚ್ಚಿಕೊಂಡು ಹೋಗಿದ್ದಾರೆ.


ಮುಂಬಯಿಯ ಗಿರ್‌ಗಾವ್‌ನ ಚೌಪಟ್ಟಿಯಲ್ಲಿ ಜನರು ಗಣೇಶ ಮೂರ್ತಿಯನ್ನು ಶನಿವಾರ ವಿಸರ್ಜಿಸಿದರು – ಪಿಟಿಐ ಚಿತ್ರ

ಹೊಳೆಗೆ ಬಿದ್ದು ಇಬ್ಬರು ಬಾಲಕರು ಸಾವು

ರಾಯ್‌ಸೇನ್ (ಮಧ್ಯಪ್ರದೇಶ) (ಪಿಟಿಐ): ಮಧ್ಯಪ್ರದೇಶದ ರಾಯ್‌ಸೇನ್ ಜಿಲ್ಲೆಯಲ್ಲಿ ಗಣೇಶ ವಿಗ್ರಹ ವಿಸರ್ಜನೆಯ ವೇಳೆ ಇಬ್ಬರು ಹದಿಹರೆಯದ ಬಾಲಕರು ಹೊಳೆಗೆ ಬಿದ್ದು ಮೃತಪಟ್ಟಿದ್ದಾರೆ ಎಂದು ಭಾನುವಾರ ಪೊಲೀಸರು ತಿಳಿಸಿದ್ದಾರೆ. ಶನಿವಾರ ರಾತ್ರಿ 8 ಗಂಟೆಗೆ ಘಟಖೇಡ ಗ್ರಾಮದಲ್ಲಿ ಘಟನೆ ನಡೆದಿದ್ದು, ಅನುಜ್ ಸಾಹು (16) ನಿತಿನ್ ಸಾಹು (17) ಮೃತಪಟ್ಟವರು.

ಒಂದೇ ಕುಟುಂಬದ ಐವರು ಬಾಲಕರು ತಮ್ಮ ಮನೆಯಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯನ್ನು ವಿಸರ್ಜನೆ ಮಾಡಲು ಹೋದಾಗ ದುರಂತ ಸಂಭವಿಸಿದೆ ಎಂದು ಅವರು ತಿಳಿಸಿದ್ದಾರೆ. ಹೊಳೆಯ ಕಲ್ಲೊಂದರ ಮೇಲೆ ಅವರು ನಿಂತಿದ್ದಾಗ ಅದು ಉರುಳಿ ಬಿದ್ದು, ಐವರು ನೀರು ಪಾಲಾದರು ಎಂದು ಅವರು ಹೇಳಿದ್ದಾರೆ.

ಸಂಸದರ ಜೊತೆ ಕೊನೆಯ ಸಾಲಿನಲ್ಲಿ ಕುಳಿತ ಪ್ರಧಾನಿ

ಬಿಜೆಪಿ ಕಾರ್ಯಾಗಾರದಲ್ಲಿ ಮೋದಿ ಭಾಗಿ

ನವದೆಹಲಿ (ಪಿಟಿಐ): ಎನ್‌ಡಿಎ ಮೈತ್ರಿಕೂಟದ ಸಂಸದರಿಗಾಗಿ ಬಿಜೆಪಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಭಾಗವಹಿಸಿದ್ದರು. ಈ ವೇಳೆ ಅವರು ಸಾಮಾನ್ಯರಂತೆ ಕೊನೆಯ ಸಾಲಿನಲ್ಲಿ ಕುಳಿತಿದ್ದರು ಎಂದು ಸಂಸದರು ಹೇಳಿದರು.

ಪ್ರಧಾನಿ ಮೋದಿ ಅವರು ಭಾಗಿಯಾಗಿದ್ದ ಫೋಟೊವನ್ನು ಬಿಜೆಪಿ ಸಂಸದ ರವಿ ಕಿಶನ್ ಹಂಚಿಕೊಂಡಿದ್ದಾರೆ. 'ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಯಾಗಾರದಲ್ಲಿ ಕೊನೆಯ ಸಾಲಿನಲ್ಲಿ ಕುಳಿತಿರುವುದು ಬಿಜೆಪಿಯ ಶಕ್ತಿಯನ್ನು ಬಿಂಬಿಸುತ್ತದೆ. ಪ್ರತಿ ಕಾರ್ಯಕರ್ತನೂ ಬಿಜೆಪಿಯ ಭಾಗವಾಗಿರುತ್ತಾನೆ' ಎಂದು ಅವರು ಬರೆದುಕೊಂಡಿದ್ದಾರೆ.

ಮುಖ್ಯಾಂಶಗಳು

- ಚಿತ್ರ ಹಂಚಿಕೊಂಡ ಸಂಸದ ರವಿ ಕಿಶನ್
- ಬಿಜೆಪಿಯ ಶಕ್ತಿಯನ್ನು ಪ್ರತಿಬಿಂಬ ಎಂದ ಸಂಸದ
- ಸಂಸತ್ತಿನ ಜಿಎಂಸಿ ಬಾಲಯೋಗಿ ಸಭಾಂಗಣದಲ್ಲಿ ಸಭೆ

ಸಂಸತ್ತಿನ ಸಂಕೀರ್ಣದಲ್ಲಿರುವ ಜಿಎಂಸಿ ಬಾಲಯೋಗಿ ಸಭಾಂಗಣದಲ್ಲಿ ಬಿಜೆಪಿ ಆಯೋಜಿಸಿದ್ದ ಎರಡು ದಿನಗಳ ಕಾರ್ಯಾಗಾರದಲ್ಲಿ ಪಕ್ಷದ ಇತಿಹಾಸ, ಬೆಳವಣಿಗೆ ಸೇರಿದಂತೆ ಸಂಸದರ ದಕ್ಷತೆ ಹೆಚ್ಚಿಸಲು ಅಗತ್ಯವಿರುವ ಸಲಹೆಗಳನ್ನು ನೀಡಲಾಯಿತು.

ಸರಕು ಮತ್ತು ಸೇವಾ ತೆರಿಗೆಯಲ್ಲಿನ (ಜಿಎಸ್‌ಟಿ) ಇತ್ತೀಚಿನ ಸುಧಾರಣೆಗಳನ್ನು ಸಂಸದರು ಶ್ಲಾಘಿಸಿದರು.

'2027ಕ್ಕೆ ಅಭಿವೃದ್ಧಿ ಹೊಂದಿದ ಭಾರತದ ಕಡೆಗೆ' ಹಾಗೂ 'ಸಂಸದರಿಂದ ಸಾಮಾಜಿಕ ಜಾಲತಾಣಗಳ ಪರಿಣಾಮಕಾರಿ ಬಳಕೆ' ಎಂಬ ವಿಷಯಗಳ ಕುರಿತು ಕಾರ್ಯಾಗಾರದ ಮೊದಲ ದಿನ (ಭಾನುವಾರ) ಚರ್ಚಿಸಲಾಯಿತು.

ಕೃಷಿ, ರಕ್ಷಣೆ, ಶಿಕ್ಷಣ, ರೈಲ್ವೆ ಮತ್ತು ಸಾರಿಗೆ ಸೇರಿದಂತೆ ಅನೇಕ ಕ್ಷೇತ್ರಗಳ ಕುರಿತೂ ಚರ್ಚಿಸಲಾಗಿದೆ ಎಂದು ಸಂಸದರು ತಿಳಿಸಿದರು.


ಬಿಜೆಪಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಭಾನುವಾರ ಭಾಗವಹಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಕೊನೆಯ ಸಾಲಿನಲ್ಲಿ ಕುಳಿತಿದ್ದರು – ಪಿಟಿಐ ಚಿತ್ರ



ಇತರರು ಏನು ಮಾಡುತ್ತಾರೆ ಅಥವಾ ಯಾವುದರಲ್ಲಿ ಸೋಲುತ್ತಾರೆ ಎಂಬ ಬಗ್ಗೆ ನೀವು ಗಮನಹರಿಸಬೇಕಾದ ಅಗತ್ಯವಿಲ್ಲ. ನೀವು ಏನು ಮಾಡುತ್ತೀರಿ ಅಥವಾ ಮಾಡುವುದರಲ್ಲಿ ಸೋಲುತ್ತಿದ್ದೀರಿ ಎಂಬುದರ ಬಗ್ಗೆ ಗಮನಹರಿಸಿ.
–ಗೌತಮ ಬುದ್ಧ



ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

20) ಕೆಳಗಿನವುಗಳನ್ನು ಗಮನಿಸಿ

1) ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯ ಮಾಡಿತು.

2) ಅವನೇ ನೇರವಾಗಿ ತಾನು ಕೃಷಿ ಭೂಮಿಯಲ್ಲಿ ಪಡೆದ ಉತ್ಪನ್ನದ ಶೇಕಡ 50ರಷ್ಟು ಭಾಗವನ್ನು ಕಂದಾಯದ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಾಯಿತು.

3) ಕಂದಾಯವನ್ನು 30 ವರ್ಷಗಳ ಅವಧಿಗೆ ಎಂದು ನಿರ್ಧರಿಸಲಾಯಿತು. ನಂತರ ಅದನ್ನು ಪರಾಮರ್ಶೆಗೂ ಒಳಪಡಿಸಬಹುದಾಗಿತ್ತು. *(ಮುಂದುವರಿಯುವುದು)*

ಮೇಲೆ ಹೇಳಿದ ಲಕ್ಷಣಗಳು ಯಾವ ಕಂದಾಯ ಪದ್ಧತಿಗೆ ಸೇರಿದ್ದವು?

ಎ) ರೈತವಾರಿ. ಬಿ) ಮಹಲವಾರಿ
ಸಿ) ಕಾಯಂ ಜಮೀನ್ದಾರಿ ಡಿ) ಮೇಲಿನ ಯಾವುದೂ ಅಲ್ಲ.

ಉತ್ತರ:– ಎ

21) ಈ ದೋಷಗಳನ್ನು ಗಮನಿಸಿ

1) ಭೂಕಂದಾಯವನ್ನು ಈ ಪದ್ಧತಿಯು ಹೆಚ್ಚಿನ ವಾರ್ಷಿಕ ಮೊತ್ತಕ್ಕೆ ನಿಗದಿಪಡಿಸಿದ್ದರಿಂದ ರೈತರು ಸಂಕಷ್ಟಗಳಿಗೆ ಒಳಗಾದರು.

2) ಕಂದಾಯ ವಸೂಲು ಮಾಡುವ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುತ್ತಿದ್ದರು.

3) ಬೆಳೆಗಳು ಸರಿಯಾಗಿ ಫಸಲು ನೀಡದ ಸಂದರ್ಭದಲ್ಲಿ ರೈತರು ಹಣದ ಲೇವಾದೇವಿಗಾರರಿಂದ (Money Lender) ಸಾಲ ತೆಗೆದುಕೊಂಡು, ಮರು ಪಾವತಿಸಲಾಗದೆ ಅವರಿಗಿದ್ದ ಸಣ್ಣ ಪುಟ್ಟ ಜಮೀನನ್ನು ಮಾರಾಟ ಮಾಡುವಂತಾಯಿತು.

4) ರೈತರ ಒಳಿತಿಗಾಗಿ ಈ ಪದ್ಧತಿಯನ್ನು ಜಾರಿಗೊಳಿಸಲಾಗಿದೆ ಎಂದು ಬ್ರಿಟಿಷ್ ಸರ್ಕಾರ ಹೇಳಿದರೂ, ಗರಿಷ್ಠ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದ್ದು ಈ ಪದ್ಧತಿಯಿಂದಲೇ ಎನ್ನುವುದು ವಿಪರ್ಯಾಸ

ಈ ದೋಷಗಳು ಯಾವುದಕ್ಕೆ ಸಂಬಂಧಿಸಿದೆ?

ಎ) ಮಹಲವಾರಿ ಬಿ) ರೈತವಾರಿ
ಸಿ) ಕಾಯಂ ಜಮೀನ್ದಾರಿ ಡಿ) ಮೇಲಿನ ಯಾವುದೂ ಅಲ್ಲ.

ಉತ್ತರ:– ಬಿ

22) ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ ಯಾರು?

ಎ) ವಾರನ್ ಹೇಸ್ಟಿಂಗ್ಸ್. ಬಿ) ಮಿಂಟೋ
ಸಿ) ಡಫರಿನ್ ಡಿ) ಕಾರ್ನ್ ವಾಲೀಸ್

ಉತ್ತರ:– ಎ

23) 1781ರಲ್ಲಿ 'ಕಲ್ಕತ್ತಾ ಮದರಸಾ'ವನ್ನು ಪ್ರಾರಂಭಿಸಲಾಯಿತು ಹಾಗಾದರೆ 1792ರಲ್ಲಿ ಜೊನಾಥನ್ ಡಂಕನ್ ಎಂಬ ಬ್ರಿಟಿಷ್ ವ್ಯಕ್ತಿಯು ಪ್ರಯತ್ನದಿಂದ ಸಂಸ್ಕೃತ ಕಾಲೇಜು ಎಲ್ಲಿ ಆರಂಭವಾಯಿತು?

ಎ) ಬನಾರಸ್ ಬಿ) ಚೆನ್ನೈ
ಸಿ) ಮುಂಬೈ ಡಿ) ಮೈಸೂರು

ಉತ್ತರ:– ಎ

24) ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ಯಾರನ್ನು ಕಾನೂನು ಸದಸ್ಯನನ್ನಾಗಿ ಬೆಂಟಿಂಕ್‌ನು ನೇಮಕ ಮಾಡಿದನು?

ಎ) ಮೆಟ್ಕಾಫ್ ಬಿ) ಜೋನಾಥ್ ಡೆಂಕನ್
ಸಿ) ಮೆಕಾಲೆ ಡಿ) ಮೇಲಿನ ಯಾರೂ ಅಲ್ಲ

ಉತ್ತರ:– ಸಿ

25) 1835ರಲ್ಲಿ ಇಂಗ್ಲಿಷ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯಾರು ವರದಿಯನ್ನು ನೀಡಿದನು? (ಮುಂದೆ ಇದೇ ವರದಿಯೇ ಅಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು)

ಎ) ಪೀಲ್ ಬಿ) ಮೆಕಾಲೆ
ಸಿ) ಸ್ಟಾಲಿನ್ ಡಿ) ಜೋಸೆಫ್

ಉತ್ತರ:– ಬಿ

26) ಯಾರ ಯೋಜನೆಯ ಪ್ರಮುಖ ಅಂಶವು "ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ ಅಭಿರುಚಿ, ಅಭಿಪ್ರಾಯ, ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲಿಷರಾಗುವ ಹೊಸ ಭಾರತೀಯ ವಿದ್ಯಾವಂತ ವರ್ಗವನ್ನು ಸೃಷ್ಟಿ ಮಾಡುವುದು". ಆಗಿತ್ತು?

ಎ) ಮೆಟ್ಕಾಫ್ ಬಿ) ಜೋನಾಥ್ ಡೆಂಕನ್
ಸಿ) ಮೆಕಾಲೆ ಡಿ) ಪೀಲ್

ಉತ್ತರ:– ಸಿ

27) ....(1854) ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅಂದಿನ ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು 1857ರಲ್ಲಿ ಸ್ಥಾಪಿಸಿದನು.

ಎ) ಸರ್ ಚಾರ್ಲ್ಸ್ ವುಡ್ಸ್‌ನ ಬಿ) ಲಾರ್ಡ್ ಮೆಕಾಲೆನ
ಸಿ) ಜೋನಾಥ್ ಡೆಂಕನ್‌ನ ಡಿ) ಮನ್ರೋನ

ಉತ್ತರ:– ಎ

28) ವಾರ್ಷಿಕವಾಗಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದವನು. ಯಾರು?

ಎ) ಜೋಜೋ ಮೆಥ್ಯೂ ಬಿ) ರೋಜ್ ಮೇರಿ
ಸಿ) ಲಾರ್ಡ್ ಮೆಕಾಲೆ ಡಿ) ಎಡ್ಮಂಡ್ ಬರ್ಕ್

ಉತ್ತರ:– ಡಿ

30) ಬಂಗಾಳ, ಮುಂಬಯಿ ಮತ್ತು ಮದರಾಸು ಪ್ರೆಸಿಡೆನ್ಸಿಗಳು. ಪ್ರತ್ಯೇಕವಾಗಿಯೂ ಮತ್ತು ಸ್ವತಂತ್ರವಾಗಿಯೂ ಕಾರ್ಯನಿರ್ವಹಿಸುತ್ತಿದ್ದವು. .... ಕಾಯ್ದೆಯ ಪ್ರಕಾರ ಬಂಗಾಳದ ಪ್ರೆಸಿಡೆನ್ಸಿಯು ಉಳಿದ ಎರಡು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.

ಎ) 1773ರ ರೆಗ್ಯುಲೇಟಿಂಗ್ ಕಾಯ್ದೆ
ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ
ಸಿ) 1833ರ ಚಾರ್ಟರ್ ಕಾಯ್ದೆ:
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಎ

31) 'ನಿಯಂತ್ರಣ ಮಂಡಳಿ' (Board of Control) ಎನ್ನುವ ಆರು ಜನ ಕಮಿಷನರ್‌ಗಳನ್ನೊಳಗೊಂಡ ಹೊಸ ಸಂಸ್ಥೆಯನ್ನು ಹುಟ್ಟು ಹಾಕಲಾಯಿತು. ಈ ಹಿಂದೆ ಇದ್ದ 'ನಿರ್ದೇಶನ' ಮಂಡಳಿಯ (Court of Directors) ಜಾಗದಲ್ಲಿ ನಿಯಂತ್ರಣ ಮಂಡಳಿ (Board of Control) ಹುಟ್ಟಿಕೊಂಡಿತು' ಈ ವ್ಯವಸ್ಥೆ ಈ ಕೆಳಗಿನ ಯಾವ ಕಾಯ್ದೆಯ ಮೂಲಕ ಸಾಧ್ಯ ಮಾಡಲಾಯಿತು?

ಎ) 1935 ಭಾರತ ಸರ್ಕಾರದ ಕಾಯ್ದೆ
ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ
ಸಿ) 1833ರ ಚಾರ್ಟರ್ ಕಾಯ್ದೆ:
ಡಿ) 1773ರ ರೆಗ್ಯುಲೇಟಿಂಗ್ ಕಾಯ್ದೆ

ಉತ್ತರ:– ಬಿ (**ವಿವರಣೆ:– Board of Control** ಮಂಡಳಿಯು ನಾಗರಿಕ, ಮಿಲಿಟರಿ, ಕಂದಾಯದ ವಿಷಯಗಳಲ್ಲಿ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಅಧಿಕಾರವನ್ನು ಪಡೆದಿತ್ತು)

32) ಯಾವ ಕಾಯ್ದೆಯ ಅನ್ವಯ ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆ ರದ್ದುಗೊಳಿಸಿ, ಭಾರತವನ್ನು ನೇರವಾಗಿ ಬ್ರಿಟಿಷ್ ರಾಣಿಯ ಆಡಳಿತಕ್ಕೆ ವರ್ಗಾಯಿಸಲಾಯಿತು?

ಎ) 1935 ಭಾರತ ಸರ್ಕಾರದ ಕಾಯ್ದೆ
ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ
ಸಿ) ಭಾರತ ಸರ್ಕಾರದ ಕಾಯ್ದೆ – 1858
ಡಿ) 1773ರ ರೆಗ್ಯುಲೇಟಿಂಗ್ ಕಾಯ್ದೆ

ಉತ್ತರ:– ಸಿ

33) ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ "ವೈಸ್‌ರಾಯ್" ಎಂಬ ಪದನಾಮವನ್ನು ನೀಡಿದ್ದು ಯಾವ ಕಾಯ್ದೆ?

ಎ) 1935 ಭಾರತ ಸರ್ಕಾರದ ಕಾಯ್ದೆ *(ಮುಂದುವರಿಯುವುದು)*

ಪಿಯುಸಿ ಪರೀಕ್ಷೆ ದಿಕ್ಸೂಚಿ

PHYSICS

Chapter – 2

ELECTROSTATIC POTENTIAL AND CAPACITANCE

13. A metal foil is placed midway between the plates of a parallel plate capacitor. What is the capacitance of the capacitor?

Ans:- When a metal foil is placed midway between the plates of a parallel plate capacitor, the capacitance of the capacitor remains unchanged.

14. Which is the conductor that can take unlimited charge?

Ans:- Earth is the conductor that can take unlimited charge.

15. What is a variable capacitor?

Ans:- A variable capacitor is the one in which the effective area of the plates and hence the capacitance of the capacitor can be varied between certain limits.

16. What is the dielectric constant of a perfect conductor?

Ans:- Infinity.

17. What are supercaps?

Ans:- The supercaps are super capacitors of modest size having a large capacitance of the order of one farad. They are used as the back-up voltage sources for computers.

18. A capacitor has a charge of 6 x 10^{-4} C. When the p.d across the plates is 150 Volts, what is the capacitance?

$$\text{Ans :– The capacitance, } C=\frac{Q}{V}$$
$$=\frac{6\times10^{-4}}{150}$$
$$=4\,\mu F$$

19. Compare the effective capacitance of two equal capacitors when connected in series and in parallel.

Ans:- The ratio of the effective capacitance of the 'n' identical capacitors first connected in series and then in parallel is 1 : n^2

Therefore, when n = 2; the ratio of the capacitance is 1 : 4.

20. Three capacitors of capacitance 3 μF, 4 μF and 5 μF are in parallel across a cell. What is the ratio of their charges?

Ans:- The capacitance of the capacitors in parallel combination is directly proportional to the charge on it. Therefore, the ratio of their charges are 3 : 4 : 5.

21. A pair of capacitors is connected in parallel while an identical pair is connected in series. Which pair will be more dangerous to handle when the same p.d is given to both of them?

Ans:- A pair of capacitors connected in parallel will be more dangerous to handle.

22. Write a note on the electrostatic field energy density in a parallel plate capacitor.

Ans:- Electrostatic field energy density In a parallel plate capacitor - The energy stored in the capacitor is, the energy stored in the electric field in the space between the plates of a capacitor.

This energy stored per unit volume of the space between the plates of the capacitor is known as energy density.

Consider a parallel plate capacitor of capacitance C. Let A be the area of each plate and d be the distance between the two plates of the capacitors. When the capacitor is charged to voltage V, the energy stored in the capacitor,

$$U=\frac{1}{2}CV^2 \quad ....(i)$$

But capacitance of a parallel plate capacitor is given by

$$C=\frac{\epsilon_0 A}{d} \quad ....(ii)$$

and potential difference, V = Ed ......(iii)

Using eqn. (ii) and (iii) in eqn. (i), we get

$$U=\frac{1}{2}\epsilon_0 E^2 Ad$$

Since volume of the capacitor = Ad

$$\therefore \text{Energy density}, U_E=\frac{1}{2}\epsilon_0 E^2$$
$$=\frac{1}{2}\epsilon_0 \vec{E}.\vec{E} \quad ....(iv)$$

SI unit of energy density is J m^{-3}.

Dimensional formula of energy

$$\text{density}=\frac{\text{energy}}{\text{volume}}=\frac{ML^2T^{-2}}{L^3}$$
$$=[ML^{-1}T^{-2}]$$

23. Write a note on the Common Potential.

Ans:- When two capacitors charged to different potentials are connected in parallel by a metallic wire, charge flows from a capacitor at higher potential to the capacitor at lower potential. This flow of charge continues till potential of both the capacitors become equal. The equal potential of both the capacitors is known as common potential.

During sharing of charge, no charge is lost or gained. Consider two capacitors of capacitance C_1 and C_2.

Let V_1 and V_2 be their potentials respectively.

Total charge on both the capacitors before sharing, $q = C_1 V_1 + C_2 V_2$

Let V be the common potential of both the capacitors sharing the charges. *(Contd.......)*

ವಿದೇಶಿ ಭಾಷೆ ಕಲಿಯಬೇಕೆ?



ವಿದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಬಯಸುವವರು, ಕೆಲಸದ ನಿಮಿತ್ತ ಹೋಗಬೇಕಾದವರು ಎಲ್ಲರೂ ತಮ್ಮ ಅಗತ್ಯಕ್ಕೆ ತಕ್ಕಂತೆ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರದಲ್ಲಿ ವಿದೇಶಿ ಭಾಷೆಗಳನ್ನು ಕಲಿಯಬಹುದು

• ಎ.ಎಂ.ಸುರೇಶ

ಸಂವಹನ ಮತ್ತು ಉದ್ಯೋಗದ ದೃಷ್ಟಿಯಿಂದ ವಿದೇಶಿ ಭಾಷೆಗಳಿಗೆ ಇತ್ತೀಚೆಗೆ ಹೆಚ್ಚಿನ ಬೇಡಿಕೆ ಇದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರವು ಸರ್ಟಿಫಿಕೆಟ್ ಕೋರ್ಸ್‌ನಿಂದ ಹಿಡಿದು ಪಿಎಚ್.ಡಿವರೆಗೂ ವಿದೇಶಿ ಭಾಷೆಗಳಲ್ಲಿ ಕಲಿಯಲು ಅವಕಾಶ ಕಲ್ಪಿಸಿದೆ.

ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಜಪನೀಸ್, ಚೈನೀಸ್, ಕೊರಿಯನ್, ರಷ್ಯನ್ ಸೇರಿದಂತೆ ಹಲವು ಭಾಷೆಗಳಲ್ಲಿ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. ವಿದೇಶಕ್ಕೆ ಹೋಗಬೇಕಾಗಿದೆ, ಅಲ್ಲಿನ ಸ್ಥಳೀಯ ಭಾಷೆಯಲ್ಲಿ ಸಂವಹನ ನಡೆಸುವುದು ಹೇಗೆ ಎಂದು ಯೋಚಿಸುತ್ತಿರುವವರು ಬರೀ ಎರಡು ತಿಂಗಳ ಅವಧಿಯ ಸಂವಹನ ಕೋರ್ಸ್ ಸೇರಬಹುದು.

ಇದರಲ್ಲಿ, ವಿದೇಶದಲ್ಲಿ ಸ್ಥಳೀಯರೊಂದಿಗೆ ಸಂವಹನ ನಡೆಸಲು ಬೇಕಾಗುವಷ್ಟು ಕೌಶಲ ಹೊಂದುವ ಬಗ್ಗೆ ತಿಳಿಸಿಕೊಡಲಾಗುತ್ತದೆ. ಉದಾಹರಣೆಗೆ, ರಷ್ಯಾಗೆ ಹೋದರೆ, ಅಲ್ಲಿ ತಲುಪಬೇಕಾದ ವಿಳಾಸ ಪತ್ತೆ ಹಚ್ಚುವುದು, ಟ್ಯಾಕ್ಸಿ ಪ್ರಯಾಣ ದರ ಎಷ್ಟಿದೆ, ಅಂಗಡಿ, ಮಾಲ್ ಎಲ್ಲಿವೆ ಎಂಬಂತಹ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವಂತೆ ರಷ್ಯನ್ ಭಾಷೆಯಲ್ಲಿ ಸಂವಹನ ನಡೆಸುವುದನ್ನು ಕಲಿಸಲಾಗುತ್ತದೆ.

ಇದಲ್ಲದೆ ಹತ್ತು ತಿಂಗಳ ಸರ್ಟಿಫಿಕೆಟ್ ಕೋರ್ಸ್, ಡಿಪ್ಲೊಮಾ, ಸ್ನಾತಕೋತ್ತರ ಡಿಪ್ಲೊಮಾ, ಎಂ.ಎ ಹಾಗೂ ಪಿಎಚ್.ಡಿಗೂ ಅವಕಾಶ ಇದೆ. ಇದೇ ಮೊದಲ ಬಾರಿಗೆ ಬಿ.ಎ.ಯಲ್ಲಿ ಫ್ರೆಂಚ್ ಅನ್ನು ಮೇಜರ್ ಆಗಿ ಇಟ್ಟುಕೊಂಡು, ಫ್ರೆಂಚ್, ಇಂಗ್ಲಿಷ್, ಪತ್ರಿಕೋದ್ಯಮ ಸಂಯೋಜನೆಯ ಹೊಸ ಕೋರ್ಸ್ ಆರಂಭಿಸಲಾಗಿದೆ.

'ಎಲ್ಲೆಲ್ಲಿ ಉದ್ಯೋಗ ಅವಕಾಶಗಳು ಇವೆ ಎಂದು ಆರು ತಿಂಗಳು ಸಮೀಕ್ಷೆ ನಡೆಸಿದ ಬಳಿಕ ಈ ಕೋರ್ಸ್ ಆರಂಭಿಸಲಾಗಿದೆ. ಕಲೆ, ವಿಜ್ಞಾನ, ವಾಣಿಜ್ಯ ಸೇರಿದಂತೆ ಯಾವುದೇ ವಿಭಾಗದವರು ಈ ಸಂಯೋಜನೆಯನ್ನು ಆಯ್ಕೆ ಮಾಡಿಕೊಳ್ಳಬಹುದು' ಎನ್ನುತ್ತಾರೆ ಅಧ್ಯಯನ ಕೇಂದ್ರದ ನಿರ್ದೇಶಕಿ ಪ್ರೊ.ಜ್ಯೋತಿ ವೆಂಕಟೇಶ್.

ಕಡಿಮೆ ಶುಲ್ಕದಲ್ಲಿ ಈ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅವಕಾಶ ಇರುವುದರಿಂದ ಆರ್ಥಿಕವಾಗಿ ಹೊರೆಯಾಗುವುದಿಲ್ಲ. ಶನಿವಾರ, ಭಾನುವಾರವೂ ತರಗತಿಗಳು ಇರುತ್ತವೆ. ಹೀಗಾಗಿ, ವಾರಪೂರ್ತಿ ಕೆಲಸ ಮಾಡಿ, ವಾರಾಂತ್ಯದಲ್ಲಿ ತರಗತಿಗೆ ಹಾಜರಾಗಬಹುದು. ಓದುವ ಆಸಕ್ತಿ ಇದ್ದು, ವಿದೇಶಕ್ಕೆ ಹೋಗಲು ಬಯಸುವವರು ಸ್ನಾತಕೋತ್ತರ ಪದವಿ ಪಡೆಯಬಹುದು. ಪದವಿಯಲ್ಲಿ ಫ್ರೆಂಚ್, ಜರ್ಮನ್ ಭಾಷೆಗಳ ಕಲಿಕೆಗೆ ಅವಕಾಶ ಇದೆ. ಇದನ್ನು ಓದಿದವರು ಸ್ನಾತಕೋತ್ತರ ಪದವಿಗೆ ಸೇರಬಹುದು.

ಉನ್ನತ ವ್ಯಾಸಂಗಕ್ಕೆ ಹೋಗುವುದಿಲ್ಲ, ಸಂವಹನ ಕೌಶಲ ಬೆಳೆಸಿಕೊಂಡರೆ ಸಾಕು ಎನ್ನುವವರು ಡಿಪ್ಲೊಮಾ ಮಾಡಬಹುದು. ಹತ್ತು ತಿಂಗಳ ಈ ಕೋರ್ಸ್ ಎರಡು ಸೆಮಿಸ್ಟರ್ ಒಳಗೊಂಡಿದೆ. ಒಟ್ಟು 14 ಭಾಷೆಗಳಲ್ಲಿ ಸರ್ಟಿಫಿಕೆಟ್, ಡಿಪ್ಲೊಮಾ, ಪದವಿ ಕೋರ್ಸ್‌ಗಳು ಇದ್ದು, ಯಾವ ಭಾಷೆಯನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಬಹುದು. ಉದ್ಯೋಗಕ್ಕಾಗಿ ಹೊರದೇಶಗಳಿಗೆ ಹೋಗುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು, ಸ್ಥಳೀಯ ಭಾಷೆ ಗೊತ್ತಿದ್ದರೆ ಕೆಲಸಕ್ಕೆ ಇನ್ನಷ್ಟು ಅನುಕೂಲವಾಗಲಿದೆ ಎನ್ನುತ್ತಾರೆ ಜ್ಯೋತಿ ವೆಂಕಟೇಶ್.

ದಕ್ಷಿಣ ಭಾರತದಲ್ಲಿ ಅತಿಹೆಚ್ಚು ವಿದೇಶಿ ಭಾಷೆಗಳ ಕೋರ್ಸ್‌ಗಳನ್ನು ಹೊಂದಿರುವ ಏಕೈಕ ವಿಶ್ವವಿದ್ಯಾಲಯ ಇದಾಗಿದೆ. ಇಲ್ಲಿ ತರಬೇತಿ ಹೊಂದಿದ ಅಧ್ಯಾಪಕರು ಇದ್ದು, ಗುಣಮಟ್ಟದ ಶಿಕ್ಷಣ ಸಿಗುತ್ತಿದೆ. ಆದರೆ, ಬಹಳಷ್ಟು ಜನರಿಗೆ ವಿದೇಶಿ ಭಾಷೆಗಳ ಕಲಿಕೆಯಿಂದ ಆಗುವ ಪ್ರಯೋಜನಗಳ ಬಗ್ಗೆ ಹೆಚ್ಚಿನ ಅರಿವು ಇಲ್ಲ.

ವಿದೇಶಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಇದಲ್ಲದೆ ವಿದೇಶದ ಕಂಪನಿಗಳು ಬೆಂಗಳೂರು ಸೇರಿದಂತೆ ದೇಶದ ಹಲವು ನಗರಗಳಿಗೆ ಕಾಲಿಟ್ಟಿವೆ. ವಿದೇಶಿ ಭಾಷೆ ಗೊತ್ತಿದ್ದರೆ, ಅಂತಹ ಕಡೆ ಕೆಲಸ ಮಾಡಲು ಅನುಕೂಲವಾಗಲಿದೆ. ಕಾನೂನು, ಹಣಕಾಸು, ಆರೋಗ್ಯ ಕ್ಷೇತ್ರಗಳಲ್ಲಿ ಕಂಟೆಂಟ್ ರೈಟರ್‌ಗಳಿಗೆ ಭಾರಿ ಬೇಡಿಕೆ ಇದೆ. ವಿದೇಶಗಳಿಂದ ಅನುದಾನ ಪಡೆಯುವ ನೂರಾರು ಸ್ವಯಂಸೇವಾ ಸಂಸ್ಥೆಗಳಿವೆ. ಅಂತಹ ಕಡೆ ಕಾರ್ಯ ನಿರ್ವಹಿಸಲು ಒಂದೇ ಭಾಷೆಗಿಂತ ಹೆಚ್ಚಿನ ಭಾಷೆಗಳಲ್ಲಿ ವ್ಯವಹಾರ ಕೌಶಲದ ಅಗತ್ಯವಿರುತ್ತದೆ.

ಯಾವುದೇ ಕ್ಷೇತ್ರಕ್ಕೆ ಹೋದರೂ ವೃತ್ತಿಪರರಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ, ಉದ್ಯೋಗ ಕ್ಷೇತ್ರದಲ್ಲಿ ಯಶಸ್ವಿಯಾಗಬೇಕಾದರೆ ಸಂವಹನ ಕೌಶಲ ಬಹಳ ಮುಖ್ಯ. ಇನ್ನು ಉದ್ಯೋಗಕ್ಕಾಗಿ ಬೇರೆ ಕಡೆ ಹೋದಾಗ ಅಲ್ಲಿನ ಸ್ಥಳೀಯ ಭಾಷೆಯಲ್ಲಿ ಮಾತನಾಡಿದರೆ ಉತ್ತಮ ಪ್ರತಿಕ್ರಿಯೆ ಸಿಗುತ್ತದೆ. ಹೀಗಾಗಿ, ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿತವರಿಗೆ ಅವಕಾಶಗಳ ಬಾಗಿಲು ಸದಾ ತೆರೆದಿರುತ್ತದೆ.



ಸಂಪರ್ಕ ಹೇಗೆ?: ವಿದೇಶಿ ಭಾಷೆಗಳ ಕೋರ್ಸ್‌ಗಳಿಗೆ ಪ್ರಸಕ್ತ ಸಾಲಿನಲ್ಲಿ ಪ್ರವೇಶ ಪಡೆಯಲು ಈಗಲೂ ಅವಕಾಶ ಇದೆ.

ಮಾಹಿತಿಗೆ ಸಂಪರ್ಕ ಸಂಖ್ಯೆ: 080 29572019, 6361756549

ವಿಳಾಸ: ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರ, ಅರಮನೆ ರಸ್ತೆ, ಹೊಸ ಅಕಡೆಮಿಕ್ ಬ್ಲಾಕ್, 3ನೇ ಮಹಡಿ, ಸೆಂಟ್ರಲ್ ಕಾಲೇಜು ಹಿಂಭಾಗ, ಬೆಂಗಳೂರು ನಗರ ವಿ.ವಿ, ಬೆಂಗಳೂರು–09

14 ಭಾಷೆ, ಕೈಗೆಟಕುವ ಶುಲ್ಕ

ಜಪನೀಸ್, ಫ್ರೆಂಚ್ ಸೇರಿದಂತೆ ಒಟ್ಟು 14 ಭಾಷೆಗಳಲ್ಲಿ ಕಲಿಯಬಹುದು. ಉದ್ಯೋಗ ಕ್ಷೇತ್ರದಲ್ಲೂ ಒಳ್ಳೆಯ ಅವಕಾಶಗಳಿದ್ದು, ಈ ಎಲ್ಲ ಕೋರ್ಸ್‌ಗಳಿಗೆ ಕನಿಷ್ಠ ₹ 6 ಸಾವಿರದಿಂದ ಗರಿಷ್ಠ ₹ 30 ಸಾವಿರ ಶುಲ್ಕ ನಿಗದಿ ಮಾಡಲಾಗಿದೆ



ನಾಗರಿಕ ಸೇವಾ ಪರೀಕ್ಷೆಗಳಲ್ಲೂ ವಿದೇಶಿ ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ವಿದೇಶಾಂಗ ಸೇವೆಗೆ ಸೇರಿದರೆ ಬೇರೆ ದೇಶಗಳಲ್ಲಿ ರಾಯಭಾರಿಗಳಾಗಿ ಕೆಲಸ ಮಾಡಲು ಸುಲಭವಾಗುತ್ತದೆ. ಇದಲ್ಲದೆ ದೇಶದ ಪ್ರಮುಖ ನಗರಗಳಲ್ಲಿ ವಿದೇಶಗಳ ಕಾನ್ಸುಲೇಟ್ ಕಚೇರಿಗಳಿವೆ. ಅಂತಹ ಕಡೆ ಕಾರ್ಯ ನಿರ್ವಹಿಸಲು ವಿದೇಶಿ ಭಾಷೆಗಳ ಕಲಿಕೆ ನೆರವಿಗೆ ಬರಲಿದೆ

ಪ್ರೊ. ಜ್ಯೋತಿ ವೆಂಕಟೇಶ್, ನಿರ್ದೇಶಕಿ, ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರ, ಬೆಂಗಳೂರು ನಗರ ವಿ.ವಿ.

ವಿದ್ಯಾರ್ಥಿ ವೇತನ ಕೈಪಿಡಿ

ಶೆಫ್ಲರ್ ಇಂಡಿಯಾ ಸೋಶಿಯಲ್ ಇನೊವೇಟರ್ ಫೆಲೋಷಿಪ್

ಅರ್ಥಪೂರ್ಣ ಸಾಮಾಜಿಕ ಪ್ರಭಾವ ಬೀರಬಲ್ಲ, ಹೊಸತನದಿಂದ ಕೂಡಿದ, ಸುಸ್ಥಿರ ಪರಿಹಾರಗಳ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಆಸಕ್ತರಿಂದ ಶೆಫ್ಲರ್ ಇಂಡಿಯಾ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ಅರ್ಜಿದಾರರು ಭಾರತದ ನಿವಾಸಿಗಳಾಗಿರಬೇಕು. 1 ಜುಲೈ 2025ರ ಹೊತ್ತಿಗೆ 18ರಿಂದ 35 ವರ್ಷ ವಯಸ್ಸಿನವರಾಗಿರಬೇಕು. ಆರಂಭಿಕ ಹಂತದ ಸ್ಟಾರ್ಟ್-ಅಪ್‌ಗಳು ಅಥವಾ ಅನುಷ್ಠಾನಕ್ಕೆ ಸಿದ್ಧವಾಗಿದ್ದು, ಕಾರ್ಯಾಚರಣಾ ಮೂಲಮಾದರಿಯನ್ನು ಹೊಂದಿರುವ ಆರಂಭಿಕ ಹಂತದ ಸ್ಟಾರ್ಟ್–ಅಪ್‌ಗಳಿಗೆ ಅಥವಾ ಸ್ವಯಂಸೇವಾ ಸಂಸ್ಥೆಗಳಿಗೆ ಈ ಫೆಲೋಷಿಪ್ ಅನ್ವಯವಾಗುತ್ತದೆ.

ಆರ್ಥಿಕ ಸಹಾಯ: ಐಐಎಂಎ ವೆಂಚರ್ಸ್, ಐಐಎಂ ಅಹಮದಾಬಾದ್‌ನಲ್ಲಿ ವಿಶೇಷ ಮಾರ್ಗದರ್ಶನ, ಉತ್ತೇಜಕ ಫೆಲೋಷಿಪ್ ಅನುದಾನದ ನೆರವು ಹಾಗೂ ವಿಸ್ತೃತ ನೆಟ್‌ವರ್ಕಿಂಗ್ (ಸಂಪರ್ಕ) ಅವಕಾಶಗಳನ್ನು ಇದು ಒಳಗೊಂಡಿರುತ್ತದೆ.

ಅರ್ಜಿ ಸಲ್ಲಿಸಲು ಕೊನೇ ದಿನ: 15.9.2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/SIA4

ಇನ್ಫೊಸಿಸ್ ಫೌಂಡೇಷನ್ ಸ್ಟೆಮ್ ಸ್ಟಾರ್ಸ್ ಸ್ಕಾಲರ್‌ಷಿಪ್

ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ (ಸ್ಟೆಮ್) ವಿಭಾಗಗಳಲ್ಲಿ ಪದವಿ ಪಡೆಯಲು ಬಯಸುವ ಮಹಿಳಾ ವಿದ್ಯಾರ್ಥಿಗಳನ್ನು ಬೆಂಬಲಿಸುವ ಉದ್ದೇಶವನ್ನು ಈ ಸ್ಕಾಲರ್‌ಷಿಪ್ ಹೊಂದಿದೆ.

ಅರ್ಹತೆ: ಅರ್ಜಿದಾರರು ಭಾರತದ ವಿದ್ಯಾರ್ಥಿನಿಯಾಗಿರಬೇಕು. 12ನೇ ತರಗತಿ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರಬೇಕು. ಎನ್‌ಐಆರ್‌ಎಫ್ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಪದವಿಯ ಮೊದಲ ವರ್ಷಕ್ಕೆ ದಾಖಲಾದವರು ಅರ್ಜಿ ಸಲ್ಲಿಸಬಹುದು. ಜೊತೆಗೆ, ಎರಡನೇ ವರ್ಷದ ಬಿ.ಆರ್ಕ್ ವಿದ್ಯಾರ್ಥಿಗಳು ಮತ್ತು ಐದು ವರ್ಷಗಳ ಇಂಟಿಗ್ರೇಟೆಡ್ ಅಥವಾ ಅವಳಿ ಪದವಿ ಕೋರ್ಸ್‌ಗಳನ್ನು ಪಡೆಯುತ್ತಿರುವವರು ಸಹ ಅರ್ಜಿ ಸಲ್ಲಿಸಬಹುದು.

ಎನ್‌ಐಆರ್‌ಎಫ್ ರ‍್ಯಾಂಕಿಂಗ್ ಪಟ್ಟಿಗೆ ಸೇರಿರದ ಸರ್ಕಾರಿ ಕಾಲೇಜುಗಳಲ್ಲಿ ಎಂಜಿನಿಯರಿಂಗ್ ಅಥವಾ ವೈದ್ಯಕೀಯ ಕೋರ್ಸ್ ಪಡೆಯಲು ಉದ್ದೇಶಿಸಿರುವ ಹೆಣ್ಣುಮಕ್ಕಳು ಸಹ ಅರ್ಜಿ ಸಲ್ಲಿಸಲು ಅರ್ಹರು.

ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ₹ 8 ಲಕ್ಷ ಮೀರಿರಬಾರದು.

ಆರ್ಥಿಕ ಸಹಾಯ: ಆಯ್ಕೆಯಾದ ಅಭ್ಯರ್ಥಿಗಳು ವಾರ್ಷಿಕ ₹ 1 ಲಕ್ಷದವರೆಗೆ ವಿದ್ಯಾರ್ಥಿವೇತನವನ್ನು ಪಡೆಯುತ್ತಾರೆ.

ಅರ್ಜಿ ಸಲ್ಲಿಸಲು ಕೊನೇ ದಿನ: 15.9.2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ: Short Url: www.b4s.in/praja/ISTS3



ಸಮಾಧಾನ

ಜೀವನವನ್ನು ನಿತ್ಯೋತ್ಸವದಂತೆ ರೂಪಿಸಿಕೊಳ್ಳುವ ಅವಕಾಶವಿದೆ

ಡಾ. ಡಿ.ಎಂ.ಹೆಗಡೆ, ಸಮಾಲೋಚಕ

• **ಸರ್, ನನ್ನ ಮಗಳು ಎಸ್‌ಎಸ್‌ಎಲ್‌ಸಿಯಲ್ಲಿ ಫೇಲ್ ಆಗಿದ್ದಾಳೆ. ಓದಿನಲ್ಲಿ ಒಂದಿಷ್ಟೂ ಆಸಕ್ತಿ ಇಲ್ಲ. ಅವಳು ಕನಿಷ್ಠ ಡಿಗ್ರಿ ಆದರೂ ಪಡೆಯಲಿ ಎನ್ನುವುದು ನಮ್ಮ ಆಸೆ. ಅವಳನ್ನು ಪ್ರೇರೇಪಿಸುವುದು ಹೇಗೆ?**

ಗೀತಾಂಜಲಿ ತಗ್ಗಿನಮನೆ, ಹೊಸೂರು

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕನಿಷ್ಠ ವಿದ್ಯಾರ್ಹತೆಯಾದರೂ ಇರಬೇಕಾದದ್ದು ಅನಿವಾರ್ಯ ಎನ್ನಿಸಿದೆ. ಮಗಳು ನಪಾಸಾದ ಮಾತ್ರಕ್ಕೆ ಆಕೆಗೆ ಪಾಸಾಗುವ ಶಕ್ತಿ ಇಲ್ಲ ಎಂದಲ್ಲ. ಆಕೆಗೆ ಈಗಿನ ಕಲಿಕೆಯ ವಿಧಾನದಲ್ಲಿ ಆಸಕ್ತಿ ಇಲ್ಲದಿರಬಹುದು, ಆಕೆ ಬೇರೆ ಏನನ್ನೋ ಆಲೋಚಿಸುತ್ತಿರಬಹುದು, ಅವಳ ಆಸಕ್ತಿ ಭಿನ್ನವಾಗಿಯೂ ಇರಬಹುದು.

ನಪಾಸಾದ ಆಕೆ ಸಹಜವಾಗಿ ಖಿನ್ನಳಾಗಿರುತ್ತಾಳೆ. ಮನಸ್ಸು ವಿಚಲಿತವಾಗಿರುತ್ತದೆ. ಹಾಗಾಗಿ, ನೀವು ಅವಳ ಜೊತೆಗೆ ಆತಂಕದಿಂದಾಗಲೀ ಕೋಪದಿಂದಾಗಲೀ ತಿರಸ್ಕಾರದಿಂದಾಗಲೀ ವ್ಯವಹರಿಸಬೇಡಿ. ಅವಳೊಂದಿಗೆ ಸಹಜವಾಗಿ ಮಾತನಾಡಿ. ನೀವು ಅವಳನ್ನು ಪ್ರೀತಿಸುತ್ತೀರಿ ಎನ್ನುವುದನ್ನು ಅವಳಿಗೆ ಅರ್ಥವಾಗುವ ಹಾಗೆ ವ್ಯವಹರಿಸಿ. ಆಕೆ ಏನೇ ಮಾಡಿದರೂ, ಏನೇ ಆದರೂ ನಿಮ್ಮ ಮಗಳು ಎನ್ನುವ ಸತ್ಯವನ್ನು ಒಪ್ಪಿಕೊಳ್ಳಿ, ಹಾಗೂ ಅವಳ ಸೋಲಿನಿಂದ ನಿಮ್ಮ ಪ್ರೀತಿಯಲ್ಲಿ ಕೊರತೆಯಾಗಿಲ್ಲ ಎನ್ನುವುದು ಅವಳಿಗೆ ತಿಳಿಯುವ ಹಾಗೆ ವರ್ತಿಸಿ.

ಇನ್ನು, ವಿದ್ಯಾಭ್ಯಾಸದಲ್ಲಿ ಅವಳ ಅನಾಸಕ್ತಿಗೆ ಕಾರಣವೇನು ಎನ್ನುವುದನ್ನು ಕೇಳಿ ತಿಳಿದುಕೊಳ್ಳಲು ಪ್ರಯತ್ನಿಸಿ. ಅವಳಿಗೆ ವಿಷಯಗಳು ಸರಿಯಾಗಿ ಅರ್ಥವಾಗದೇ ಹೋಗಿರಬಹುದು. ಶಾಲೆಯ ಪರಿಸರ ಇಷ್ಟವಾಗದೇ ಇದ್ದಿರಬಹುದು. ಮನೆಯಲ್ಲಿ ಏನೋ ತೊಂದರೆಯಾಗುತ್ತಿರಬಹುದು. ವಯೋಸಹಜವಾದ ವ್ಯತಿರಿಕ್ತ ಸ್ಥಿತಿಯನ್ನು ಅವಳಿಂದ ನಿಭಾಯಿಸಲು ಸಾಧ್ಯವಾಗುತ್ತಿರಲಿಕ್ಕಿಲ್ಲ. ತಾನು ಉಳಿದವರಿಗಿಂತ ದಡ್ಡಿ, ಪೆದ್ದಿ ಎನ್ನುವ ಕೀಳರಿಮೆ ಇರಬಹುದು. ಸಹಪಾಠಿಗಳ ಸಹವಾಸ ದೋಷವೂ ಕಾರಣವಾಗಿರಬಹುದು ಅಥವಾ ಬೇರೆ ಯಾವುದೋ ಆಕರ್ಷಣೆಗೆ ಈಡಾಗಿರಲೂಬಹುದು. ಪರೀಕ್ಷೆಯಲ್ಲಿ ನಪಾಸಾದರೆ ಅವಳಿಗೆ ಏನೋ ಲಾಭವಿರಬಹುದು!


ಇನ್ನು ನೀವಾಗಲೀ ಶಿಕ್ಷಕರಾಗಲೀ ಮಕ್ಕಳಿಗೆ 'ನೀನು ಪಾಸಾಗಲೇಬೇಕು, ಹೆಚ್ಚು ಅಂಕ ಗಳಿಸಬೇಕು, ಇಲ್ಲದಿದ್ದರೆ ಪೆದ್ದಿ ಎನ್ನಿಸಿಕೊಳ್ಳುತ್ತೀಯೆ' ಎಂದೆಲ್ಲ ಹೇಳಬಾರದು. ಪರೀಕ್ಷೆಯಲ್ಲಿ ಪಾಸಾಗುವುದರಿಂದ ನಿನ್ನ ಮುಂದಿನ ಜೀವನವನ್ನು ಸರಳವಾಗಿಯೂ ಸುಂದರವಾಗಿಯೂ ರೂಪಿಸಿಕೊಳ್ಳುವುದು ಸುಲಭವಾಗುತ್ತದೆ, ವರ್ಷಕ್ಕೆ ಒಮ್ಮೆ ಮಾತ್ರ ಬರುವ ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಬೇಕು ಎಂದು ಮನದಟ್ಟು ಮಾಡಿಸಬೇಕು. ನಮ್ಮ ಎಲ್ಲ ಸವಾಲುಗಳನ್ನೂ ಸಹಜವಾಗಿ ಎದುರಿಸುವುದನ್ನು ರೂಢಿಸಿಕೊಳ್ಳಬೇಕು, ಒಮ್ಮೆ ನಪಾಸಾದರೆ ಗಾಸಿಯಾಗಬೇಕಿಲ್ಲ, ಮತ್ತೆ ಪರೀಕ್ಷೆ ಬರೆದು ಪಾಸು ಮಾಡಿಕೊಳ್ಳಬಹುದು, ವಿದ್ಯೆಹೀನನ ಬಾಳು ಬರೀ ಗೋಳು ಎನ್ನುವುದನ್ನು ಅವಳಿಗೆ ಅರ್ಥಮಾಡಿಸಬೇಕು. ಅದಕ್ಕೆ ಪೂರಕವಾಗಿ ನಿಜಜೀವನದಲ್ಲಿ ಕಾಣುವ ಕೆಲವರ ಉದಾಹರಣೆಗಳನ್ನು ಕೊಡಬಹುದು.

ಮನುಷ್ಯನ ಜೀವನ ಒಂದು ವರದಾನ. ಭೂಮಿಯ ಮೇಲೆ ಬದುಕುವ ಒಂದು ಅವಕಾಶ. ಇಲ್ಲಿ ಯಾರೂ ಮೂರ್ಖರಲ್ಲ, ಪೆದ್ದರಲ್ಲ. ಒಬ್ಬರಂತೆ ಇನ್ನೊಬ್ಬರಿಲ್ಲ. ಎಲ್ಲರಲ್ಲಿಯೂ ಒಂದಲ್ಲ ಒಂದು ವಿಶೇಷ ಗುಣ ಇದ್ದೇ ಇರುತ್ತದೆ. ಹೀಗಾಗಿ, ನಿಮ್ಮ ಮಗಳಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆ ಎನ್ನುವುದನ್ನು ಕೇಳಿ ತಿಳಿದುಕೊಳ್ಳಿ. ಅದರಲ್ಲಿ ಆಕೆ ಮುಂದುವರಿಯುವಂತೆ ಪ್ರೋತ್ಸಾಹಿಸಿ.

ಆಸಕ್ತಿ ಇರುವ ಕ್ಷೇತ್ರ ಯಾವುದೇ ಆಗಿದ್ದರೂ ಅದರಲ್ಲಿ ಶ್ರದ್ಧೆಯಿಂದ ಮುಂದುವರಿದರೆ ಸಾಕು, ಜೀವನದಲ್ಲಿ ಯಶಸ್ಸು ಸಿಗುತ್ತದೆ. ಜೀವನವನ್ನು ನಿತ್ಯೋತ್ಸವದಂತೆ ರೂಪಿಸಿಕೊಳ್ಳುವ ಅವಕಾಶ ಇರುತ್ತದೆ. ಇಷ್ಟಕ್ಕೂ ನಿಮ್ಮ ಪ್ರಯತ್ನದಿಂದ ನಿಮಗೆ ಸಮಾಧಾನವಾಗದಿದ್ದರೆ, ಮಗಳಿಗೂ ವಿದ್ಯಾಭ್ಯಾಸದಲ್ಲಿ ಆಸಕ್ತಿ ಮೂಡದಿದ್ದರೆ, ತಡಮಾಡಬೇಡಿ. ಉತ್ತಮ ಮನೋವೈದ್ಯರನ್ನು ಭೇಟಿ ಮಾಡಿ, ಮಾರ್ಗದರ್ಶನ ಪಡೆದುಕೊಳ್ಳುವುದು ಅಗತ್ಯ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ



ಸುಭಾಷಿತ

ಸಮಾಜದ ಋಣವನ್ನು ಕಡಿಮೆ ಮಾಡಿಕೊಳ್ಳಲು ಸಮಾಜಸೇವೆಯೇ ಉತ್ತಮ ದಾರಿ. ಉಪಕಾರ ಮಾಡುತ್ತೇವೆ ಎನ್ನುವ ಭ್ರಮೆ ಸಲ್ಲದು

–ನಾರಾಯಣಗುರು

ಸಂಪಾದಕೀಯ

‘ಬಿಡಿಎ’ಗೆ ಬೇಕು ಹೆಚ್ಚು ಜವಾಬ್ದಾರಿ ನಿಯಂತ್ರಣದ ವಿನಾಯಿತಿ ಸಲ್ಲದು

‘ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ’ದ (ಕೆ–ರೇರಾ) ವ್ಯಾಪ್ತಿಯಿಂದ ತನ್ನನ್ನು ಹೊರಗಿಡಬೇಕು ಎನ್ನುವ ‘ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ’ದ (ಬಿಡಿಎ) ಬೇಡಿಕೆ ನ್ಯಾಯಸಮ್ಮತವಾದುದಲ್ಲ. ಬಿಡಿಎ ಸಲ್ಲಿಸಿರುವ ಬೇಡಿಕೆ ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಅಪಾಯಕರ ಕೂಡ. ಶಾಸನಬದ್ಧ ಸಂಸ್ಥೆಯಾಗಿರುವ ಹಾಗೂ ರಿಯಲ್ ಎಸ್ಟೇಟ್ ಪ್ರವರ್ತಕ ಸಂಸ್ಥೆ ಆಗದಿರುವ ಕಾರಣದಿಂದಾಗಿ ‘ಕೆ–ರೇರಾ’ ವ್ಯಾಪ್ತಿಯಿಂದ ತನ್ನನ್ನು ಹೊರಗಿಡಬೇಕು ಎನ್ನುವುದು ಬಿಡಿಎ ವಾದ. ಖಾಸಗಿ ಸಂಸ್ಥೆಗಳಂತೆ ಲಾಭಕ್ಕಾಗಿ ಕಾರ್ಯನಿರ್ವಹಿಸದೆ, ಬಡ ಹಾಗೂ ಮಧ್ಯಮವರ್ಗಕ್ಕೆ ತಾನು ಸೇವೆ ಸಲ್ಲಿಸುತ್ತಿರುವುದಾಗಿಯೂ ಬಿಡಿಎ ಹೇಳಿಕೊಂಡಿದೆ. ವಿರೋಧಾಭಾಸದ ಸಂಗತಿಯೆಂದರೆ, ಬಿಡಿಎ ಯಾವೆಲ್ಲ ಕಾರಣಗಳಿಂದಾಗಿ ‘ಕೆ–ರೇರಾ’ ವ್ಯಾಪ್ತಿಯಿಂದ ತನ್ನನ್ನು ಹೊರಗಿಡಬೇಕು ಎಂದು ವಾದಿಸುತ್ತಿದೆಯೋ, ಅದೇ ಕಾರಣಗಳಿಗಾಗಿ ಅದನ್ನು ನಿಯಂತ್ರಣ ಪ್ರಾಧಿಕಾರದ ವ್ಯಾಪ್ತಿಗೆ ತರಬೇಕಾಗಿದೆ. ಸರ್ಕಾರಿ ಸಂಸ್ಥೆಯಲ್ಲಿ ನಂಬಿಕೆಯಿಟ್ಟು ತಮ್ಮ ಜೀವಮಾನದ ಉಳಿತಾಯವನ್ನು ತೊಡಗಿಸುವವರಿಗೆ ದುರ್ಬಲ ರಕ್ಷಣೆಯ ಬದಲಾಗಿ ಹೆಚ್ಚಿನ ಸುರಕ್ಷತೆಯನ್ನು ಒದಗಿಸುವುದಕ್ಕಾಗಿ ಈ ನಿಯಂತ್ರಣ ಅಗತ್ಯವಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿಯಂತ್ರಣ ಯಾಕಾಗಿ ಬೇಕು ಎನ್ನುವುದಕ್ಕೆ ನಿದರ್ಶನವಾಗಿ, ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಿವೇಶನ ಪಡೆದವರ ಸ್ಥಿತಿಗತಿ ಗಮನಿಸಬಹುದು. 2010ರಲ್ಲಿ ಘೋಷಣೆಗೊಂಡ ಈ ಬಡಾವಣೆಯಲ್ಲಿ, ಆರು ವರ್ಷಗಳ ನಂತರ ನಿವೇಶನಗಳ ಹಂಚಿಕೆ ಆರಂಭಗೊಂಡಿತು. 2018ರ ವೇಳೆಗೆ ಮೂಲ ಸೌಕರ್ಯಗಳನ್ನು ಒದಗಿಸಲಾಗುವುದೆಂದು ಭರವಸೆ ನೀಡಲಾಗಿತ್ತು. ಆದರೆ, ರಸ್ತೆ, ಒಳಚರಂಡಿ, ನೀರು ಹಾಗೂ ವಿದ್ಯುತ್ ಸಂಪರ್ಕವಿಲ್ಲದೆ ಸಾವಿರಾರು ನಿವೇಶನದಾರರು ಪರಿತಪಿಸುತ್ತಿದ್ದಾರೆ. ಸಾಲ ಮಾಡಿ ನಿವೇಶನ ಕೊಂಡವರು, ಮೂಲ ಸೌಕರ್ಯಗಳಿಲ್ಲದ ಕಾರಣದಿಂದಾಗಿ ಮನೆಯನ್ನು ಕಟ್ಟಲಾರದ ಸ್ಥಿತಿಯಲ್ಲಿದ್ದಾರೆ. ಸಾಲದ ಕಂತಿನ ಜೊತೆಗೆ ಮನೆ ಬಾಡಿಗೆಯನ್ನೂ ಭರಿಸಬೇಕಾದ ಅನಿವಾರ್ಯ ಅವರದಾಗಿದೆ. ಅವರ ಕನಸಿನ ನಿವೇಶನಗಳು ಕಸವನ್ನು ಭರ್ತಿ ಮಾಡುವ ಸ್ಥಳಗಳಾಗಿ ಬದಲಾಗಿವೆ. ಬಿಡಿಎ ಪದೇಪದೇ ನೀಡುತ್ತಿರುವ ಭರವಸೆ ಹಾಗೂ ಗಡುವುಗಳಿಂದಾಗಿ ನಿವೇಶನದಾರರ ಸಂಕಟ ಉಲ್ಬಣ ಗೊಳ್ಳುತ್ತಿದೆಯೇ ಹೊರತು, ಯಾವುದೇ ಉಪಯೋಗವಾಗಿಲ್ಲ. ಇಂಥ ಸಂದಿಗ್ಧದ ಸಮಯದಲ್ಲಿ ‘ಕೆ–ರೇರಾ’ ಇಲ್ಲದೇ ಹೋದರೆ, ಸಂತ್ರಸ್ತರು ತ್ವರಿತ ನ್ಯಾಯಕ್ಕಾಗಿ ಬೇರೇನು ಮಾಡಲು ಸಾಧ್ಯವಿದೆ? ನಾಡಪ್ರಭು ಕೆಂಪೇಗೌಡ ಬಡಾವಣೆಯದು ಒಂದು ಉದಾಹರಣೆಯಷ್ಟೇ; ಇಂಥ ಅನೇಕ ಹಗರಣಗಳಲ್ಲಿ ಬಿಡಿಎ ಸಿಲುಕಿಕೊಂಡಿದೆ. ಇಬ್ಬರಿಗೆ ಒಂದೇ ನಿವೇಶನದ ಹಂಚಿಕೆ, ಉದ್ಯಾನ ಹಾಗೂ ಆಟದ ಮೈದಾನಕ್ಕಾಗಿ ಮೀಸಲಿರಿಸಿದ ಜಾಗವನ್ನು ವಾಣಿಜ್ಯ ಸ್ಥಳವಾಗಿ ಪರಿವರ್ತಿಸಿರುವುದು ಸೇರಿದಂತೆ ಬಿಡಿಎ ಮೇಲೆ ಹಲವು ದೂರುಗಳಿವೆ. ಸರ್ಕಾರಿ ಅಧಿಕಾರಿಗಳು ಭೂಗಳ್ಳರೊಂದಿಗೆ ಶಾಮೀಲಾಗಿ, ನಗರದ ಅಮೂಲ್ಯವಾದ ಹಸಿರು ಪ್ರದೇಶಗಳನ್ನು ಕಬಳಿಸುವುದರ ಮೂಲಕ, ಸರ್ಕಾರದ ಬೊಕ್ಕಸಕ್ಕೆ ನೂರಾರು ಕೋಟಿ ರೂಪಾಯಿ ನಷ್ಟ ಉಂಟುಮಾಡಿದ್ದಾರೆ. ಸಾಂದರ್ಭಿಕ ತನಿಖೆಗಳಿಂದ ಅವ್ಯವಹಾರಗಳು ಬಯಲಿಗೆ ಬಂದಿದ್ದರೂ, ವ್ಯವಸ್ಥಿತ ಭ್ರಷ್ಟಾಚಾರ ಪಿಡುಗಿನ ರೂಪದಲ್ಲಿ ಮುಂದುವರಿದೇ ಇದೆ. ಖಾಸಗಿ ನಿರ್ಮಾಣ ಸಂಸ್ಥೆಗಳಿಗಿಂತಲೂ ತನ್ನನ್ನು ಭಿನ್ನ ಎಂದು ಬಿಂಬಿಸಿಕೊಳ್ಳಲು ಹೊರಟಿರುವ ಬಿಡಿಎ, ವಾಸ್ತವದಲ್ಲಿ ಕೆಲವು ಖಾಸಗಿ ಸಂಸ್ಥೆಗಳಿಗಿಂತಲೂ ಹೆಚ್ಚು ಕುಖ್ಯಾತವಾಗಿದೆ.



‘ಕೆ–ರೇರಾ’ ವ್ಯಾಪ್ತಿಯಿಂದ ತನ್ನನ್ನು ಹೊರಗಿಡಬೇಕು ಎನ್ನುವ ‘ಬಿಡಿಎ’ ವಾದ ಸರಿಯಾದುದಲ್ಲ. ಖಾಸಗಿ ಸಂಸ್ಥೆಗಳಿಗಿಂತಲೂ ಹೆಚ್ಚಿನ ಹೊಣೆಗಾರಿಕೆ ಬಿಡಿಎಗೆ ಇರಬೇಕು.

‘ಕೆ–ರೇರಾ’ ವ್ಯಾಪ್ತಿಯಿಂದ ಬಿಡಿಎಯನ್ನು ಹೊರಗಿಡುವುದೆಂದರೆ, ಅವ್ಯವಸ್ಥೆ ಮತ್ತು ಅವ್ಯವಹಾರಗಳನ್ನು ಮುಂದುವರಿಸುವುದಕ್ಕೆ ಪರವಾನಗಿ ನೀಡುವುದೇ ಆಗಿದೆ. ಉತ್ತರದಾಯಿತ್ವ ಎನ್ನುವುದು ಆಯ್ಕೆಗೆ ಸಂಬಂಧಿಸಿದ್ದಾಗಿರಬಾರದು. ವಿಳಂಬವನ್ನು ತಪ್ಪಿಸುವುದು ಹಾಗೂ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದು ಸೇರಿದಂತೆ, ನಿವೇಶನ ಅಥವಾ ಮನೆಯನ್ನು ಕೊಳ್ಳುವವರ ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶದಿಂದ ‘ಕೆ–ರೇರಾ’ ಸ್ಥಾಪಿಸಲಾಗಿದೆ. ಹಿತಾಸಕ್ತಿ ರಕ್ಷಣೆಗೆ ಸಂಬಂಧಿಸಿದಂತೆ ಖಾಸಗಿ ಅಥವಾ ಶಾಸನಬದ್ಧ ಸಂಸ್ಥೆ ಎನ್ನುವ ವ್ಯತ್ಯಾಸವೇನೂ ಇರುವುದಿಲ್ಲ. ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಸಾರ್ವಜನಿಕರಿಗೆ ಒದಗಿಸುವ ಭರವಸೆಯನ್ನು ಈಡೇರಿಸಲು ವಿಫಲವಾದಲ್ಲಿ, ಖಾಸಗಿ ಸಂಸ್ಥೆಗಳಿಗೆ ಅನ್ವಯಿಸುವ ನಿಯಮ ನಿಬಂಧನೆಗಳು ಸರ್ಕಾರಿ ಸಂಸ್ಥೆಗೂ ಅನ್ವಯಿಸಬೇಕು. ‘ಕೆ–ರೇರಾ’ ವ್ಯಾಪ್ತಿಯಿಂದ ತನ್ನನ್ನು ಹೊರಗಿಡಬೇಕು ಎನ್ನುವ ಬಿಡಿಎ ತರ್ಕ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಪ್ರಯತ್ನ ಆಗಿರುವಂತೆಯೇ, ಸಿನಿಕತನದಿಂದಲೂ ಕೂಡಿದೆ. ನಾಗರಿಕ ಸೇವೆ ಸಲ್ಲಿಸುತ್ತಿರುವುದಾಗಿ ಹೇಳಿಕೊಳ್ಳುತ್ತಲೇ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ‘ಕೆ–ರೇರಾ’ ವ್ಯಾಪ್ತಿಗೆ ತರುವುದು ಮಾತ್ರವಲ್ಲ, ಇನ್ನೂ ಹೆಚ್ಚಿನ ಉತ್ತರದಾಯಿತ್ವಕ್ಕೆ ಒಳಪಡಿಸಬೇಕಾಗಿದೆ.

ಊರ ಹೆಸರು, ನಮ್ಮ ಉಸಿರು



ವಿಶ್ಲೇಷಣೆ

ಪುರುಷೋತ್ತಮ ಬಿಳಿಮಲೆ

> ಊರೊಂದರ ಹಿಂದೆ ನಮ್ಮ ಪೂರ್ವಸೂರಿಗಳ ನಂಬಿಕೆಗಳು, ಪ್ರಾದೇಶಿಕ ಅಸ್ಮಿತೆ, ಪ್ರಾಕೃತಿಕ ವಿಶೇಷಗಳು ಸೇರಿದಂತೆ ಹಲವು ಸಾಧ್ಯತೆಗಳು ಇರುತ್ತವೆ. ಊರ ಹೆಸರೆನ್ನುವುದು ಅದರ ಮತ್ತು ಊರವರ ಉಸಿರೂ ಹೌದು. ಈಗಾಗಲೇ ಇರುವ ಊರುಗಳ ಹೆಸರನ್ನು ಬದಲಿಸುವ ಪ್ರಯತ್ನ ಸ್ಮೃತಿಗಳನ್ನು ನಾಶಗೊಳಿಸುವ ಪ್ರಯತ್ನವೇ ಸರಿ.

ಕ್ರಿ.ಶ. 150ರ ಸುಮಾರಿಗೆ ಕರ್ನಾಟಕದ ಕಡಲ ತೀರಕ್ಕೆ ಬಂದಿದ್ದ ಟಾಲೆಮಿಯು ‘ಆರ್ಯಕ’ ಎಂಬ ದೇಶದೊಳಗಿನ 25 ಊರುಗಳ ಹೆಸರುಗಳನ್ನು ಬರೆದಿಟ್ಟಿದ್ದಾನೆ. ಅವುಗಳಲ್ಲಿ ಕೆಲವು: ಬದಯಾಮೇಯಿ (ಬಾದಾಮಿ), ಇಂಡಿ, ಕಲ್ಲಿಗೇರಿ, ಮೋದೂಗಲ್ (ಮುದುಗಲ್), ಪೆತರ್ಗಲ (ಪಟ್ಟದಕಲ್ಲು), ಬನವಾಸಿ, ಹೊನ್ನಾವರ. ಎರಡನೇ ಶತಮಾನಕ್ಕೆ ಸೇರಿದ ‘ಅಹನಾನೂರ’ ತಮಿಳುಗ್ರಂಥದಲ್ಲಿ ‘ಎರುಮೈ ನಾಡಿ’ನ ಎಂದರೆ ಮಹಿಷ ಮಂಡಲ ಅಥವಾ ಮೈಸೂರಿನ ಹೆಸರಿದೆ. ಕನ್ನಡದ ಮೊದಲ ಶಾಸನವಾದ (ಕ್ರಿ.ಶ.450) ಹಲ್ಮಿಡಿ ಶಾಸನದಲ್ಲಿ, ಪಲ್ಮಿಡಿ (ಹಲ್ಮಿಡಿ) ಮತ್ತು ಮೂಳಿವಳ್ಳಿ ಎಂಬ ಸ್ಥಳಗಳ ಹೆಸರುಗಳಿವೆ. ಶ್ರವಣಬೆಳಗೊಳದ ಶಾಸನಗಳಲ್ಲಿ ಅಲ್ಲಿರುವ ‘ಬೆಳ್ಗೊಳ’ ಅಥವಾ ‘ಬೆಳಗೊಳ’ದ ಉಲ್ಲೇಖವಿದೆ. ಕ್ರಿ.ಶ. 850ರಲ್ಲಿ ರಚಿತವಾದ ‘ಕವಿರಾಜ ಮಾರ್ಗ’ದಲ್ಲಿ ‘ಕಿಸುವೊಳಲ್’ (ಇಂದಿನ ಪಟ್ಟದಕಲ್ಲು), ‘ಮಹಾಕೋಪಣ ನಗರ’ (ಕೊಪ್ಪಳ), ಪುಲಿಗೆರೆ (ಲಕ್ಷ್ಮೇಶ್ವರ), ಒಂಕುಂದ (ಒಕ್ಕುಂದ) ಹೆಸರುಗಳಿವೆ. ಕ್ರಿ.ಶ.920ರಲ್ಲಿ ರಚಿತವಾದ ಕನ್ನಡದ ಮೊದಲ ಗದ್ಯ ಕೃತಿ ‘ವಡ್ಡಾರಾಧನೆ’ಯಲ್ಲಿ ಜೈನಮುನಿಗಳಿಗೆ ಸಂಬಂಧಿಸಿದಂತೆ ‘ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತುಂ’ ಎಂಬ ಸಾಲು ಬರುತ್ತದೆ. ಈ ಹೆಸರುಗಳು ಬಹುಮಟ್ಟಿಗೆ ಆ ಕಾಲದ ಆಡಳಿತ ವಿಭಾಗಗಳು. ಪಂಪನ ಬನವಾಸಿ, ಬಸವಣ್ಣನ ಕೂಡಲಸಂಗಮ, ಹರಿಹರನ ಹಂಪಿ, ಕುಮಾರವ್ಯಾಸನ ಗದಗ, ಕುಮಾರ ವಾಲ್ಮೀಕಿಯ ತೊರವಿ ಯಾರಿಗೆ ಗೊತ್ತಿಲ್ಲ? ಕವಿಗಳು ತಮ್ಮ ಊರುಗಳ ಹೆಸರಿಗೆ ಘನತೆ ತಂದುಕೊಟ್ಟಿದ್ದಾರೆ.

ಸ್ಥಳನಾಮಗಳ ವಿಷಯದಲ್ಲಿ ನಮ್ಮ ಹಿಂದಿನ ಅರಸರು ಹೆಚ್ಚು ವಿವೇಚನೆಯಿಂದ ನಡೆದುಕೊಂಡಿದ್ದಾರೆ. ಅವರು ಊರುಗಳ ಹೆಸರನ್ನು ಬದಲಾಯಿಸಲಿಲ್ಲ. ಕದಂಬರ ಬನವಾಸಿ, ಗಂಗರ ತಲಕಾಡು, ರಾಷ್ಟ್ರಕೂಟರ ಮಳಖೇಡ, ಚಾಲುಕ್ಯರ ಬಾದಾಮಿ, ಹೊಯ್ಸಳರ ದ್ವಾರಸಮುದ್ರ, ವಿಜಯನಗರದ ಅರಸರ ಹಂಪಿ, ಬಹಮನಿಗಳ ಗುಲ್ಬರ್ಗಾ, ನಾಯಕರ ಕೆಳದಿಯ ಹೆಸರುಗಳೆಲ್ಲ ಈಗಲೂ ಹಾಗೆಯೇ ಇದ್ದು, ವರ್ಣರಂಜಿತ ಇತಿಹಾಸವನ್ನು ಇವತ್ತಿನವರೆಗೆ ಹೊತ್ತು ತಂದಿವೆ. ವಸಾಹತು ಕಾಲದಲ್ಲಿ ಇಂಗ್ಲಿಷರಿಗೆ ಊರ ಹೆಸರುಗಳನ್ನು ಸರಿಯಾಗಿ ಉಚ್ಚರಿಸಲು ಆಗುತ್ತಿರಲಿಲ್ಲ. ಹೀಗಾಗಿ ಹಲವು ಊರಿನ ಹೆಸರುಗಳು ತಪ್ಪುತಪ್ಪಾಗಿ ದಾಖಲಾದುವು. ಜಪಾನೀ ಗೆಳೆಯರೊಬ್ಬರು ಹೊಸಪೇಟೆ ಸಮೀಪದ ಹುಲಿಗಿ ಹೆಸರನ್ನು ‘ಫುರಿಗಿ’ ಎಂದೇ ಬರೆದುಕೊಳ್ಳುತ್ತಿದ್ದರು.

ಪ್ರಸ್ತುತ ಹೆಚ್ಚು ವಿವೇಚನೆಯಿಲ್ಲದೆ ಊರಿನ ಹೆಸರುಗಳನ್ನು ಬದಲಾಯಿಸಲಾಗುತ್ತಿದೆ. ಸ್ಥಳನಾಮಗಳ ವ್ಯುತ್ಪತ್ತಿ, ಇತಿಹಾಸ ತಿಳಿಯದೆ ಹೆಸರುಗಳನ್ನು ಬದಲಾಯಿಸುವುದು ತಪ್ಪು. ರಾಜ್ಯ– ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಾಣಸಿಗುವ ಊರುಗಳ ಹೆಸರುಗಳಲ್ಲೂ ತಪ್ಪುಗಳು ಕಾಣಸಿಗುತ್ತಿವೆ. ಗೂಗಲ್ ನಕ್ಷೆಯಲ್ಲೂ ಇದೇ ಪರಿಸ್ಥಿತಿ. ಸ್ಥಳನಾಮಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿದ್ದ ವಿಶ್ವಸಂಸ್ಥೆಯು 2002ರಲ್ಲಿ, ಭೌಗೋಳಿಕ ಹೆಸರುಗಳನ್ನು ಬದಲಾಯಿಸಿ, ಆ ಜಾಗದಲ್ಲಿ ಜೀವಂತ ವ್ಯಕ್ತಿಗಳ ಹೆಸರನ್ನು ಇಡಬಾರದೆಂದು ಶಿಫಾರಸು ಮಾಡಿತ್ತು. ಇವತ್ತು ವಿಮಾನ– ರೈಲ್ವೇ ನಿಲ್ದಾಣಗಳು ಮತ್ತು ವಿಶ್ವವಿದ್ಯಾಲಯಗಳಿಗೆ ವ್ಯಕ್ತಿಗಳ ಹೆಸರನ್ನೇ ಇಡಲಾಗುತ್ತಿದೆ.

ಕರ್ನಾಟಕದಲ್ಲಿ ಸ್ಥಳನಾಮಗಳ ಕುರಿತಾಗಿ ನಮ್ಮ ಗಮನವನ್ನು ಮೊದಲು ಸೆಳೆದವರು ಶಂ.ಬಾ. ಜೋಶಿ. ಅವರು ‘ಕಂನಾಡು’ ಎನ್ನುವುದು ‘ಕರ್ನಾಟಕ’ದ ಮೂಲ ರೂಪ ಎಂದು ಹೇಳಿದ್ದಲ್ಲದೆ, ಈ ಹೆಸರು ‘ಕನ್ನ’ ಎಂಬ ಹೆಸರಿನ ಸಮುದಾಯದಿಂದ ನಿಷ್ಪನ್ನವಾಗಿದೆ ಎಂದು ವಾದಿಸಿದರು. ಅದಕ್ಕೆ ಉದಾಹರಣೆಯಾಗಿ, ಕನ್ನರ ವಾಸಸ್ಥಾನಗಳನ್ನು ತೋರಿಸುವ ಕನಕೂರು, ಕನ್ನಟ್ಟಿ, ಕನ್ನರಪಾಡಿ ಮೊದಲಾದ ಊರುಗಳನ್ನು ತೋರಿಸಿದರು. ಕಮಿಲ, ಮಸ್ಕಿ, ಬ್ಯಾಡಗಿ, ಮುದಕವಿ, ಲಾಲಗುಳಿ, ಗುಬ್ಬಿ, ಕಣಕುಂಬಿ, ಮುದ್ದೇಬಿಹಾಳ, ಜಮಖಂಡಿ, ಸೊಂಡೂರು, ಕುಷ್ಟಗಿ, ಮಾನ್ವಿ, ರೌಡಕುಂದ, ಪಿಕಲಿಹಾಳ ಮೊದಲಾದ ಹೆಸರುಗಳು ಬಹಳ ಪ್ರಾಚೀನವಾದುವು. ಹರಪ್ಪಾ ಮತ್ತು ಮೊಹೆಂಜಾದಾರೋ ಹೆಸರುಗಳು ವಿಶ್ವಖ್ಯಾತಿಯನ್ನು ಪಡೆದಿವೆ. ಅಚ್ಚರಿಯೆಂದರೆ, ನಮ್ಮಲ್ಲಿ ಹರಪ್ಪನಹಳ್ಳಿ, ಮತ್ತು ಪರಪ್ಪನ ಅಗ್ರಹಾರ ಇನ್ನೂ ಇವೆ. ವಿದ್ವಾಂಸರ ಪ್ರಕಾರ ಈ ಹೆಸರುಗಳು ಕಂಚಿನ ಯುಗಕ್ಕೆ ಸೇರಿದ್ದು, ಕ್ರಿ.ಪೂ. ಮೂರು ಸಾವಿರ ವರ್ಷಗಳಷ್ಟು ಹಳತು. ಇವನ್ನೆಲ್ಲ ಅರ್ಥಮಾಡಿಕೊಳ್ಳಲು ನಮಗೆ ಮಾನವಶಾಸ್ತ್ರ, ಕುಲಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ಇತಿಹಾಸ, ಭಾಷಾವಿಜ್ಞಾನ, ಸಾಹಿತ್ಯ, ಜಾನಪದ, ಪುರಾತತ್ವ, ಶಾಸನ ಶಾಸ್ತ್ರ, ಮೊದಲಾದ ಶಿಸ್ತುಗಳ ಅರಿವು ಬೇಕು.

ಕರ್ನಾಟಕದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಸಣ್ಣ–ದೊಡ್ಡ ಊರುಗಳಿವೆ. ನಮ್ಮಲ್ಲಿ ಗ್ರಾಮಸೂಚಿ ಇದೆ, ಆದರೆ ಊರುಗಳ ಹೆಸರಿನ ಸಮಗ್ರಪಟ್ಟಿ ಇಲ್ಲ. 16 ಮತ್ತು 17ನೇ ಶತಮಾನದಲ್ಲಿ ಹೇರಳವಾಗಿ ಹುಟ್ಟಿಕೊಂಡ ಸ್ಥಳ ಪುರಾಣಗಳಲ್ಲಿ ಊರುಗಳ ಹೆಸರನ್ನು ನಮ್ಮ ನಡುವೆ ಜನಪ್ರಿಯವಾಗಿದ್ದ ಶಿಷ್ಟ ಪುರಾಣಗಳೊಡನೆ ಜೋಡಿಸಲಾಯಿತು. ಆಗ ಊರ ಹೆಸರಿನ ಐತಿಹ್ಯಗಳು ಕೈಲಾಸದಿಂದ ಅಥವಾ ವೈಕುಂಠದಿಂದ ಶುರುವಾಗತೊಡಗಿದವು.

ಭಾಷಾಶಾಸ್ತ್ರದ ದೃಷ್ಟಿಯಿಂದ ನೋಡಿದರೆ, ಸ್ಥಳನಾಮಗಳು ನಮ್ಮ ನಾಡಿನ ಬಗ್ಗೆ ಅನೇಕ ಒಳನೋಟಗಳನ್ನು ನೀಡುತ್ತವೆ. ಅನೇಕ ಸ್ಥಳನಾಮಗಳು ಆಯಾ ಸ್ಥಳದ ಪ್ರಾಕೃತಿಕ ವೈಶಿಷ್ಟ್ಯಗಳನ್ನೋ, ಜನವಸತಿಯ ರೀತಿಗಳನ್ನೋ ವಿವರಿಸುತ್ತವೆ. ಉದಾಹರಣೆಗೆ, ಎಡೆ, ತಾಣ, ಪುರ, ಹಳ್ಳಿ, ವಾಡಿ, ಕೊಪ್ಪಲು, ಬಾಡ, ಗುತ್ತು, ಗೂಡು, ಕುಂಟೆ, ಕೊತ್ತ, ಕೋಡು, ತಟ, ಬೂಡು, ಕೊಪ್ಪಲು, ಮೊದಲಾದ ಪದಗಳುಳ್ಳ ಹೆಸರುಗಳು ಮಾನವ ವಸತಿಯ ವಿವಿಧ ಹಂತಗಳನ್ನು ಸಂಕೇತಿಸುತ್ತವೆ. ಭೌಗೋಳಿಕವಾಗಿ ಎತ್ತರವಿರುವ ಜಾಗಗಳು, ಪೆರ್, ಕಾರ್, ಮೊದಲಾದ ಪ್ರತ್ಯಯಗಳನ್ನು ಹೊಂದಿರುತ್ತವೆ. ಸಮತಟ್ಟಾದ ವಿಶಾಲ ಸ್ಥಳವಿದ್ದರೆ ಅಲ್ಲಿ ‘ಅಡ್ಕ’ ಬರುತ್ತದೆ.


ಯಾವುದೋ ಕಾರಣದಿಂದ ಪಾಳು ಬಿದ್ದ ಊರುಗಳಿಗೆ ‘ಹಾಳ’ ಸೇರಿಕೊಳ್ಳುತ್ತದೆ. ಉದಾ: ಪಿಕ್ಲಿಹಾಳ, ಬೂದಿಹಾಳ, ಇತ್ಯಾದಿ. ಮಾನವ ಸಂಸ್ಕೃತಿಯ ವಿಕಾಸದಲ್ಲಿ ಕಲ್ಲು ಬಂಡೆಗಳು ನಿರ್ಣಾಯಕ ಪಾತ್ರ ವಹಿಸಿವೆಯಾದ್ದರಿಂದ, ಸ್ಥಳನಾಮಗಳಲ್ಲಿ ಕಲ್ಲುಗಳಿಗೆ ವಿಶೇಷ ಮಹತ್ವ ನೀಡಲಾಗಿದೆ. ಬೆಣಕಲ್, ಹಾನಗಲ್, ಕಾರ್ಕಳ, ಕರೇಕಲ್, ಕಲ್ಲಹಳ್ಳಿ, ಇತ್ಯಾದಿ ಹೆಸರುಗಳಿಗೆ ಚಾರಿತ್ರಿಕ ಮಹತ್ವವಿದೆ. ಮರಹಳ್ಳಿ, ಎಡತೊರೆ, ಗುಡ್ಡೆಮನೆ, ಹುಣಿಸೇಹಳ್ಳಿ ಮೊದಲಾದ ಹೆಸರುಗಳು ಆ ಊರಿನ ವಿಶೇಷಗಳನ್ನು ತಿಳಿಸುತ್ತವೆ. ಹಲವು ಸ್ಥಳನಾಮಗಳು ಜನ ಸಮುದಾಯಗಳ ದಾಖಲೆಗಳಾಗಿರುತ್ತವೆ. ಉದಾ: ಸವಣರು ಅಂದರೆ ಜೈನಮುನಿಗಳು ವಾಸಿಸುತ್ತಿದ್ದ ಊರು ಸವಣೂರು.

ವಸತಿಗೆ ನೀರು ಬೇಕೇ ಬೇಕು. ಹೀಗಾಗಿ ಸ್ಥಳನಾಮಗಳಲ್ಲಿ ನೀರಿಗೆ ವಿಶೇಷ ಮಹತ್ವ. ಎರಡು ನದಿಗಳು ಸೇರುವ ಸ್ಥಳವಾಗಿದ್ದರೆ ಅದು ‘ಕೂಡಿಗೆ’. ನೀರಿನಿಂದ ಸುತ್ತುವರಿದ ಸ್ಥಳವಾಗಿದ್ದರೆ, ಅದು ‘ಕುರುವ’ ಅಥವಾ ‘ಕುದುರು’. ಅಲ್, ಆರ್, ಆಲ್, ಇರ್, ನೀರ್, ಬೆಳ್, ಕೆರೆ, ಅಜೆ, ಕಜೆ, ಕುದ್ರು, ಮೊದಲಾದುವು ನೀರಿನ ಇರುವನ್ನು ಸೂಚಿಸುವ ಪ್ರತ್ಯಯಗಳು. ತಮಿಳಿನಲ್ಲಿ ‘ಅಲಂಗಟ್ಟಿ’ ಎಂದರೆ ನೀರಿನ ಗಟ್ಟಿ, ಅದುವೇ ಕನ್ನಡದಲ್ಲಿ ‘ಆಲಿಕಲ್ಲು’. ಮಂಗಳೂರನ್ನು ತುಳುವಿನಲ್ಲಿ ‘ಕುಡ್ಲ’ ಎನ್ನುತ್ತಾರೆ. ಅದು ನೀರು ಕೂಡುವ ಸ್ಥಳ, ನೇತ್ರಾವತಿ ನದಿ ಕಡಲಿಗೆ ಸೇರುವ ಜಾಗ. ಕೂಡಲಸಂಗಮದಲ್ಲೂ ಈ ಪದ ಇದೆ. ಗೊಲ್ಲರಹಳ್ಳಿ, ಬೇಡರಳ್ಳಿ, ಮಲ್ಲ, ಮಲಪ್ರಭೆ, ಕಣ್ಣ, ಹಲ, ಮುರ, ಸಿರ, ನಾಗ, ಕಂದ, ಮೊದಲಾದ ಪದಗಳು ಪ್ರಾಚೀನ ಸಮುದಾಯಗಳ ವಸತಿಯನ್ನು ಹೇಳುತ್ತವೆ. ಕರ್ನಾಟಕದಲ್ಲಿ ಸುಮಾರು 30 ಸಮುದಾಯಗಳನ್ನು ಸೂಚಿಸುವ 2500ಕ್ಕೂ ಹೆಚ್ಚು ಸ್ಥಳನಾಮಗಳಿವೆ.

ಕನ್ನಡದಲ್ಲಿ ಪ್ರಾಣಿ ಮತ್ತು ಸಸ್ಯಸೂಚಕ ಸ್ಥಳನಾಮಗಳು ಹೇರಳವಾಗಿವೆ. ಇತ್ತೀಚೆಗೆ ಭಾಗ್ಯನಗರವೆಂದು ಬದಲಾಯಿಸಿದ ಊರಿನ ಹೆಸರಲ್ಲಿ ಬಾಗೇ ಮರ ಇತ್ತು. ಆನೆಕಲ್ಲು, ಎಲಿಮಲೆ, ಹುಲಿಕಲ್, ಗಿಣಿಗೇರಾ, ನವಿಲೂರು, ನೊಣವಿನಕೆರೆ, ಮಂಗನಹಳ್ಳಿ, ಮೊದಲಾದ ಹೆಸರುಗಳು ಈ ನಿಟ್ಟಿನಿಂದ ಮುಖ್ಯವಾಗಿವೆ. ಸಿಂಹ(ಸಿಂಗ)ದಿಂದ ಆರಂಭವಾಗುವ ಸುಮಾರು 90 ಊರುಗಳು ಕರ್ನಾಟಕದಲ್ಲಿವೆ. ಮರವೂರು, ಮಾವಿನ ಕಟ್ಟೆ, ಪೆಲತ್ತಡ್ಕ, ಹುಲ್ಲೂರು, ಕಳಲೆ, ಮಾವಿನ ಕುರ್ವೆ, ಬಾಳೆಹೊನ್ನೂರು, ಹುಣಿಸೆಕೊಪ್ಪ, ಅರಳೀಕಟ್ಟೆ, ತಾವರೆಗೆರೆ, ಜಾಲಿಹಾಳ, ಕಡಲೆಕೊಪ್ಪ, ಜೋಳದರಾಶಿ ಮೊದಲಾದ ಹೆಸರುಗಳು ಸಸ್ಯಸೂಚಕಗಳು.

ಇತ್ತೀಚೆಗೆ ಮಲೆನಾಡಿನ ಒಂದು ಪುಟ್ಟ ಹಳ್ಳಿಗೆ ಹೋಗಿದ್ದೆ. ಆ ಹಳ್ಳಿಯ ತಿರುವಿನಲ್ಲಿ ಒಂದು ನಾಮಫಲಕ ಕಾಣಿಸಿತು. ಹೋಗಿ ನೋಡಿದರೆ, ‘ಶಿವಾಜಿ ನಗರ’ ಎಂದು ಬರೆದಿತ್ತು. ಊರಿಗೂ ಹೆಸರಿಗೂ ಇರಬಹುದಾದ ಸಂಬಂಧದ ಬಗ್ಗೆ ಅಲ್ಲಿನ ಯಾರಿಗೂ ಏನೂ ಗೊತ್ತಿರಲಿಲ್ಲ. ಆ ಊರಿನ ಮುಖ್ಯಸ್ಥರನ್ನು ಕಂಡು, ‘ದಯವಿಟ್ಟು ಊರಿನ ಹೆಸರು ಬದಲಾಯಿಸಬೇಡಿ, ನಿಮ್ಮ ಊರಿನ ಹೆಸರು, ಊರಿನ ನಡುವೆ ಹರಿಯುವ ಆ ಪುಟ್ಟ ಹೊಳೆಯಿಂದ ಬಂದಿದೆ’ ಎಂದು ವಿವರಿಸಿದೆ. ಅವರು ಒಪ್ಪಿಕೊಂಡರು. ಸ್ಥಳೀಯತೆಯನ್ನು ನಾಶಮಾಡಿ ನಾವು ಯಾವ ದೇಶವನ್ನೂ ಕಟ್ಟಲಾರೆವು.

ಈಗ ನಾವೆಲ್ಲರೂ ಒಟ್ಟುಗೂಡಿ ನಮ್ಮ ನಮ್ಮ ಊರಿನ ಹೆಸರುಗಳನ್ನು ಉಳಿಸಿಕೊಳ್ಳಬೇಕಾಗಿದೆ. ಊರ ಹೆಸರು, ನಮ್ಮ ಉಸಿರು! ಹೊಸ ಊರುಗಳನ್ನು ಕಟ್ಟುವವರು ಅವರಿಗೆ ಬೇಕಾದ ಹೆಸರುಗಳನ್ನು ಇಟ್ಟುಕೊಳ್ಳಲಿ. ಆದರೆ ಅವರಿಗೆ ಹಳೆಯ ಹೆಸರುಗಳನ್ನು ಬದಲಾಯಿಸುವ ಅಧಿಕಾರ ಇಲ್ಲ.



ವಾಚಕರ ವಾಣಿ

ಕಾಲೇಜು ಆವರಣದಲ್ಲಿ ಆಸ್ಪತ್ರೆ ಬೇಡ

ಬೆಂಗಳೂರಿನ ಹೆಬ್ಬಾಳದ ಪಶುವೈದ್ಯ ಕಾಲೇಜಿನ ಆವರಣದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸುವ ಸಲುವಾಗಿ ನಗರಾಭಿವೃದ್ಧಿ ಸಚಿವರಿಂದ ಇತ್ತೀಚೆಗೆ ಸ್ಥಳ ಪರಿಶೀಲನೆ ನಡೆದಿದೆ. ಈ ಭಾಗದಲ್ಲಿ ಈಗಾಗಲೇ ಮೂರು ಬೃಹತ್ ಖಾಸಗಿ ಆಸ್ಪತ್ರೆಗಳಿವೆ. ಆದರೂ, ಮಲ್ಟಿ ಸ್ಪೆಷಾಲಿಟಿ ಸರ್ಕಾರಿ ಆಸ್ಪತ್ರೆ ನಿರ್ಮಿಸುವ ಸಚಿವರ ಉದ್ದೇಶದ ಬಗ್ಗೆ ತಕರಾರಿಲ್ಲ. ಆದರೆ, ಉದ್ದೇಶಿತ ಆಸ್ಪತ್ರೆಯನ್ನು ಪಶುವೈದ್ಯ ಕಾಲೇಜಿನ ಆವರಣದಲ್ಲಿ ನಿರ್ಮಿಸುವುದು ಸೂಕ್ತವಲ್ಲ.

ವಿಧಾನಸೌಧದಿಂದ 7 ಕಿ.ಮೀ. ದೂರದಲ್ಲಿ ಪ್ರಶಾಂತ ವಾತಾವರಣದಲ್ಲಿರುವ ಪಶುವೈದ್ಯ ಕಾಲೇಜು ಬೆಂಗಳೂರು ಉತ್ತರ ಭಾಗದ ಪಾರಂಪರಿಕ ಕಟ್ಟಡವಾಗಿದೆ. ದೇಶದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾದ ಈ ಸಂಸ್ಥೆಯು, ಪಶುಪಾಲನೆ ಮತ್ತು ಪಶುವೈದ್ಯ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದೆ. ಇದೇ ಆವರಣದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಿದರೆ, ಆಸ್ಪತ್ರೆಗೆ ಬರುವ ರೋಗಿಗಳಿಗೂ ಪ್ರಾಣಿಗಳ ಮಾಲೀಕರಿಗೂ ಅನನುಕೂಲ. ಈ ಹಿಂದೆಯೂ ಕಾಲೇಜಿನ ಸ್ಥಳವನ್ನು ಖಾಸಗಿಯವರಿಗೆ ಹಸ್ತಾಂತರ ಮಾಡುವ ಪ್ರಯತ್ನ ನಡೆದು, ಅದಕ್ಕೆ ಪ್ರತಿಭಟನೆ ಎದುರಾಗಿತ್ತು. ಪಶುವೈದ್ಯ ಕಾಲೇಜು ಆವರಣದಲ್ಲಿ ಪಶುವೈದ್ಯ ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣೆ, ಇತ್ಯಾದಿ ಚಟುವಟಿಕೆಗಳನ್ನು ಹೊರತುಪಡಿಸಿ ಅನ್ಯ ಕ್ಷೇತ್ರದ ಚಟುವಟಿಕೆಗಳಿಗೆ ಅವಕಾಶ ಬೇಡ.

ಡಾ. ಟಿ. ಜಯರಾಂ, ಕೋಲಾರ

ಗಾಜಾದ ಸಂಕಟಕ್ಕೆ ವಿಶ್ವ ಕುರುಡು

‘ಗಾಜಾದ ಮಗುವಿಗೆ ಇಟಲಿಯಲ್ಲಿ ಚಿಕಿತ್ಸೆ’ (ಪ್ರ.ವಾ., ಸೆ. 7) ಸುದ್ದಿ, ನೋವಿನ ನಡುವೆಯೂ ಮಾನವೀಯತೆಯ ಕಿರಣದಂತೆ ಕಾಣಿಸಿತು. ಇಸ್ರೇಲ್ ಮತ್ತು ಹಮಾಸ್ ನಡುವೆ ನಡೆಯುತ್ತಿರುವ ಸಂಘರ್ಷದ ಪರಿಣಾಮವಾಗಿ ಲಕ್ಷಾಂತರ ಮಕ್ಕಳು, ವೃದ್ಧರು, ರೋಗಿಗಳು ಅನುಭವಿಸುತ್ತಿರುವ ಬವಣೆ ಹೃದಯವಿದ್ರಾವಕ.

ಇಸ್ರೇಲ್ ದಾಳಿಯಿಂದ ಗಾಜಾ ನಗರ ನಾಶವಾಗಿದೆ, ಸಾವಿರಾರು ಮಂದಿ ಸಾವಿಗೀಡಾಗಿದ್ದಾರೆ. ಇಷ್ಟಾದರೂ ಇಸ್ರೇಲ್ ವಿರುದ್ಧ ವಿಶ್ವನಾಯಕರು ಮೌನವಾಗಿದ್ದಾರೆ. ಅರಬ್ ರಾಷ್ಟ್ರಗಳು ತುಟಿಬಿಚ್ಚಿಲ್ಲ. ಅಮೆರಿಕದ ಟ್ರಂಪ್ ಅವರ ಧ್ವನಿ ಯಾರಿಗೂ ಕೇಳಿಸದಷ್ಟು ಸೌಮ್ಯವಾಗಿದೆ! ವಿಶ್ವಸಂಸ್ಥೆಯು ಯಾವ ಉದ್ದೇಶಕ್ಕಾಗಿ ಸ್ಥಾಪನೆ ಆಯಿತೋ ಅರ್ಥವಾಗದ ಸ್ಥಿತಿಯಲ್ಲಿ ಜಗತ್ತು ಸಾಗುತ್ತಿದೆ. ನಿರಪರಾಧಿಗಳಾದ ಮಕ್ಕಳು ತುತ್ತು ಅನ್ನಕ್ಕಾಗಿ ಪರಿತಪಿಸುವ ದೃಶ್ಯಗಳನ್ನು ನೋಡಿದರೆ ವಿಶ್ವದ ಅಂತರಂಗದಿಂದ ಮಾನವೀಯತೆಯನ್ನು ಅಳಿಸಿಹಾಕಿರುವಂತೆ ಭಾಸವಾಗುತ್ತದೆ.

ತಿರುಪತಿ ನಾಯಕ್, ಕಲಬುರಗಿ

> **ಗ್ರಹಣ**
>
> ಸೂರ್ಯ ಚಂದ್ರರ
> ನಡುವೆ ಭೂಮಿ ಬಂದರೆ
> ಚಂದ್ರಗ್ರಹಣ!
> ಭಾರತ–ರಷ್ಯಾ ನಡುವೆ
> ಅಮೆರಿಕ ಬಂದರೆ
> ‘ಸುಂಕ’ಗ್ರಹಣ!
>
> **ಮ.ಗು. ಬಸವಣ್ಣ,** ಮೈಸೂರು

ಪ್ರಶಸ್ತಿಗೆ ಶಿಫಾರಸು–ಮನವಿ ಸಲ್ಲದು

ಪ್ರಶಸ್ತಿಯೊಂದಕ್ಕೆ ಗೌರವ ಸಿಗಬೇಕಾದರೆ, ಪ್ರಶಸ್ತಿಗೆ ಇರುವ ಮಾನದಂಡಗಳ ಮೂಲಕವೇ ಫಲಾನುಭವಿಗಳ ಆಯ್ಕೆ ನಡೆಯಬೇಕು. ಅದಕ್ಕೆ ಶಿಫಾರಸು, ಮನವಿ ಅಗತ್ಯವಿಲ್ಲ. ಯಾರದೋ ಆಗ್ರಹ–ಮನವಿಗೆ ದೊರೆಯುವಂತಾದರೆ ಪ್ರಶಸ್ತಿಗೆ ಗೌರವ ಸಿಗಲು ಹೇಗೆ ಸಾಧ್ಯ? ದಿವಂಗತ ನಟ ವಿಷ್ಣುವರ್ಧನ್ ಅವರಿಗೆ ‘ಕರ್ನಾಟಕ ರತ್ನ’ ಪ್ರಶಸ್ತಿ ನೀಡಿ ಎಂದು ಚಲನಚಿತ್ರ ನಟಿಯರಾದ ಮಾಳವಿಕಾ, ಜಯಮಾಲಾ ಹಾಗೂ ಶ್ರುತಿ ಅವರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಸಲ್ಲಿಸಿದ ಬೇಡಿಕೆ ನೋಡಿದಾಗ ಹೀಗನ್ನಿಸಿತು. ವಿಷ್ಣುವರ್ಧನ್ ಅವರು ಜೀವಂತವಾಗಿದ್ದಾಗ ಪ್ರಶಸ್ತಿ ದೊರೆತಿದ್ದರೆ ಅದಕ್ಕೆ ಅರ್ಥವಿರುತ್ತಿತ್ತು. ನಮ್ಮೊಂದಿಗೆ ಇಲ್ಲದಿರುವ ಸಾಧಕರಿಗೆ ಪ್ರಶಸ್ತಿ ನೀಡಿರೆಂದು ಒತ್ತಾಯಿಸುವುದು ಅಗಲಿದವರಿಗೆ ಗೌರವ ತರುವಂತಹದ್ದಲ್ಲ. ನಾಡು ಮೆಚ್ಚಿದ ಕಲಾವಿದನಿಗೆ ಪ್ರಶಸ್ತಿಯ ಹಂಗಾದರೂ ಎಲ್ಲಿ? ವಿಷ್ಣು ಅವರನ್ನು ಜನಮನದಲ್ಲಿ ಅರ್ಥಪೂರ್ಣವಾಗಿ ಉಳಿಸುವ ಕೆಲಸಕ್ಕೆ ಚಿತ್ರೋದ್ಯಮ ಮುಂದಾಗಬೇಕು.

ವಿ.ಜಿ. ಇನಾಮದಾರ, ಸಾರವಾಡ

ಯಾವುದು ಗಂಭೀರ? ಯಾವುದು ಲಘು?

ರಾಜ್ಯ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಲಘು ಸ್ವರೂಪದ ಪ್ರಕರಣಗಳನ್ನು ಗಂಭೀರವಾಗಿಯೂ, ಗಂಭೀರ ಸ್ವರೂಪದ ಪ್ರಕರಣಗಳನ್ನು ಲಘುವಾಗಿಯೂ ಪರಿಗಣಿಸುತ್ತಿರುವಂತಿದೆ. ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿ ದಾಂಧಲೆ ಎಬ್ಬಿಸಿದ್ದ ಪ್ರಕರಣ ಸೇರಿದಂತೆ ರಾಜ್ಯದ ಬೇರೆಬೇರೆ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಹಲವು ಪ್ರಕರಣಗಳನ್ನು ಹಿಂಪಡೆಯಲು ಇತ್ತೀಚಿನ ಸಚಿವ ಸಂಪುಟ ಸಭೆ ನಿರ್ಧರಿಸಿದೆಯಂತೆ! ಅವೆಲ್ಲವೂ ಗಂಭೀರ ಸ್ವರೂಪದ ಅಪರಾಧದ ಪ್ರಕರಣಗಳು. ಇನ್ನೊಂದೆಡೆ, ಸಂಚಾರ ನಿಯಮ ಉಲ್ಲಂಘಿಸಿದ ಪ್ರಕರಣಗಳಲ್ಲಿ ಕೋಟ್ಯಂತರ ರೂಪಾಯಿ ದಂಡವನ್ನು ಪೊಲೀಸರು ವಸೂಲು ಮಾಡುತ್ತಾ ಬೀಗುತ್ತಿದ್ದಾರೆ.

ಪಿ.ಜೆ. ರಾಘವೇಂದ್ರ, ಮೈಸೂರು

ದಂಡ ಪಾವತಿ: ಮುಖ್ಯಮಂತ್ರಿ ಮಾದರಿ

ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ 2500 ರೂಪಾಯಿ ದಂಡ ಪಾವತಿ ಮಾಡಿದ್ದಾರೆ (ಪ್ರ.ವಾ., ಸೆ. 6). ಸಂಚಾರ ನಿಯಮ ಉಲ್ಲಂಘನೆ ಅಡಿಯಲ್ಲಿ ಮುಖ್ಯಮಂತ್ರಿ ಅವರ ಕಾನೂನು ಗೌರವಿಸುವ ಧೋರಣೆ ಮಾದರಿ ನಡೆಯಾಗಿದೆ. ಇದೇ ರೀತಿಯ ಉಲ್ಲಂಘನೆಯಾಗಿದ್ದಲ್ಲಿ ಉಳಿದ ಸಚಿವರು, ಅಧಿಕಾರಿ ವರ್ಗದವರು ಸ್ವಯಂಪ್ರೇರಣೆಯಿಂದ ದಂಡ ಕಟ್ಟಬೇಕು. ಅದು ಸಾಧ್ಯವಾದಲ್ಲಿ, ಕಾನೂನು ಪಾಲನೆ ಬಗ್ಗೆ ಜನಸಾಮಾನ್ಯರಿಗೂ ಪ್ರೇರಣೆ ದೊರೆಯುವಂತಾಗುತ್ತದೆ.

ಡಿ. ಪ್ರಸನ್ನಕುಮಾರ್, ಬೆಂಗಳೂರು

ಚಾಟಿ



ಗೌರವಧನದ ತಾರತಮ್ಯ

ಪ್ರಜ್ವಲ್ ರೇವಣ್ಣ ಜೈಲಿನಲ್ಲಿ ಕೆಲಸ ಮಾಡಿದರೆ ₹ 524 ದಿನಗೂಲಿ. ಅತಿಥಿ ಶಿಕ್ಷಕರಿಗೆ ತಿಂಗಳ ಅಗೌರವದ ಗೌರವಧನ ಎಷ್ಟು? ಕೈದಿಗಳಿಗಿಂತ ಶಿಕ್ಷಕರು ಕಡೆಯಾ? ಇದೆಂಥ ಕೇಂದ್ರ, ರಾಜ್ಯ ಸರ್ಕಾರಗಳು?

ಮಹಾಬಲೇಶ್ವರ ರಾವ್, ನಿವೃತ್ತ ಪ್ರಾಧ್ಯಾಪಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ದಸರಾ ಎಲ್ಲರನ್ನೂ ಒಳಗೊಂಡಂತಹ ನಾಡಹಬ್ಬವೇ ಹೊರತು, ಬಿಜೆಪಿ ಪಕ್ಷದ ಕಚೇರಿಗಾಗಲೀ ಅಥವಾ ಅವರನ್ನು ಹೀಗೆ ದ್ವೇಷಮಯವಾಗಿ ರೂಪಿಸುವ ಆರ್‌ಎಸ್‌ಎಸ್ ಕಚೇರಿಗಾಗಲೀ ಸಂಬಂಧಿಸಿದ ಉತ್ಸವವಲ್ಲ. ಈ ಸಂಗತಿಯನ್ನು ಬಿಜೆಪಿಗರು ಬೇಗ ಅರಿತರೆ ಉತ್ತಮ.

ಡಾ. ಎಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 8-9-2000

● **ತೆಂಡೂಲ್ಕರ್ ಜೊತೆ ಸಿಬಿಐ ಚರ್ಚೆ**

ಮುಂಬೈ, ಸೆ. 7 (ಪಿಟಿಐ): ಕ್ರಿಕೆಟ್ ಮೋಸದಾಟಕ್ಕೆ ಸಂಬಂಧಿಸಿದಂತೆ ಸಿಬಿಐ ಅಧಿಕಾರಿಗಳು ಭಾರತ ತಂಡದ ಮಾಜಿ ನಾಯಕ ಸಚಿನ್ ತೆಂಡೂಲ್ಕರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.

ಪಂದ್ಯಗಳು ನಡೆಯುವಾಗ ಡ್ರೆಸ್ಸಿಂಗ್ ರೂಮಿಗೆ ಯಾರಾದರೂ ಹೊರಗಿನ ವ್ಯಕ್ತಿಗಳು ಬರುತ್ತಿದ್ದರೇ ಎಂದು ಅವರು ಕೇಳಿದರು. ಆಟಗಾರರ ನಡುವಣ ಸಂಬಂಧ, ಡ್ರೆಸ್ಸಿಂಗ್ ರೂಮಿನ ವಾತಾವರಣ ಮತ್ತಿತರ ವಿಷಯಗಳ ಬಗ್ಗೆ ಅವರು ಪ್ರಶ್ನಿಸಿದರು ಎಂದು ಸಚಿನ್ ಹೇಳಿದ್ದಾರೆ.

● **ರಾಜ್ ಅಪಹರಣ: 40ನೇ ದಿನ**

ಬೆಂಗಳೂರು, ಸೆ.7: ರಾಜ್‌ಕುಮಾರ್ ಮತ್ತು ಇತರ ಮೂವರ ಅಪಹರಣ ಪ್ರಕರಣಕ್ಕೆ 40 ದಿನಗಳಾಗಿದ್ದು, ಅವರ ಬಿಡುಗಡೆಗೆ ಸಂಬಂಧಿಸಿದಂತೆ ರಾಜ್ಯದ ಮುಖ್ಯಮಂತ್ರಿ ಜೊತೆ ಚರ್ಚಿಸಲು ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿ ಇಂದು ಬೆಂಗಳೂರಿಗೆ ಆಗಮಿಸಲಿದ್ದಾರೆ.

75 ವರ್ಷಗಳ ಹಿಂದೆ

ಶುಕ್ರವಾರ, 8-9-1950

● **ಭದ್ರತಾ ಸಮಿತಿ ಸಭೆಯಲ್ಲಿ ರಷ್ಯಾದಿಂದ 44ನೇ ‘ವೀಟೊ’**

ಲೇಕ್ ಸಕ್ಸಸ್, ಸೆ. 7: ಸೋವಿಯತ್ ರಷ್ಯಾದ ಪ್ರತಿನಿಧಿ ಜೇಕಬ್ ಮಲಿಕ್ ಅವರು ಕಳೆದ ರಾತ್ರಿ ನಡೆದ ಭದ್ರತಾ ಸಮಿತಿ ಸಭೆಯಲ್ಲಿ, ಉತ್ತರ ಕೊರಿಯಾಕ್ಕೆ ವಿವಿಧ ದೇಶಗಳು ನೆರವು ನೀಡುವುದನ್ನು ತಡೆಯುವ ಕುರಿತು ಅಮೆರಿಕ ಮಂಡಿಸಿದ ನಿರ್ಣಯದ ವಿರುದ್ಧ ‘ವೀಟೊ’ ಚಲಾಯಿಸಿದರು. ಇದರೊಂದಿಗೆ ಭದ್ರತಾ ಸಮಿತಿಯಲ್ಲಿ ರಷ್ಯಾ 44ನೇ ಬಾರಿ ವೀಟೊ ಚಲಾಯಿಸಿದಂತಾಗಿದೆ.

ವಿಶ್ವಸಂಸ್ಥೆಯ ವಿರುದ್ಧ ಉತ್ತರ ಕೊರಿಯನ್ನರು ನಿರಂತರವಾಗಿ ವ್ಯಕ್ತಪಡಿಸುತ್ತಿರುವ ಅಸಮ್ಮತಿ ಕುರಿತಾದ ಖಂಡನೆಯನ್ನೂ ಅಮೆರಿಕ ಮಂಡಿಸಿದ್ದ ನಿರ್ಣಯ ಒಳಗೊಂಡಿತ್ತು. ನಿರ್ಣಯದ ಪರವಾಗಿ ಒಂಬತ್ತು ದೇಶಗಳು ಹಾಗೂ ವಿರುದ್ಧವಾಗಿ ರಷ್ಯಾ ಮತ ಚಲಾಯಿಸಿದವು. ಯುಗೊಸ್ಲೋವಿಯಾ ಮತದಾನದಿಂದ ದೂರ ಉಳಿದಿತ್ತು.

ಚುರುಮುರಿ



ಅಂಬಾಸಾ–ಡಾಗ್

● ಸುಮಂಗಲಾ

‘ಬ್ರಶ್ಶು, ಬಣ್ಣ ಕೊಡಿಸಿದ್ದರೆ ನಾನೂ ಛಂದ ಚಿತ್ರ ಬಿಡಿಸ್ತಿದ್ದೆ. ನಾ ಏನು ಕೇಳಿದ್ರೂ ನೀ ಕೊಡಿಸಂಗಿಲ್ಲ’ ಎಂದು ಬೆಕ್ಕಣ್ಣ ಮೂತಿಯುಬ್ಬಿಸಿತು.

‘ಮೊದ್ಲು ಇಲಿ ಹಿಡಿಯೂದು ಸರಿಯಾಗಿ ಕಲಿಯಲೇ. ನಿನ್ನ ಕೆಲಸ ಏನಿರತದ ಅದನ್ನ ಸರಿಯಾಗಿ ಮಾಡೂದು ಕಲಿ...’ ಎಂದು ಬೈದೆ.

ಡಾಲಿ ಎಂಬ ನಾಯಿ ಬಾಯಿಯಲ್ಲಿ ಬ್ರಶ್ ಹಿಡಿದು ಪೇಂಟಿಂಗ್ ಮಾಡುವುದನ್ನು ಕಲಿತು, ಈಗ ಕಲಾವಿದೆ ಆಗಿದೆಯಂತೆ. ಹಿಂದೂಸ್ತಾನ್ ಪೆನ್ಸಿಲ್ ಕಂಪನಿಯ ಅಪ್ಸರಾ ಬ್ರಾಂಡಿಗೆ ಡಾಲಿಯು ಬ್ರಾಂಡ್ ಅಂಬಾಸಡರ್, ಅಂದರೆ ‘ಅಂಬಾಸಾ–ಡಾಗ್’ ಆಗಿದೆಯೆಂಬ ಸುದ್ದಿಯನ್ನು ಬೆಕ್ಕಣ್ಣ ಓದಿತು.

‘ಬೀದಿ ನಾಯಿಮರಿಯಾಗಿದ್ದ ಆಕಿನ ಗಂಡ ಹೆಂಡತಿ ಸಾಕಿ, ಡಾಲಿ ಅಂತ ಹೆಸರಿಟ್ಟು, ಪೇಂಟಿಂಗ್ ಮಾಡೂದು ಕಲಿಸಿ, ಕಲಾವಿದೆ ಮಾಡ್ಯಾರೆ. ಎಂಥಾ ಅದೃಷ್ಟವಂತೆ ಡಾಲಿ! ಈಗ ಬ್ರಾಂಡ್ ಅಂಬಾಸಡರ್ ಆಗಿ ಲಕ್ಷಗಟ್ಟಲೆ ರೊಕ್ಕ ಗಳಿಸ್ತಾಳ!’ ಎಂದು ಬೆಕ್ಕಣ್ಣ ಹೆಮ್ಮೆಯಿಂದ ಹೇಳಿತು.

‘ಅಂಬಾಸಾ–ಡಾಗ್’ ಚಿತ್ರ ಬಿಡಿಸುವ ವಿಡಿಯೋ ನೋಡುತ್ತ, ಬೆಕ್ಕಣ್ಣ ಸಾದಾ ಪೆನ್ಸಿಲನ್ನು ಬಾಯಲ್ಲಿ ಕಚ್ಚಿ ಹಿಡಿದು ಹಾಳೆಯ ಮೇಲೆ ಚಿತ್ರ ಬಿಡಿಸಲು ಶುರು ಮಾಡಿತು.

‘ನಿರ್ಮಲಕ್ಕ ಪೆನ್ಸಿಲ್ಲು, ಅಳಿಸೋ ರಬ್ಬರಿನ ಜಿಎಸ್‌ಟಿ ಇಳಿಸ್ಯಾಳೆ. ಈಗರೆ ನನಗೆ ಬಣ್ಣದ ಪೆನ್ಸಿಲು ತಂದುಕೊಡು’ ಎಂದು ವರಾತ ಹಚ್ಚಿತು.

‘ನವಿಲು ನೋಡಿ ಕೆಂಬೂತ ಕುಣೀತು ಅಂತಾರಲ್ಲ, ಹಂಗೆ ನೀನೀಗ ಅಂಬಾಸಾ–ಕ್ಯಾಟ್ ಆಗತೀಯೇನು’ ಎಂದು ಕಿಚಾಯಿಸಿದೆ.

‘ಈಗ ಎಐ ಉಪಯೋಗಿಸಿ ಬೇಕಾದಂಥ ಚಿತ್ರ ಬಿಡಿಸಬೌದು. ಅದ್ರ ಜೊತಿಗಿ ನಾವು ಪ್ರಾಣಿಗಳೂ ಹಿಂಗೆ ಚಿತ್ರ ಬಿಡಿಸಾಕೆ ಶುರು ಮಾಡಿದರೆ ಮನುಷ್ಯ ಕಲಾವಿದರಿಗೆ ಕೆಲಸಾನೇ ಇರಂಗಿಲ್ಲ. ಇನ್ನು ಬರಬರತಾ ಎಐ, ರೊಬಾಟ್‌ಗಳು ಮತ್ತು ನಾವು ಪ್ರಾಣಿಗಳೇ ಎಲ್ಲಾ ಕೆಲಸ ಮಾಡತೀವಿ. ನೀವು ಖಾಲಿ ಕುಂದ್ರತೀರಿ, ತಿಳಕೋ!’ ಎಂದು ಎಚ್ಚರಿಸುವಂತೆ ಬೆಕ್ಕಣ್ಣ ಗುರುಗುಟ್ಟಿದಾಗ ಉತ್ತರ ಹೊಳೆಯದೆ ಪೆಚ್ಚಾದೆ.

ಸಂಗತ

ನದಿಯ ನೆನಪಿನ ಹಂಗು ಮತ್ತು ಹೊಣೆ

‘ಕಾಳಿ’ ಬರಿಯ ಸಾಕ್ಷ್ಯಚಿತ್ರವಲ್ಲ; ನದಿ ಹಾಗೂ ಪರಿಸರದ ಅನನ್ಯತೆಯನ್ನು ಕಟ್ಟಿಕೊಡುವ ಅಪೂರ್ವ ದಾಖಲೆ. ನಮ್ಮ ಆತ್ಮಸಾಕ್ಷಿಗೊಂದು ವಿವೇಕದ ಒರೆಗಲ್ಲು.

● ಗಿರಿಧರ ಕುಲಕರ್ಣಿ

ಅಮೋಘವರ್ಷ ಅವರ ‘ಕಾಳಿ’ ಸಾಕ್ಷ್ಯಚಿತ್ರ ಅನಾವರಣಗೊಂಡಿದ್ದು 2015ರ ಆಗಸ್ಟ್ 14ರಂದು. ಹತ್ತು ವರ್ಷಗಳ ನಂತರ ಈ ಸಾಕ್ಷ್ಯಚಿತ್ರ, ಭವಿಷ್ಯದ ಶಕುನದಂತೆ ಭಾಸವಾಗುತ್ತಿದೆ.

ಜೀವನದಿಯನ್ನು ಕೊಂಡಾಡಿರುವ ಸಾಕ್ಷ್ಯಚಿತ್ರ, ಇಂದು ನಾವು ಕಳೆದುಕೊಳ್ಳುತ್ತಿರುವುದೇನು ಎಂಬುದನ್ನು ಮನದಟ್ಟಾಗಿಸುತ್ತಿದೆ. ಪಶ್ಚಿಮಘಟ್ಟಗಳ ಮಡಿಲಲ್ಲಿರುವ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಪಾತಾಗುಡಿ ಎನ್ನುವ ಪುಟ್ಟ ಗ್ರಾಮದ ಜಾನಕಿ ಎನ್ನುವ ಅಜ್ಜಿ, ತನ್ನ ಮೊಮ್ಮಗ ಗಜಾನನನನ್ನು ಕಾಳಿ ನದಿಯ ಉಗಮ ಸ್ಥಳಕ್ಕೆ ಕರೆದುಕೊಂಡು ಹೋಗುವ ದೃಶ್ಯಗಳು, ಕಾಲವೇ ನದಿಯಂತೆ ಹರಿದುಹೋದರೂ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ.

‘ಕಾಳಿ’ ಸಾಕ್ಷ್ಯಚಿತ್ರ ಪರಿಸರ ಸಂರಕ್ಷಣೆಯ ಒಂದು ಚಳವಳಿಯಂತೆಯೂ ಕಾಣಿಸುತ್ತದೆ. ಕಾಳಿ ನದಿಯನ್ನು ಮಾನವನ ದುರಾಸೆಗೆ ಮೀಸಲಿಟ್ಟಿರುವ ಸಂಪನ್ಮೂಲವೆಂದು ನೋಡದೆ, ಜೀವಂತ ನದಿ ಹಾಗೂ ಪೀಳಿಗೆಗಳ ಬಂಧಿಸುವ ಜೀವಸಂಧಾನದ ರೂಪದಲ್ಲಿ ನೋಡುವಂತೆ, ಕರುನಾಡನ್ನು ಕೂಗಿ ಕರೆವ ರೂಪದಲ್ಲಿ ಈ ಸಾಕ್ಷ್ಯಚಿತ್ರವನ್ನು ನೋಡಬಹುದು. ಈ ಸಾಕ್ಷ್ಯಚಿತ್ರ, ನದಿಯ ಸೌಂದರ್ಯವನ್ನಷ್ಟೇ ಸೆರೆಹಿಡಿಯಲಿಲ್ಲ; ಕಾಳಿಯ ಜೀವನ್ಮರಣದ ಹೋರಾಟವನ್ನೂ ಹಿಡಿದಿಟ್ಟಿದೆ. ಜಲಾನಯನ ಪ್ರದೇಶಗಳು, ಅರಣ್ಯಗಳು, ಕುಣಬಿ ರೈತರ ಹೊಲಗಳು, ಗೌಳಿಗಳ ಜಾನುವಾರುಗಳು ಮೇಯುವ ದಾರಿಗಳು, ಇವೆಲ್ಲವೂ ಕಾಳಿಯೊಡನೆ ಅವಿನಾಭಾವ ಸಂಬಂಧ ಹೊಂದಿವೆ. ನದಿಯನ್ನು ಕಳೆದುಕೊಂಡರೆ, ವನ್ಯಜೀವಿ, ಕೃಷಿ, ಪ್ರವಾಸೋದ್ಯಮ, ಸಮುದಾಯಗಳು, ಜಲಾಶಯಗಳು, ವಿದ್ಯುತ್ ಯೋಜನೆಗಳು, ಯಾವುದೂ ಉಳಿಯುವುದಿಲ್ಲ.



ನಮ್ಮ ನದಿಗಳನ್ನು ನಾವು ಕುಟುಂಬದ ಸದಸ್ಯರಂತೆ ನೋಡುತ್ತೇವೆಯೇ ಅಥವಾ ಕೇವಲ ಸಂಪನ್ಮೂಲವೆಂದು ಬಳಸುತ್ತೇವೆಯೇ ಎಂಬ ಪ್ರಶ್ನೆಯನ್ನು ಮುಂದಿಡುವ ಕಾಳಿ ಸಾಕ್ಷ್ಯಚಿತ್ರದಲ್ಲಿ, ನದಿಯೇ ಕಥೆಗಾರನ ರೂಪದಲ್ಲಿ ಎದುರಾಗುತ್ತದೆ; ಕರ್ನಾಟಕದ ನಿಜವಾದ ಸಮೃದ್ಧಿ ಇರುವುದು ನೈಸರ್ಗಿಕ ಸಂಪನ್ಮೂಲಗಳನ್ನು ಗೌರವಿಸುವುದರಲ್ಲಿಯೇ ಹೊರತು, ಶೋಷಿಸುವುದರಲ್ಲಿ ಅಲ್ಲ ಎನ್ನುವುದನ್ನು ಮನವರಿಕೆ ಮಾಡಿಸುತ್ತದೆ.

ನದಿ ಹಾಗೂ ಅರಣ್ಯ ರಕ್ಷಣೆಯಲ್ಲಿ ಅರಣ್ಯ ಸಿಬ್ಬಂದಿಯ ಮೌನ ಹೋರಾಟವೂ ಪ್ರಶಂಸನೀಯ. ಅಕ್ರಮ ಬೇಟೆ, ಮರ ಕಡಿತಲೆ, ಒತ್ತುವರಿ ವಿರುದ್ಧ, ಬೆರಳೆಣಿಕೆಯಷ್ಟು ಸಂಪನ್ಮೂಲಗಳೊಂದಿಗೆ ಅವರು ಹಗಲು–ರಾತ್ರಿ ಹೋರಾಡುತ್ತಿದ್ದಾರೆ.

ಪರಿಸರ ಸಂರಕ್ಷಣೆಯ ಸವಾಲುಗಳು ಹೆಚ್ಚುತ್ತಿವೆ. ಘಟ್ಟಗಳನ್ನು ಕತ್ತರಿಸುವ ಹೆದ್ದಾರಿ ಯೋಜನೆಗಳು, ಕಾಳಿಯ ಜೀವಜಲವಾದ ಅರಣ್ಯ ಜಲಾನಯನ ಪ್ರದೇಶಗಳನ್ನು ಹಾಳುಗೆಡವಲು ಹೊರಟಿರುವ ಬೃಹತ್ ವಿದ್ಯುತ್ ಹಾಗೂ ರೈಲ್ವೆ ಯೋಜನೆಗಳು, ನಿಯಂತ್ರಣವಿಲ್ಲದ ಪ್ರವಾಸೋದ್ಯಮ– ಇವೆಲ್ಲವೂ ನದಿಯ ಅಂತರಂಗವನ್ನು ಹಾಳುಮಾಡುತ್ತಿವೆ.

ನದಿಯೊಡನೆ ಬೆಸೆದುಕೊಂಡ ಸಮುದಾಯಗಳ ಸ್ಥಿತಿ ಆತಂಕ ಹುಟ್ಟಿಸುವಂತಿದೆ. ಕುಣಬಿ ರೈತರು ಹಲವು ತಲೆಮಾರುಗಳಿಂದ ಭತ್ತ ಬೆಳೆಯುತ್ತಿದ್ದಾರೆ. ಕಾಳಿ ನದಿ ಅವರ ಕಾವಲುದೇವತೆ. ಆದರೆ, ಅಣೆಕಟ್ಟಿನ ನೀರು ಒಂದೆಡೆ ಹೊಲಗಳನ್ನು ಮುಳುಗಿಸುತ್ತಿದ್ದರೆ, ಮತ್ತೊಂದೆಡೆ ಬತ್ತಿಸುತ್ತಿದೆ. ಪ್ರವಾಸೋದ್ಯಮದ ಹೆಸರಿನಲ್ಲಿ ಜಮೀನು ಎಗ್ಗಿಲ್ಲದೆ ಪರಿವರ್ತನೆ ಆಗುತ್ತಿದೆ. ಕೃಷಿ ಭೂಮಿ ಕುಗ್ಗುತ್ತಿದೆ. ಗೌಳಿ ಸಮುದಾಯದ ಜಾನುವಾರುಗಳು ಮೇಯುವ ಬಯಲುಗಳು ಹೆದ್ದಾರಿಗಳಾಗುತ್ತಿವೆ. ಇವು ಕೇವಲ ಪರಿಸರ ಸಮಸ್ಯೆಗಳಲ್ಲ, ಸಮುದಾಯಗಳ ಸಂಸ್ಕೃತಿ ಮತ್ತು ಗೌರವದ ಕುಸಿತ. ಇದೇ ಸಮಯದಲ್ಲಿ, ಮೀನುಗಳು ತಮ್ಮ ಹಾದಿ ಕಳೆದುಕೊಂಡಿವೆ; ಆನೆ–ಹುಲಿ–ಚಿರತೆಗಳು ಕುಗ್ಗಿದ ಅರಣ್ಯದಲ್ಲಿ ಜನವಸತಿಗಳತ್ತ ನುಗ್ಗುತ್ತಿವೆ.

ನದಿ ಎನ್ನುವುದು ಕೇವಲ ಹರಿಯುವ ನೀರಲ್ಲ. ಅದು ನಮ್ಮ ತೀರ್ಮಾನಗಳ ಪ್ರತಿಬಿಂಬ. ಇದು ದುರಾಸೆ ಮತ್ತು ದೂರದೃಷ್ಟಿಯನ್ನು ಪ್ರತಿಬಿಂಬಿಸುತ್ತದೆಯೇ ಅಥವಾ ಬುದ್ಧಿವಂತಿಕೆ ಮತ್ತು ಸಂಯಮವನ್ನು ಪ್ರತಿಬಿಂಬಿಸುತ್ತದೆಯೇ? ಕಾಳಿ ಸಾಕ್ಷ್ಯಚಿತ್ರ ನದಿಗೆ ಧ್ವನಿ ಕೊಟ್ಟಿತು. ಅಮೋಘವರ್ಷ ಆ ಧ್ವನಿಗೆ ಆತ್ಮ ಕೊಟ್ಟರು. ನೀತಿಗಳು ನದಿಗಳನ್ನು ರಕ್ಷಿಸಬಹುದಾದರೂ, ಅವುಗಳ ಭವಿಷ್ಯಕ್ಕಾಗಿ ಹೋರಾಡಲು ಹಾಗೂ ಅವುಗಳನ್ನು ಪ್ರೀತಿಸಲು ನಮಗೆ ಸ್ಫೂರ್ತಿ ನೀಡುವ ಕಥೆಗಳು ‘ಕಾಳಿ’ಯಂತಹ ಅದ್ಭುತ ಸಾಕ್ಷ್ಯಚಿತ್ರಗಳಾಗಿವೆ.

ಈ ಸಾಕ್ಷ್ಯಚಿತ್ರವನ್ನು ವೀಕ್ಷಿಸುವಾಗ, ಅಥವಾ ಪ್ರಕೃತಿ ಶಿಬಿರದಲ್ಲಿ, ಜಾಗೃತಿ ಕಾರ್ಯಕ್ರಮಗಳಲ್ಲಿ ಮಕ್ಕಳಿಗೆ ತೋರಿಸುವಾಗ ನೋಡುಗರ ಕಣ್ಣಾಲಿಗಳು ನಿಜಕ್ಕೂ ತೇವವಾಗುತ್ತವೆ. ಕಾಳಿ ಕಣಿವೆಯ ಪ್ರೀತಿ, ನದಿಯ ನಿಶ್ವಾಸ, ಅರಣ್ಯದ ಜೀವಂತಿಕೆ, ಅಲ್ಲಿನ ಮುಗ್ಧ ಜನರು, ಇವೆಲ್ಲವನ್ನೂ ಹತ್ತಿರದಿಂದ ನೋಡಿ ಅನುಭವಿಸಿದ ನನ್ನಂತಹ ಸಾವಿರಾರು ಜನರ ಹೃದಯಗಳಲ್ಲಿ ಸಾಕ್ಷ್ಯಚಿತ್ರ ಹಲವು ಭಾವಗಳನ್ನು ಹೊಮ್ಮಿಸುತ್ತದೆ.

ಕರ್ನಾಟಕದಲ್ಲಿ ಪರಿಸರ ನೀತಿ ರೂಪಿಸುವವರಿಗೆ ಒಂದು ಮಾತು: ಕಾಳಿಯನ್ನು ಹೆದ್ದಾರಿ, ಅಣೆಕಟ್ಟು, ಬೃಹತ್ ವಿದ್ಯುತ್ ಯೋಜನೆಗಳು, ನಿಯಂತ್ರಣವಿಲ್ಲದ ಪ್ರವಾಸೋದ್ಯಮದಿಂದ ರಕ್ಷಿಸಿ. ನಾಗರಿಕರಿಗೆ ಒಂದು ಮನವಿ: ಇದು ನಿಮ್ಮ ಆಸ್ತಿಯೂ, ನಿಮ್ಮ ಮಕ್ಕಳ ಆಸ್ತಿಯೂ ಆಗಿದೆ ಎಂದು ನೆನಪಿರಿಸಿಕೊಳ್ಳಿ. ಮತ್ತು ಮುಖ್ಯವಾಗಿ, ಕಾಳಿ ಮತ್ತು ಅರಣ್ಯಗಳಿಲ್ಲದೆ, ಸಮುದಾಯ, ವನ್ಯಜೀವಿ, ಪ್ರವಾಸೋದ್ಯಮ, ಅಣೆಕಟ್ಟು, ವಿದ್ಯುತ್ ಯೋಜನೆಗಳು, ಕೃಷಿ, ಯಾವುದೂ ಉಳಿಯುವುದಿಲ್ಲ.

ಕಾಳಿಯನ್ನು ಕಾಯುವುದು ಆಯ್ಕೆ ಅಲ್ಲ, ಅದು ನಮಗುಳಿದಿರುವ ಏಕೈಕ ದಾರಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಯುಡಿಐಎಸ್‌ಇ + ವರದಿ 2024-25



ಪ್ರೌಢ ಶಿಕ್ಷಣ: ರಾಜ್ಯದಲ್ಲಿ ಶಾಲೆ ತೊರೆಯುತ್ತಿರುವವರು ಹೆಚ್ಚು

ರಾಜ್ಯದ ಶಾಲೆಗಳಲ್ಲಿ ಮೂಲಸೌಕರ್ಯ

74,859	ಒಟ್ಟು ಶಾಲೆಗಳು
73,669	ಗ್ರಂಥಾಲಯ ಇರುವ ಶಾಲೆಗಳು
64,183	ಆಟದ ಮೈದಾನ ಹೊಂದಿರುವ ಶಾಲೆಗಳು
74,798	ಕುಡಿಯುವ ನೀರಿನ ಸೌಲಭ್ಯ ಇರುವ ಶಾಲೆಗಳು
73,729	ಬಾಲಕಿಯರು ಬಳಸಬಹುದಾದ ಶೌಚಾಲಯಗಳಿರುವ ಶಾಲೆಗಳು
70,504	ಬಾಲಕರ ಬಳಕೆಗೆ ಯೋಗ್ಯವಾಗಿರುವ ಶೌಚಾಲಯ ಇರುವ ಶಾಲೆಗಳು
74,142	ವಿದ್ಯುತ್ ಸಂಪರ್ಕ ಹೊಂದಿರುವ ಶಾಲೆಗಳು

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ಮಟ್ಟದಲ್ಲಿ ಶಾಲೆಗಳ ಮಾಹಿತಿಯನ್ನು ಸಂಪೂರ್ಣವಾಗಿ ಬದಲಿಸಿ, ಅದಕ್ಕೆ ವ್ಯವಸ್ಥಿತ ರೂಪ ನೀಡುವ ಪ್ರಯತ್ನವೇ ಏಕೀಕೃತ ಜಿಲ್ಲಾವಾರು ಶೈಕ್ಷಣಿಕ ಮಾಹಿತಿ ವ್ಯವಸ್ಥೆ (ಯುಡಿಐಎಸ್‌ಇ ಪ್ಲಸ್). 2022–23ರಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿ ಮಾಡಿದ ನಂತರ ಇದಕ್ಕೆ ಮತ್ತಷ್ಟು ಬದಲಾವಣೆಗಳನ್ನು ಮಾಡಲಾಗಿದೆ. ಈ ವ್ಯವಸ್ಥೆಯ ಮೂಲಕ ದೇಶದಲ್ಲಿ ಶಾಲೆ ತೊರೆಯುವ ಮಕ್ಕಳ ಸಂಖ್ಯೆಯನ್ನು ಕೂಡ ಪತ್ತೆ ಹಚ್ಚಲಾಗುತ್ತಿದೆ.

ಜಗತ್ತಿನಲ್ಲಿ ಅತಿ ಹೆಚ್ಚು ಶಾಲೆಗಳನ್ನು ಹೊಂದಿರುವ ರಾಷ್ಟ್ರಗಳಲ್ಲಿ ಒಂದಾಗಿರುವ ಭಾರತದಲ್ಲಿ ಒಟ್ಟು 14.71 ಲಕ್ಷ ಶಾಲೆಗಳಿದ್ದು, 1.01 ಕೋಟಿಗೂ ಅಧಿಕ ಶಿಕ್ಷಕರು, 24.69 ಕೋಟಿ ವಿದ್ಯಾರ್ಥಿಗಳು (ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಿಕ್ಷಣ ಮತ್ತು ಪದವಿಪೂರ್ವ ಹಂತಗಳಲ್ಲಿ) ಇದ್ದಾರೆ.

2024–25ರ ಯುಡಿಐಎಸ್‌ಇ ಪ್ಲಸ್ ವರದಿ ಬಿಡುಗಡೆಯಾಗಿದ್ದು, ಅದರಲ್ಲಿ ದೇಶದ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿವಿಧ ಹಂತಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮತ್ತು ಶಾಲೆ ತೊರೆದ ಮಕ್ಕಳ ಸಂಖ್ಯೆ ಹಾಗೂ ಪ್ರಮಾಣವನ್ನು ಉಲ್ಲೇಖಿಸಲಾಗಿದೆ.

> ಕರ್ನಾಟಕದಲ್ಲಿ ಪ್ರೌಢಶಿಕ್ಷಣದ ಹಂತದಲ್ಲಿ ಶಾಲೆ ತೊರೆಯುವ ಮಕ್ಕಳ ಪೈಕಿ ಬಾಲಕರ ಪ್ರಮಾಣ ಶೇ 21.9ರಷ್ಟಿದ್ದರೆ, ಬಾಲಕಿಯರ ಪ್ರಮಾಣ ಶೇ 14.6ರಷ್ಟಿದೆ

ಕರ್ನಾಟಕದಲ್ಲಿ ಪ್ರಾಥಮಿಕ ಹಂತದಲ್ಲಿ (1ರಿಂದ 5ನೇ ತರಗತಿ) ಈ ಪ್ರಮಾಣ ಶೂನ್ಯ; ಮಾಧ್ಯಮಿಕ ಹಂತದಲ್ಲಿ (6ರಿಂದ 8ನೇ ತರಗತಿ) ಶೇ 2.1ರಷ್ಟಿದೆ. ಆದರೆ, ಪ್ರೌಢಶಿಕ್ಷಣದ 9 ಮತ್ತು 10ನೇ ತರಗತಿಗಳಲ್ಲಿ ಶಾಲೆ ತೊರೆದ ಮಕ್ಕಳ ಸಂಖ್ಯೆಯು ರಾಜ್ಯದಲ್ಲಿ ಜಾಸ್ತಿ ಇದೆ (ಶೇ 18.3); ಅರುಣಾಚಲ ಪ್ರದೇಶದಲ್ಲಿಯೂ ಇಷ್ಟೇ ಪ್ರಮಾಣದ ಮಕ್ಕಳು ಶಾಲೆ ತೊರೆದಿದ್ದಾರೆ. ಈ ಹಂತದಲ್ಲಿ ಶಾಲೆ ತೊರೆಯುವವರ ಪ್ರಮಾಣವು ದೇಶದಲ್ಲಿಯೇ ಪಶ್ಚಿಮ ಬಂಗಾಳದಲ್ಲಿ ಅತಿ ಹೆಚ್ಚಾಗಿದೆ (20).

ರಾಷ್ಟ್ರೀಯ ಮಟ್ಟದಲ್ಲಿ ಈ ಪ್ರಮಾಣ ಶೇ 11.5ರಷ್ಟಿದೆ. ದಕ್ಷಿಣದ ರಾಜ್ಯಗಳ ಪೈಕಿ ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಶಾಲೆ ತೊರೆಯುವವರ ಸಂಖ್ಯೆ ಹೆಚ್ಚಾಗಿದ್ದರೆ, ಕೇರಳ ಮತ್ತು ತಮಿಳುನಾಡಿನಲ್ಲಿ ಅಂಥ ಮಕ್ಕಳ ಸಂಖ್ಯೆ ಕಡಿಮೆ ಇದೆ.


ಇಷ್ಟಾದರೂ ಕಳೆದ ವರ್ಷಕ್ಕೆ ಹೋಲಿಸಿದರೆ, ರಾಜ್ಯದಲ್ಲಿ ಶಾಲೆ ತೊರೆಯುವವರ ಪ್ರಮಾಣದಲ್ಲಿ ಅಲ್ಪ ಮಟ್ಟದ ಇಳಿಕೆಯಾಗಿದೆ. 2023–24ನೇ ಸಾಲಿನ ಯುಡಿಐಎಸ್‌ಇ ಪ್ಲಸ್ ವರದಿಯಲ್ಲಿ ಪ್ರೌಢಶಿಕ್ಷಣ ಹಂತದಲ್ಲಿ ಶಾಲೆ ತೊರೆಯುವ ಮಕ್ಕಳ ಪ್ರಮಾಣ ರಾಷ್ಟ್ರೀಯ ಮಟ್ಟದಲ್ಲಿ ಶೇ 14.1ರಷ್ಟು ಇದ್ದರೆ, ರಾಜ್ಯದಲ್ಲಿ ಶೇ 22.1ರಷ್ಟಿತ್ತು. ಬಿಹಾರದಲ್ಲಿ ಅತಿ ಹೆಚ್ಚು (ಶೇ 25.6) ಇದ್ದರೆ, ನಂತರದ ಸ್ಥಾನದಲ್ಲಿದ್ದ ಅಸ್ಸಾಂನಲ್ಲಿ ಶೇ 25.1 ಮತ್ತು ಅರುಣಾಚಲ ಪ್ರದೇಶದಲ್ಲಿ ಶೇ 19.3ರಷ್ಟು ಇತ್ತು.

2030ರ ವೇಳೆಗೆ ಎಲ್ಲ ಹಂತಗಳಲ್ಲಿಯೂ ಶಾಲೆ ತೊರೆಯುವವರ ಪ್ರಮಾಣವನ್ನು ಕಡಿಮೆ ಮಾಡುವುದು ಮತ್ತು ಪ್ರತಿಯೊಬ್ಬರಿಗೂ ಶಿಕ್ಷಣ ಲಭ್ಯವಾಗುವಂತೆ ಮಾಡುವುದು ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ (ಎಸ್‌ಡಿಜಿ) ಒಂದಾಗಿದೆ. ಎನ್‌ಇಪಿಯಲ್ಲಿಯೂ ಇದೇ ಆಶಯವನ್ನು ಪ್ರತಿಪಾದಿಸಲಾಗಿದೆ. ಒಂದನೇ ತರಗತಿಗೆ ಪ್ರವೇಶ ಪಡೆದ ಮಕ್ಕಳ ಪೈಕಿ ಎಷ್ಟು ಮಂದಿ ಮುಂದಿನ ಹಂತಗಳಿಗೆ ಸಾಗುತ್ತಿದ್ದಾರೆ ಎನ್ನುವುದರ ಆಧಾರದಲ್ಲಿ ಶಾಲೆ ತೊರೆಯುತ್ತಿರುವವರ ಪ್ರಮಾಣವನ್ನು ಪತ್ತೆ ಮಾಡಲಾಗುತ್ತಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಏಕೀಕೃತ ಜಿಲ್ಲಾವಾರು ಶೈಕ್ಷಣಿಕ ಮಾಹಿತಿ ವ್ಯವಸ್ಥೆಯ 2024–25ರ ವರದಿಯ ಪ್ರಕಾರ, ಕರ್ನಾಟಕದಲ್ಲಿ 9 ಮತ್ತು 10ನೇ ತರಗತಿಗಳಲ್ಲಿ ಶಾಲೆ ತೊರೆಯುತ್ತಿರುವವರ ಪ್ರಮಾಣವು ಆತಂಕ ಹುಟ್ಟಿಸುವಂತಿದ್ದು, ರಾಜ್ಯವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ಈ ಹಂತದಲ್ಲಿ ಶಾಲೆ ತೊರೆಯುವವರ ಸಂಖ್ಯೆ ಹೆಚ್ಚಾಗಿರಲು ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದಲ್ಲಿ ಶಿಕ್ಷಣದ ಗುಣಮಟ್ಟ ಕುಸಿದಿರುವುದು, ಬಾಲ ಕಾರ್ಮಿಕರು ಹೆಚ್ಚಾಗಿರುವುದು ಮುಂತಾದ ಕಾರಣಗಳಿವೆ ಎಂದು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ



ಪೌಢ ಶಿಕ್ಷಣ: ಶಾಲೆ ತೊರೆಯುತ್ತಿರುವ ಮಕ್ಕಳ ಪ್ರಮಾಣ (%)



ದತ್ತಾಂಶದ ಬಗ್ಗೆ ಆಕ್ಷೇಪ

2023–24ರ ಯುಡಿಐಎಸ್‌ಇ ಪ್ಲಸ್ ವರದಿಗೆ ಕರ್ನಾಟಕದ ಕೆಲವು ಶಿಕ್ಷಣ ತಜ್ಞರು ಆಕ್ಷೇಪ ವ್ಯಕ್ತಪಡಿಸಿದ್ದರು. ವಿದ್ಯಾರ್ಥಿಗಳ ಪ್ರವೇಶ ಪ್ರಮಾಣದಲ್ಲಿ ದಿಢೀರ್ ಕುಸಿತವಾಗಿರುವುದು ಮತ್ತು ಶಾಲೆ ತೊರೆದವರ ಪ್ರಮಾಣದಲ್ಲಿ ಹೆಚ್ಚಳವಾಗಿರುವುದು ದತ್ತಾಂಶದ ಬಗ್ಗೆಯೇ ಅನುಮಾನ ಮೂಡಿಸುತ್ತಿದೆ; ರಾಜ್ಯದ ವಿದ್ಯಾರ್ಥಿ ಸಾಧನೆ ನಿಗಾ ವ್ಯವಸ್ಥೆ (ಎಸ್‌ಎಟಿಎಸ್) ಅತ್ಯಂತ ನಿಖರವಾಗಿರುತ್ತದೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರದ ಶಿಕ್ಷಣ ಇಲಾಖೆಯು ಪರಸ್ಪರ ಚರ್ಚೆ ನಡೆಸಿ, ಈ ವಿಚಾರದಲ್ಲಿ ಸರಿಯಾದ ಮಾಹಿತಿ, ದತ್ತಾಂಶ ನೀಡಬೇಕು ಎಂದು ಒತ್ತಾಯಿಸಿದ್ದರು. ಈ ಬಾರಿಯೂ ಯುಡಿಐಎಸ್‌ಇ ಪ್ಲಸ್ ದತ್ತಾಂಶದ ಬಗ್ಗೆ ಇಂತಹದ್ದೇ ಆಕ್ಷೇಪ ಕೇಳಿಬಂದಿದೆ.

ಶಾಲೆ ತೊರೆಯುತ್ತಿರುವವರು: ರಾಜ್ಯ ಮತ್ತು ದೇಶದಲ್ಲೆಷ್ಟು? (%)

	ಕರ್ನಾಟಕ	ಭಾರತ
ಪ್ರಾಥಮಿಕ ಶಿಕ್ಷಣ	0	0.3
ಹಿರಿಯ ಪ್ರಾಥಮಿಕ ಶಿಕ್ಷಣ	2.10	3.5
ಪ್ರೌಢ ಶಿಕ್ಷಣ	18.30	11.5

ಶಾಲೆ ತೊರೆಯಲು ಕಾರಣ

ಮಕ್ಕಳು ಶಾಲೆ ತೊರೆಯುತ್ತಿರುವ ಪ್ರಮಾಣದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಶಿಕ್ಷಣ ತಜ್ಞರು, ಹಲವು ಕಾರಣಗಳನ್ನು ಪಟ್ಟ ಮಾಡಿದ್ದಾರೆ.


- ಮಕ್ಕಳು ಪ್ರಾಥಮಿಕ ಹಂತದಲ್ಲಿಯೇ ಕಲಿಕೆಯಲ್ಲಿ ಹಿಂದುಳಿಯುತ್ತಿರುವುದು
- 7, 8ನೇ ತರಗತಿಗಳ ನಂತರ ಪಠ್ಯಗಳು ಹೆಚ್ಚಾಗುವುದು ಮತ್ತು ಕಠಿಣವಾಗುವುದು
- ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಿಕ್ಷಣದ ಶಾಲೆಗಳು ಬೇರೆ ಬೇರೆ ಆಗಿದ್ದರೆ, ಹಲವು ಕಾರಣಗಳಿಂದ ಮುಂದಿನ ಹಂತಕ್ಕೆ ಪ್ರವೇಶ ಪಡೆಯದೇ ಇರುವುದು
- ಬಾಲಕಾರ್ಮಿಕ ಕಾಯ್ದೆ ಪ್ರಕಾರ, 14 ವರ್ಷದ ಒಳಗಿನ ಮಕ್ಕಳು ಮಾತ್ರವೇ ಬಾಲಕಾರ್ಮಿಕರು. ಕೆಲವು ಬಡ ಕುಟುಂಬಗಳು 14ರ ನಂತರದ ಮಕ್ಕಳನ್ನು ದುಡಿಯಲು ಕಳುಹಿಸುತ್ತಿವೆ

ವಿದ್ಯಾರ್ಥಿಗಳು ಶಿಕ್ಷಕರ ಅನುಪಾತ
(ಪಿಟಿಆರ್) (ಪ್ರತಿಯೊಬ್ಬ ಶಿಕ್ಷಕರಿಗೆ)

	ಕರ್ನಾಟಕ	ಭಾರತ
ಪ್ರಾಥಮಿಕ	21	20
ಹಿರಿಯ ಪ್ರಾಥಮಿಕ	17	17
ಪ್ರೌಢ	18	15
ಪದವಿಪೂರ್ವ	28	23

ರಾಷ್ಟ್ರೀಯ

ಬಡತನ: ₹50 ಸಾವಿರಕ್ಕೆ ಮಗು ಮಾರಾಟ



ಮೇದಿನಿನಗರ (ಜಾರ್ಖಂಡ್, ಪಿಟಿಐ): ಬಡತನದ ಕಾರಣದಿಂದಾಗಿ ಕೇವಲ ₹50,000ಕ್ಕೆ ಮಾರಾಟ ಮಾಡಲಾಗಿದ್ದ ಮಗುವನ್ನು ರಕ್ಷಿಸಿರುವುದಾಗಿ ಜಾರ್ಖಂಡ್ ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.

ಮುಖ್ಯಮಂತ್ರಿ ಹೇಮಂತ್ ಸೊರೇನ್ ಸೂಚನೆ ಮೇರೆಗೆ ಕಾರ್ಯತತ್ಪರರಾದ ಪೊಲೀಸರು ಮಗುವನ್ನು ರಕ್ಷಿಸಿದರು.

ಲೆಸ್ಲಿಗಂಜ್‌ನ ಲೋಟ್ವಾ ಗ್ರಾಮದ ದಂಪತಿ ಒಂದು ತಿಂಗಳ ಮಗುವನ್ನು ಮಾರಾಟ ಮಾಡಿದ್ದಾಗಿ ತಿಳಿದುಬಂತು. ಪಲಾಮು ಜಿಲ್ಲಾಡಳಿತದ ಸಿಬ್ಬಂದಿ ತಕ್ಷಣವೇ ಆ ಕುಟುಂಬಕ್ಕೆ 20 ಕೆ.ಜಿ. ಆಹಾರಧಾನ್ಯ ವಿತರಿಸಿದರು. ವಿವಿಧ ಯೋಜನೆಗಳ ಮೂಲಕ ಅವರಿಗೆ ಸರ್ಕಾರದ ನೆರವು ದಕ್ಕಿಸಿಕೊಡುವ ಪ್ರಯತ್ನಗಳೂ ನಡೆದಿವೆ ಎಂದು ಅಧಿಕಾರಿ ಸುನಿಲ್ ಕುಮಾರ್ ಸಿಂಗ್ ಹೇಳಿದರು.

‘ಪತ್ನಿ ಪಿಂಕಿ ದೇವಿ ಮಗುವನ್ನು ಹಡೆದ ನಂತರ ಅನಾರೋಗ್ಯಕ್ಕೆ ಒಳಗಾದಳು. ಅವಳ ಚಿಕಿತ್ಸೆಗೆ ಹಣವಿರಲಿಲ್ಲ. ಮಳೆಯ ಕಾರಣದಿಂದಾಗಿ ಕೂಲಿ ಕೆಲಸವೂ ಸಿಗುತ್ತಿಲ್ಲ. ಕಟ್ಟಿಕೊಂಡಿದ್ದ ಗುಡಿಸಲೂ ಮಳೆಯಿಂದ ನಾಶವಾಗಿದ್ದು, ಇನ್ನೂ ನಾಲ್ಕು ಮಕ್ಕಳ ಸಂಸಾರ ತೂಗಿಸುವುದೇ ಕಷ್ಟವಾಗಿತ್ತು. ಹೀಗಾಗಿ ದಲ್ಲಾಳಿಯೊಬ್ಬರಿಗೆ ಮಗುವನ್ನು ಮಾರಿಬಿಟ್ಟೆವು’ ಎಂದು ರಾಮಚಂದ್ರ ರಾಮ್ ಸುದ್ದಿಗಾರರಿಗೆ ಹೇಳಿದರು.

ರಾಮ್ ಅವರು ಉತ್ತರ ಪ್ರದೇಶದ ಮಿರ್ಜಾಪುರದವರು. ಅವರ ಪತ್ನಿ ಸ್ಥಳೀಯರು. ತಮ್ಮ ತಂದೆ ನೀಡಿದ್ದ ತುಂಡು ಭೂಮಿಯಲ್ಲೇ ಆಕೆ ಮತ್ತು ರಾಮ್ ಗುಡಿಸಲು ನಿರ್ಮಿಸಿಕೊಂಡಿದ್ದರು. ಕೂಲಿ ಕೆಲಸ ಸಿಗದೇ ಇದ್ದಾಗ ಭಿಕ್ಷೆ ಬೇಡಿ ಬದುಕು ಸಾಗಿಸುತ್ತಿದ್ದುದಾಗಿ ಅವರು ಹೇಳಿಕೊಂಡರು.

ರಾಮ್ ಅವರ ಬಳಿ ಸರ್ಕಾರದ ಯೋಜನೆಗಳ ಲಾಭ ಪಡೆದುಕೊಳ್ಳಲು ಆಧಾರ್ ಕಾರ್ಡ್ ಆಗಲೀ, ಪಡಿತರ ಚೀಟಿಯಾಗಲೀ ಇಲ್ಲ. ಮಗುವನ್ನು ರಕ್ಷಿಸಿರುವುದಾಗಿ ಲೆಸ್ಲಿಗಂಜ್ ಪೊಲೀಸ್ ಠಾಣೆಯ ಅಧಿಕಾರಿ ಉತ್ತಮ್ ಕುಮಾರ್ ರಾಯ್ ತಿಳಿಸಿದರು.

ಸ್ಥಳೀಯ ಮಾಧ್ಯಮದಲ್ಲಿ ಪ್ರಕಟವಾಗಿದ್ದ ವರದಿಯನ್ನು ಓದಿ, ಮುಖ್ಯಮಂತ್ರಿ ಸೊರೇನ್ ಅವರು ಮಗುವನ್ನು ರಕ್ಷಿಸುವಂತೆ ಸೂಚನೆ ನೀಡಿದ್ದಾಗಿ ಅಧಿಕಾರಿಗಳು ಹೇಳಿದರು.

ಜಮ್ಮು: ಮುಂದುವರಿದ ಮಳೆ– ಸಂಚಾರ ಅಸ್ತವ್ಯಸ್ತ



ಜಮ್ಮು (ಪಿಟಿಐ): ಭಾರಿ ಮಳೆಯಿಂದ ಸಂಭವಿಸಿದ ಭೂಕುಸಿತದಿಂದ ಜಮ್ಮು–ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರವನ್ನು ಸತತ ಆರನೇ ದಿನವಾದ ಭಾನುವಾರ ಸಹ ಸ್ಥಗಿತಗೊಳಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದರು.

ರಸ್ತೆ ದುರಸ್ತಿಯಾಗುವವರೆಗೆ ಪರ್ಯಾಯ ಮಾರ್ಗದಲ್ಲಿ ಸಂಚರಿಸುವಂತೆ ಸಲಹೆ ನೀಡಲಾಗಿದೆ ಎಂದರು.

ಮಾತಾ ವೈಷ್ಣೋದೇವಿ ದೇಗುಲ ಯಾತ್ರೆಯನ್ನು ಸತತ 13 ದಿನಗಳಿಂದ ಸ್ಥಗಿತಗೊಳಿಸಲಾಗಿದೆ. ಈ ಮಧ್ಯೆ ಗಡಿ ರಸ್ತೆಗಳ ಸಂಸ್ಥೆಯು (ಬಿಆರ್‌ಒ) ಬಸೋಹಲಿ–ಬನಿ ರಸ್ತೆಯನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸಿದೆ ಎಂದು ಹೇಳಿದರು.

ರಸ್ತೆಗೆ ಅಡ್ಡಲಾಗಿ ಬಿದ್ದಿರುವ ಬಂಡೆಕಲ್ಲುಗಳ ತೆರವಿಗಾಗಿ ಸ್ಫೋಟಕಗಳನ್ನು ಬಳಸಲಾಗುತ್ತಿದೆ. ಮಳೆಯ ನಡುವೆಯೂ ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ರಂಬನ್ ವಲಯದ ಎನ್‌ಎಚ್‌ಎಐ ಯೋಜನಾ ವ್ಯವಸ್ಥಾಪಕ ಶುಭಮ್ ತಿಳಿಸಿದರು.

ಯಮುನಾ ನದಿ ನೀರಿನ ಮಟ್ಟ ಇಳಿಕೆ: ನವದೆಹಲಿಯ ಹಳೆಯ ರೈಲ್ವೆಸೇತುವೆ ಸಮೀಪ ಯಮುನಾ ನದಿಯ ನೀರಿನ ಮಟ್ಟ ಭಾನುವಾರ 205.56 ಮೀಟರ್‌ಗೆ ತಗ್ಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ನಗರದಲ್ಲಿ ನದಿಯ ನೀರು 204.50 ಮೀಟರ್ ತಲುಪಿದಾಗ ಎಚ್ಚರಿಕೆ ನೀಡಲಾಗುತ್ತಿದೆ. 205.33 ಮೀಟರ್ ಅಪಾಯಕಾರಿ ಮಟ್ಟವಾಗಿದ್ದು, 206 ಮೀಟರ್‌ಗೆ ಏರಿದ ನಂತರ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗುತ್ತದೆ.

ತಗ್ಗು ಪ್ರದೇಶಗಳ ಜನರಿಗಾಗಿ ದೆಹಲಿ-ಮೀರತ್ ಎಕ್ಸ್‌ಪ್ರೆಸ್ ವೇ ಮತ್ತು ಮಯೂರ್ ವಿಹಾರ್ ಪ್ರದೇಶದಲ್ಲಿ ತಾತ್ಕಾಲಿಕ ಶಿಬಿರಗಳನ್ನು ನಿರ್ಮಿಸಲಾಗಿದೆ.

ಹಿಮಾಚಲ: ₹4,079 ಕೋಟಿ ನಷ್ಟ

ಶಿಮ್ಲಾ ವರದಿ: ಹಿಮಾಚಲ ಪ್ರದೇಶದಲ್ಲಿ ಜೂನ್ 20ರಿಂದ ಸೆಪ್ಟೆಂಬರ್ 7ರವರೆಗೆ ಸಂಭವಿಸಿದ ಮೇಘಸ್ಫೋಟ, ಹಠಾತ್ ಪ್ರವಾಹ ಮತ್ತು ಭೂಕುಸಿತದ ಅವಘಡಗಳಿಂದ ₹4,079 ಕೋಟಿ ನಷ್ಟ ಸಂಭವಿಸಿದೆ ಎಂದು ಅಧಿಕಾರಿಗಳು ಭಾನುವಾರ ಅಂದಾಜಿಸಿದ್ದಾರೆ. 366 ಜನರು ಮೃತಪಟ್ಟಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಗಣಪತಿ ವಿಗ್ರಹಕ್ಕೆ ಪೂಜೆ ಮಾಡುತ್ತಿರುವ ಅರ್ಚಕರೊಬ್ಬರು ಹೃದಯಾಘಾತಕ್ಕೆ ಒಳಗಾಗಿ ಕುಸಿದು ಬೀಳುವುದು, ನಂತರ ಗಣೇಶನ ವಿಗ್ರಹದಿಂದ ಧಾರ್ಮಿಕ ಧ್ವಜವೊಂದು ಅವರ ಮೇಲೆ ಬಿದ್ದಾಗ ಪವಾಡ ಸದೃಶವಾಗಿ ಅವರಿಗೆ ಪ್ರಜ್ಞೆ ಪುನಃ ಬಂದು, ಅವರು ಗಣೇಶನಿಗೆ ಪ್ರಾರ್ಥನೆ ಸಲ್ಲಿಸುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಹಲವರು ಇದನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು.

ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ರಿವರ್ಸ್ ಇಮೇಜ್ ಮೂಲಕ ಹುಡುಕಿದಾಗ, 3RD EYE ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ ಈ ವಿಡಿಯೊ ಪೋಸ್ಟ್ ಆಗಿರುವುದು ಕಂಡು ಬಂತು. ಈ ವರ್ಷದ ಜುಲೈ 11ರಂದು ವಿಡಿಯೊವನ್ನು ಅಪ್‌ಲೋಡ್ ಮಾಡಲಾಗಿತ್ತು. ಆ ಚಾನೆಲ್ ಅನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಅದರಲ್ಲಿ ಪ್ರಕಟಿಸಲಾಗಿದ್ದ ಡಿಸ್‌ಕ್ಲೇಮರ್‌ನಲ್ಲಿ ಇದು ಯೋಜಿತವಾಗಿ ಚಿತ್ರೀಕರಿಸಲಾಗಿರುವ ಕಾಲ್ಪನಿಕ ವಿಡಿಯೊ ಎಂಬುದು ತಿಳಿದು ಬಂತು. ಜನರಲ್ಲಿ ಜಾಗೃತಿ ಮೂಡಿಸುವ, ಮನರಂಜನೆ ನೀಡುವ, ಶಿಕ್ಷಣದ ಉದ್ದೇಶದಿಂದ ಈ ವಿಡಿಯೊ ಮಾಡಲಾಗಿದೆ ಎಂದು ಅದರಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಆ ಚಾನೆಲ್‌ನಲ್ಲಿ ಪೋಸ್ಟ್ ಮಾಡಲಾದ ಇತರ ವಿಡಿಯೊಗಳನ್ನು ಪರಿಶೀಲಿಸಿದಾಗಲೂ ಆ ಚಾನೆಲ್‌ನಲ್ಲಿ ಪೂರ್ವಯೋಜಿತವಾಗಿ ಚಿತ್ರೀಕರಿಸಿದ ವಿಡಿಯೊಗಳನ್ನು ಪೋಸ್ಟ್ ಮಾಡುತ್ತಿರುವುದು ಕಂಡು ಬಂತು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಹೆತ್ತವರು, ಮಕ್ಕಳು ಹೊರೆಯಲ್ಲ

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ಅದೊಂದು ಪುಟ್ಟ ಸಂಸಾರ. ತಂದೆ ತಾಯಿ ಇಬ್ಬರೂ ಹೊರಗೆ ಹೋಗಿ ದುಡಿಯಬೇಕು. ತಮ್ಮ ದೇಹ ಮತ್ತು ಆತ್ಮಗಳ ಮಿಲನದ ಫಲಶ್ರುತಿಗಳಂತಿರುವ ಮಗ, ಮಗಳು. ಅಣ್ಣನಿಗೆ ತಂಗಿ, ತಂಗಿಗೆ ಅಣ್ಣನ ಹೊರತು ಬೇರೆ ಪ್ರಪಂಚವಿಲ್ಲ. ದುಡಿಮೆಯಿಂದ ಸಂಜೆ ಮನೆಗೆ ಹಿಂತಿರುಗುವವರೆಗೆ ಕಂದಮ್ಮಗಳು ಹೇಗಿರುತ್ತವೆಯೋ, ಏನು ತಿನ್ನುತ್ತವೆಯೋ ಎಷ್ಟು ಅಳುತ್ತವೆಯೋ ಅನ್ನುವ ಆತಂಕ ಹೆತ್ತೊಡಲಿಗೆ. ಕೆಲಸಕ್ಕೆ ಹೋಗುವಾಗಿನ ಆತುರಕ್ಕಿಂತ ಕೆಲಸ ಮುಗಿಸಿ ಬರುವಾಗಿನ ಅವಸರಕ್ಕೆ ವೇಗ ಆವೇಗ ಹೆಚ್ಚು. ಮಕ್ಕಳ ಕಣ್ಣಿಗೆ ಕಣ್ಣಿಟ್ಟು ತಬ್ಬಿ ಮುದ್ದಾಡಿದರೆ ಅಷ್ಟೇ ಸಮಾಧಾನ.


ಅಂಕುಶವಿಟ್ಟಷ್ಟೂ ಹರೆಯಕ್ಕೆ ತಿಮಿರು ಜಾಸ್ತಿ. ಅಪ್ಪ ಅವ್ವರ ಮಾತಿನ ಮಾಧುರ್ಯ ಕಳೆದು ಕಹಿಯಾಗುವ ಹೊತ್ತು. ಮೂರು ಹೊತ್ತೂ ಮೊಬೈಲು, ಹೊರಗಿನ ಚಪಲ. ಅಮ್ಮನ ಅಡಿಗೆಗೆ ಮೊದಲಿನ ರುಚಿಯಿಲ್ಲ. ಅಪ್ಪನ ಹೆಗಲು ವಿಸ್ತಾರವಾಗುತ್ತಲೇ ಇದೆ.

ಓದು ಬರಿ, ಓದು ಬರಿ. ದಿನದಿನವೂ ಇದೇ ಗೋಳು. ಆಟವಿಲ್ಲ ನೋಟವಿಲ್ಲ. ಅಕ್ಕಪಕ್ಕದವರೆಲ್ಲ ಹಾಗೆ. ನಮ್ಮ ಮಕ್ಕಳೇಕೆ ಹೀಗೆ? ಅನವರತವೂ ಹೋಲಿಕೆಯ ಕಿಚ್ಚು. ತಮ್ಮಂತಾಗಬಾರದೆಂದೇ ಹಪಹಪಿ. ನಮ್ಮದೇ ನಿರೀಕ್ಷೆಗಳಿವೆ, ದೇಹ ಮತ್ತು ಮನಸ್ಸು ಅಪ್ಪ ಅವ್ವರ ಹೊರತಾಗಿ ಬೇರೇನನ್ನೋ ಬಯಸುತ್ತವೆ. ಇದು ಅವರಿಗೆ ಯಾಕೆ ಅರ್ಥವಾಗುವುದಿಲ್ಲ? ಮೊಬೈಲು ಹಿಡಿದರೆ ತಪ್ಪು, ಕದ ಮುಚ್ಚಿಕೊಂಡರೆ ಕಷ್ಟ. ಸ್ವಿಚ್ ಆನ್ ಮಾಡಿದರೆ ಓಡುವ, ಸ್ವಿಚ್ ಆಫ್ ಮಾಡಿದರೆ ಎಲ್ಲಿರುತ್ತವೆಯೋ ಅಲ್ಲಿಯೇ ನಿಂತು ಬಿಡುವ ಭಾವಶೂನ್ಯ ಮಷಿನ್‌ಗಳೇ ನಾವು? ಇದು ಮಕ್ಕಳ ಬೆನ್ನು ಬಿಡದ ಬವಣೆ.

ಯುವಜನ ನೈತಿಕ ನಿಯಂತ್ರಣವಿಲ್ಲದೆ ದಾರಿ ತಪ್ಪುತ್ತಿದ್ದಾರೆ ಎನ್ನುವುದು ದೊಡ್ಡವರ ಸಾಮಾನ್ಯ ಅಳಲು. ಈ ಅಳಲಿನಲ್ಲಿ ಹಿರಿಯರ ಪಾಲೂ ಇದೆ. ತಮ್ಮ ಕಷ್ಟನಿಷ್ಠುರಗಳನ್ನು ಧಾರಾವಾಹಿಯಂತೆ ಪ್ರಲಾಪಿಸುವ ತಂದೆತಾಯಿಯರು ಮಕ್ಕಳ ಮೇಲೆ ಅಸಾಮಾನ್ಯ ನಿರೀಕ್ಷೆಗಳನ್ನು ಇಟ್ಟುಕೊಳ್ಳುತ್ತಾರೆ. ಮಕ್ಕಳ ಆಸಕ್ತಿ, ಕೌಶಲಗಳನ್ನು ಅರಿಯುತ್ತಾ ಅವರ ಪ್ರತಿಭಾವಿಲಾಸಕ್ಕೆ ಪ್ರೇರಣೆಯಾಗಬೇಕಾದ ತಂದೆತಾಯಿಯರು ಅನಗತ್ಯ ಒತ್ತಡಗಳನ್ನು ಅವರ ಮೈ ಮನಸ್ಸಿಗೆ ತುಂಬುತ್ತಾರೆ. ಅಪರೂಪಕ್ಕಾದರೂ ಮಕ್ಕಳೊಂದಿಗೆ ಮಕ್ಕಳಾಗಿ ನಲಿದು ಅಕ್ಷರಲೋಕದ ಹೊರಗಿನ ಗಿಡಮರ, ಬೆಟ್ಟ ಗುಡ್ಡ, ನದಿ ಸಾಗರ, ತಾರೆ ನೀಹಾರಿಕೆಗಳ ಉಲ್ಲಾಸದಲ್ಲಿ ಅವರನ್ನು ನಾದಬೇಕಲ್ಲವೇ? ಎಲ್ಲಕ್ಕಿಂತ ಹೆಚ್ಚಾಗಿ ‘ನಿಮ್ಮಿಂದ ಇದು ಸಾಧ್ಯ, ಫಲಿತಾಂಶ ಏನೇ ಬರಲಿ, ನಿಮ್ಮ ಬೆನ್ನಿಗೆ ನಾವಿದ್ದೇವೆ’ ಅನ್ನುವ ಭರವಸೆಯ ಬಲ ತುಂಬಿ ನಂಬಿ ನಡೆದರೆ ಅವರು ಅಸಾಧ್ಯಗಳನ್ನೇ ಸಾಧಿಸಿಬಿಡಬಲ್ಲರು.


ಹರೆಯವೆಂದರೆ ವಿವೇಕಶೂನ್ಯ ಉತ್ಸಾಹದ ಚಿಲುಮೆ. ಅದು ಮೂಗುದಾಣವಿಲ್ಲದ ತುಂಡುಗೂಳಿಯಂತೆ. ಅಪ್ಪ ಅವ್ವರನ್ನು ಅದು ತಿವಿಯದೇ ಬಿಡುವುದಿಲ್ಲ. ಆದರೆ ಅವರನ್ನು ತಮ್ಮ ಸ್ನೇಹವಲಯದ ಧ್ರುವ ತಾರೆಗಳಂತೆ ಎದೆಯಲ್ಲಿಟ್ಟುಕೊಂಡರೆ ತಾಪ ತಣಿಯುತ್ತದೆ. ಮನೆಯಿಂದ ಹೊರಗೆ ಹೊರಡುವ ಮೊದಲು ಇಂಥ ಕಡೆ ಹೊರಟಿದ್ದೇನೆ, ಇಂಥವರ ಜೊತೆ ಇರುತ್ತೇನೆ ಇಷ್ಟು ಹೊತ್ತಿಗೆ ಬರುತ್ತೇನೆ ಎಂದು ಮುಕ್ತ ಮನಸ್ಸಿನಿಂದ ಹೇಳಿದರೆ ಹಡೆದವರ ಕಾಳಜಿಪೂರ್ಣ ಆತಂಕ ಕಡಿಮೆಯಾಗಿ ನಂಬಿಕೆ ಹುಟ್ಟುತ್ತದೆ. ಅವರಿಂದ ಏನನ್ನೋ ಮುಚ್ಚಿಟ್ಟರೆ ಮಕ್ಕಳು ತಮ್ಮನ್ನು ವಂಚಿಸುತ್ತಿದ್ದಾರೆ ಎಂಬ ನೋವು ಅವರನ್ನು ಕಾಡುತ್ತದೆ. ಅಪ್ಪ ಅಮ್ಮ ಯಾವತ್ತೂ ಮಕ್ಕಳ ಶತ್ರುಗಳಾಗುವುದಿಲ್ಲ. ಅವರದು ಕಪಟವಿಲ್ಲದ ಕರುಳು. ಸಾವಿನ ನಂತರವೂ ಮಕ್ಕಳೆದೆಯ ಉಸಿರಾಗಿ ಅವರ ಪ್ರಾಣ ಜೀವಂತವಾಗಿರುತ್ತದೆ. ಸರಿದಾರಿಯಲ್ಲಿ ನಡೆಯುವ ಮಕ್ಕಳನ್ನು ಹೆಗಲುತುಂಬ ಹೊತ್ತು ಮೆರೆಯುತ್ತವೆ, ಜಗತುಂಬಿ ಹಾಡಿ ಹರಸುತ್ತವೆ ಆ ಮಾಗಿದ ಮನಸುಗಳು. ಅಪ್ಪ ಅಮ್ಮ ಮಡಿಲ ಕುಡಿಗಳ ಪಾಲಿನ ವರಗಳು. ನಿತ್ಯಜತನದಿಂದ ಅವುಗಳನ್ನು ಕಾಪಿಟ್ಟುಕೊಳ್ಳುವ ವಿವೇಕಯುತ ಧನ್ಯತೆಯಿದ್ದರೆ ಬದುಕು ಅರ್ಥಪೂರ್ಣ. ಹೆತ್ತವರು ಮತ್ತು ಮಕ್ಕಳು ಪರಸ್ಪರ ಆಸರೆಯೇ ಹೊರತು ಹೊರೆಯಲ್ಲ.

ಗುಂಡಣ್ಣ



ಪದಬಂಧ 6158

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಪ್ರೇಮಿಗಳ ಅಗಲಿಕೆಯ ನೋವು (3)
3.ಕ್ರೌರ್ಯವನ್ನು ಹೀಗೂ ಹೇಳುತ್ತಾರೆ (5)
6.ರಸ ಒಸರುತ್ತಿರುವ ಜಿಹ್ವೆ (3)
8.ಹತ್ತನೆಯ ಒಂದು ಭಾಗವಿದು (4)
10.ಚಾರನದ್ದು ಒಳ್ಳೆಯ ನಡತೆ (4)
15.ಇಲಿ ಇಲ್ಲಿ ಕಾಣುತ್ತಿದೆ (3)
17.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
18.ಮನಸ್ಸಿಗೆ ಬಂದಂತೆ ನಡೆಯುವುದು (3)

ಮೇಲಿಂದ ಕೆಳಕ್ಕೆ

1.ಹೆಂಡತಿಯನ್ನು ಕಳೆದು ಕೊಂಡವನು (3)
2.ವನದ ಕೊನೆಗೆ ಮಾಡಿದ ಯಜ್ಞ (3)
4.ನಿಘಂಟು ಇಲ್ಲಿದೆ (4)
5.ಹುಟ್ಟುವಳಿ ಇಲ್ಲಿ ತಿರುವುಮುರುವು ಆಗಿದೆ (3)
7.ನಡುವೆ ಮಂಜನಿದ್ದರೆ ಇದು ಸೂಕ್ತ! (4)
8.ಮೈಮೇಲೆ ಗುಳ್ಳೆಗಳು ಏಳುವ ಒಂದು ಅಂಟುರೋಗ (3)
9.ನೂರು ವರ್ಷಗಳ ಕಾಲ ಬದುಕಿರುವವನು (4)
11.ಪಿಸುಣನನ್ನು ಹೀಗೂ ಕರೆವರು (4)
14.ವಾಸಕ್ಕೆ ಈ ನೆಲೆ (3)
15.ಮೂಗಿನಲ್ಲಿ ಧರಿಸುವ ಆಭರಣ (3)
16.ಎರವಲು ಪಡೆದುಕೊಂಡವ ತೋರಿಸಿರುವ ಸಮುದ್ರ (3)

6157ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನವಿಲು 3.ಕಲ್ಲೋಲ 5.ತಿಗರಿ 6.ಕಿಟಕಿ 7.ಪಾಶ 8.ಹಾವೇರಿ 10.ವಿಳಾಸ 11.ವಾಗ್ದೇವಿ 13.ನಮಾಜು 15.ಪ್ರತಿ 16.ಜನಕ 17.ಚಾಣಕ್ಯ 18.ಚಮತ್ಕಾರ 19.ಅಧರ

ಮೇಲಿಂದ ಕೆಳಕ್ಕೆ:
2.ವಿಕಟಕವಿ 3.ಕರಿ 4.ಲಕ್ಷ್ಮೀಶ 5.ತಿದಾಂವೇ 8.ಹಾಸನ 9.ರಿವಾಜು 12.ವಿಧಾನಸೌಧ 14.ಮಾಣಿಕ್ಯ 15.ಪ್ರಪಂಚ 17.ಚಾರ

ಸುಡೊಕು 6542

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6				8			5
1		3		6		8	9	4
	8		5					
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	2

6541 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

08 ಸೆಪ್ಟೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣಪ್ರತಿಪದ್ ಗಂ. 21-12 ನಕ್ಷತ್ರ: ಪೂರ್ವಾಭಾದ್ರ ಗಂ. 20-03 ಯೋಗ: ಧೃತಿ ಗಂ. 6-30 ಸಿಂಹ ಮಾಸದ 22 ನೇ ದಿನ. ಮಳೆ ನಕ್ಷತ್ರ : ಹುಬ್ಬಾ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 09-00 , ಸೂರ್ಯೋದಯ : 06-23 ಸೂರ್ಯಾಸ್ತ : 06-34 ಮುಸ್ಲಿಂ ದಿನಾಂಕ : 15 ರಬಿಉಲ್ಲಾವಲ್ , ದಿನ ವಿಶೇಷ : ಮಹಾಲಯ ಪಕ್ಷ ಪ್ರಾರಂಭ , ಅದೃಷ್ಟ ಸಂಖ್ಯೆ : 1, 5

ಮೇಷ: ಅನಿರೀಕ್ಷಿತವಾಗಿ ಸ್ನೇಹಿತರ ಭೇಟಿ ಸಂತೋಷವಾಗುವುದು. ಆಡಳಿತಾತ್ಮಕ ವಿಚಾರದಲ್ಲಿ ಭಾರಿ ಬದಲಾವಣೆಗಳ ಅಗತ್ಯಗಳನ್ನು ಸಂಸ್ಥಾಪಕರಿಗೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗುವಿರಿ.

ವೃಷಭ: ಕಾರ್ಯ ಪ್ರಗತಿಯಲ್ಲಿ ಆಗಾಗ ಹೆಚ್ಚಿನ ಜವಾಬ್ದಾರಿ ಎದುರಾಗಿ ಸವಾಲು ಬರಲಿದೆ. ಕಟ್ಟಡ ಗುತ್ತಿಗೆದಾರರಿಗೆ ಬಿಡುವಿಲ್ಲದಂತಾದೀತು. ಮಕ್ಕಳು ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಿ. ಏಕಾಗ್ರತೆಯನ್ನು ಕಾಯ್ದುಕೊಳ್ಳಿ.

ಮಿಥುನ: ಸುತ್ತಲಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ ವ್ಯವಹರಿಸಿ. ಎದುರಾಳಿಗಳನ್ನು ಮಾತಿನಲ್ಲಿ ಸುಲಭವಾಗಿ ಕಟ್ಟಿಹಾಕುವಿರಿ. ಗೃಹದಲ್ಲಿ ಶುಭ ಸಮಾರಂಭಗಳು ನಡೆಯಲಿವೆ. ಯಶಸ್ಸಿನ ಮಾರ್ಗಗಳು ಗೋಚರಿಸಲಿವೆ.

ಕರ್ಕಾಟಕ: ಆರ್ಥಿಕವಾಗಿ ಮುಂದೆ ಬರುವ ಉದ್ದೇಶವನ್ನು ಇಟ್ಟುಕೊಂಡು ವಾಮಮಾರ್ಗವನ್ನು ಅನುಸರಿಸಬೇಡಿ. ಗುತ್ತಿಗೆ ವ್ಯವಹಾರಗಳಲ್ಲಿ ಎಡವಬಹುದು, ಜಾಗ್ರತರಾಗಿರಿ. ಶನೈಶ್ಚರನ ಆರಾಧನೆ ಮಾಡಿ.

ಸಿಂಹ: ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣದಲ್ಲಿ ಉತ್ತಮ ಯಶಸ್ಸನ್ನು ಕಾಣುವರು. ಸ್ನೇಹಿತರ ಬಳಗದಲ್ಲಿ ಅವರವರ ಸ್ವಾರ್ಥಕ್ಕಾಗಿ ವಂಚನೆಯ ಕಡೆಗೆ ಕರೆದೊಯ್ಯುವ ಪ್ರಯತ್ನ ನಡೆಯಲಿದೆ.

ಕನ್ಯಾ: ಪ್ರವಾಸದಿಂದ ಅನಿರೀಕ್ಷಿತವಾದ ಲಾಭದ ಅನುಭವ ಉಂಟಾಗುವುದು. ಅವಿವಾಹಿತರಿಗೆ ವಿವಾಹ ಯೋಗವು ಇದೆ. ಅಪರೂಪದ ಮೃದು ಧೋರಣೆಯಿಂದ ಇತರರಿಗೆ ಸಂತೋಷವೆನಿಸುವುದು.

ತುಲಾ: ವೈದ್ಯರಿಗೆ ಬಿಡುವಿಲ್ಲದ ಅಭ್ಯಾಸದ ಉನ್ನತ ಜವಾಬ್ದಾರಿಯ ಸ್ಥಾನಕ್ಕೆ ವರ್ಗಾವಣೆಯಾಗುವುದು. ಪಿತ್ರಾರ್ಜಿತ ಆಸ್ತಿಯ ಹಂಚಿಕೆಯ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗುವ ಪರಿಸ್ಥಿತಿ ಬರಲಿದೆ.

ವೃಶ್ಚಿಕ: ಆಫೀಸಿನ ಆಗು ಹೋಗುಗಳ ಬಗ್ಗೆ ಗಮನವಿಟ್ಟುಕೊಳ್ಳಿ. ಅಪರಿಚಿತರ ಹತ್ತಿರ ಗೌಪ್ಯತೆಯನ್ನು ಹಂಚಿಕೊಳ್ಳಬೇಡಿ. ಹೊಸತನದಲ್ಲಿ ಜಯ ಕಾಣುವಿರಿ. ಹಿರಿಯರ ಆರೋಗ್ಯದ ವಿಷಯದಲ್ಲಿ ಮುತುವರ್ಜಿ ವಹಿಸಿ.

ಧನು: ಸತ್ಯ ಮಾರ್ಗದಿಂದ ಕಾರ್ಯ ಪ್ರವೃತ್ತರಾದಲ್ಲಿ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ರಕ್ತದೊತ್ತಡ ಸ್ಥಿತಿ ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳಿ. ಮಗನಿಗೆ ಉದ್ಯೋಗ ದೊರೆಯಲಿದೆ.

ಮಕರ: ಮಾಡಿದ ಕೆಲಸಕ್ಕೆ ದುಪ್ಪಟ್ಟು ಸಂಪಾದನೆಯಾಗುವ ಯೋಗ ದಿನವಿದೆ. ರಫ್ತು ವ್ಯಾಪಾರ ಮಾಡುವವರಿಗೆ ಸಂಪರ್ಕದಲ್ಲಿ ಅಡೆತಡೆಗಳು ಉಂಟಾಗಲಿವೆ. ಹೊಸ ವಸ್ತ್ರಗಳ ಖರೀದಿಯನ್ನು ಮಾಡುವಿರಿ.

ಕುಂಭ: ಇತ್ತೀಚಿನ ದಿನಗಳಲ್ಲಿ ನೀವು ಮಾಡಿಕೊಂಡ ಹೊಸ ಪರಿಚಯ ಒಂದು ತರಹದಿಂದ ನಿಮಗೆ ಪ್ರಯೋಜನಕ್ಕೆ ಬರಲಿದೆ. ನಿಮ್ಮ ಪ್ರತಿಭೆ ಮತ್ತು ಕೌಶಲಗಳು ಬೆಳಕಿಗೆ ಬಂದು ಇತರರಿಗೆ ವಿಶೇಷ ವ್ಯಕ್ತಿ ಎನಿಸುವಿರಿ.

ಮೀನ: ಯುವಕ ಯುವತಿಯರಿಗೆ ಕಾಲೇಜಿನ ಶಿಸ್ತುಬದ್ಧವಾದ ಜೀವನವು ಉಸಿರುಗಟ್ಟಿಸುವಂತಹ ಅನುಭವವನ್ನು ತರಿಸಬಹುದು. ಯೋಗಿಗಳ ದರ್ಶನ ಹಾಗೂ ಮಾರ್ಗದರ್ಶನದ ಅಗತ್ಯವಿರುತ್ತದೆ.

ಭಾರತದ ಮುಡಿಗೆ ಏಷ್ಯಾ ಕಪ್

ಹಾಕಿ: ದಿಲ್‌ಪ್ರೀತ್ ಗೋಲು ಡಬಲ್; ‘ಚಾಂಪಿಯನ್’ ಕೊರಿಯಾಗೆ ಆಘಾತ

ರಾಜಗೀರ್, ಬಿಹಾರ (ಪಿಟಿಐ): ದಿಲ್‌ಪ್ರೀತ್ ಸಿಂಗ್ ಅವರು ಹೊಡೆದ ಎರಡು ಗೋಲುಗಳ ಬಲದಿಂದ ಭಾರತ ಹಾಕಿ ತಂಡವು ಏಷ್ಯಾ ಕಪ್ ಗೆದ್ದುಕೊಂಡಿತು. ಇದರೊಂದಿಗೆ ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಟೂರ್ನಿಗೆ ಅರ್ಹತೆಗಳಿಸಿಕೊಂಡಿತು.

ಭಾನುವಾರ ಇಲ್ಲಿ ನಡೆದ ಫೈನಲ್‌ನಲ್ಲಿ ಭಾರತ ತಂಡವು 4–1ರಿಂದ ಹಾಲಿ ಚಾಂಪಿಯನ್ ದಕ್ಷಿಣ ಕೊರಿಯಾದ ವಿರುದ್ಧ ಗೆದ್ದಿತು. ಇದು ಭಾರತಕ್ಕೆ ನಾಲ್ಕನೇ ಏಷ್ಯನ್ ಟ್ರೋಫಿ ಆಗಿದೆ. ಈ ಟೂರ್ನಿಯ ಇತಿಹಾಸದಲ್ಲಿ ಅತ್ಯಧಿಕ ಟ್ರೋಫಿಗಳನ್ನು ಜಯಿಸಿದ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಐದು ಬಾರಿ ಗೆದ್ದಿರುವ ದಕ್ಷಿಣ ಕೊರಿಯಾ ಮೊದಲ ಸ್ಥಾನದಲ್ಲಿದೆ. ಭಾರತ ತಂಡವು 2003 (ಕೌಲಾಲಂಪುರ), 2007 (ಚೆನ್ನೈ) ಮತ್ತು 2017ರಲ್ಲಿ ಢಾಕಾದಲ್ಲಿ ಏಷ್ಯಾ ಕಪ್ ಜಯಿಸಿತ್ತು.

ಮುಂದಿನ ವರ್ಷದ ಆಗಸ್ಟ್ 14ರಿಂದ 30ರವರೆಗೆ ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಎಫ್‌ಐಎಚ್ ವಿಶ್ವಕಪ್ ಟೂರ್ನಿಗೆ ಭಾರತವು ನೇರಪ್ರವೇಶ ಪಡೆಯಿತು.

ಭಾರತ ತಂಡದ ದಿಲ್‌ಪ್ರೀತ್ ಅವರು 28ನೇ ನಿಮಿಷ ಮತ್ತು 45ನೇ ನಿಮಿಷದಲ್ಲಿ ಗೋಲು ಗಳಿಸಿದರು. ಸುಖಜೀತ್ ಸಿಂಗ್ ಅವರು ಮೊದಲ ನಿಮಿಷದಲ್ಲಿಯೇ ಗೋಲು ಹೊಡೆದು ತಂಡಕ್ಕೆ ಉತ್ತಮ ಆರಂಭ ನೀಡಿದ್ದರು. ಅಮಿತ್ ರೋಹಿದಾಸ್ (50ನೇ ನಿ) ಒಂದು ಗೋಲು ಹೊಡೆದು ಮುನ್ನಡೆ ಒದಗಿಸಿದರು.

ಕೊರಿಯಾ ತಂಡದ ಏಕೈಕ ಗೋಲನ್ನು ಡಯಾನ್ ಸನ್ (51ನೇ ನಿ) ದಾಖಲಿಸಿದರು.

ಭಾರತದ ಆಟಗಾರರು ಪಂದ್ಯದ ಆರಂಭದಿಂದಲೇ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿದರು. ಡಿಫೆನ್ಸ್, ಮಿಡ್‌ಫೀಲ್ಡ್ ಮತ್ತು ಫಾರ್ವರ್ಡ್ ಆಟಗಾರರ ನಡುವೆ ಉತ್ತಮ ಹೊಂದಾಣಿಕೆ ಇತ್ತು. ಇದರಿಂದಾಗಿ ಎದುರಾಳಿಯ ಗೋಲು ವೃತ್ತಕ್ಕೆ ಭಾರತದ ಆಟಗಾರರು ಹಲವು ಬಾರಿ ಪ್ರವೇಶಿಸಿದರು. ಗೋಲು ದಾಖಲಿಸುವ ಪ್ರಯತ್ನ ಮಾಡಿದರು.



ಬಿಹಾರದ ರಾಜಗೀರ್‌ನಲ್ಲಿ ಭಾನುವಾರ ನಡೆದ ಏಷ್ಯಾ ಕಪ್ ಹಾಕಿ ಫೈನಲ್‌ನಲ್ಲಿ ಜಯಿಸಿದ ಭಾರತ ಪುರುಷರ ತಂಡವು ಟ್ರೋಫಿಯೊಂದಿಗೆ ಸಂಭ್ರಮಿಸಿತು ಪಿಟಿಐ ಚಿತ್ರ

ಇನ್ನೊಂದೆಡೆ ಕೊರಿಯಾ ತಂಡವು ಭಾರತದ ದಾಳಿಯನ್ನು ತಡೆಯಲು ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿತು. ಆದರೆ ಅವರಿಗೆ ಈ ಯೋಜನೆ ಕೈಕೊಟ್ಟಿತು. ಇದರಿಂದಾಗಿ ಕೊರಿಯಾ ಆಟಗಾರರು ಗೋಲು ಗಳಿಸುವ ಅವಕಾಶಗಳನ್ನು ಪಡೆಯುವಲ್ಲಿ ವಿಫಲರಾದರು. ಮೊದಲೆರಡೂ ಕ್ವಾರ್ಟರ್‌ಗಳಲ್ಲಿ ಭಾರತದ ರಕ್ಷಣಾ ಪಡೆಯು ಬಂಡೆಗಲ್ಲಿನಂತೆ ಎದುರಾಳಿ ಆಟಗಾರರಿಗೆ ತಡೆಯೊಡ್ಡಿತು.

ಪಂದ್ಯದ ಮೊದಲ 30 ಸೆಕೆಂಡುಗಳಲ್ಲಿಯೇ ಗೋಲು ದಾಖಲಿಸುವಲ್ಲಿ ಭಾರತ ಸಫಲವಾಯಿತು. ಲೆಫ್ಟ್ ಫ್ಲ್ಯಾಂಕ್‌ನಿಂದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಚುರುಕಾದ ಪಾಸ್ ನೀಡಿದರು. ಸುಖಜೀತ್ ಚೆಂಡನ್ನು ರಿವರ್ಸ್ ಹಿಟ್ ಮಾಡುವ ಮೂಲಕ ಎಡ ಮೇಲ್ಭಾಗದ ಮೂಲಕ ಗೋಲುಪೆಟ್ಟಿಗೆ ಸೇರಿಸಿದರು.

ಎಂಟನೇ ನಿಮಿಷದಲ್ಲಿ ದಿಲ್‌ಪ್ರೀತ್ ಸಿಂಗ್ ಅವರ ಗೋಲು ಹೊಡೆಯುವ ಪ್ರಯತ್ನ ಫಲಿಸಲಿಲ್ಲ. ಆದರೆ ನಂತರದ ಅವಧಿಯಲ್ಲಿ ಎರಡು ಗೋಲು ದಾಖಲಿಸಿ ದೊಡ್ಡ ಮುನ್ನಡೆ ಒದಗಿಸಿದರು.

ಅಮೆರಿಕ ಓಪನ್ ಟೆನಿಸ್: ಅನಿಸಿಮೊವಾ ವಿರುದ್ಧ ಗೆಲುವು

ಸಬಲೆಂಕಾಗೆ ಸತತ ಎರಡನೇ ಕಿರೀಟ

ನ್ಯೂಯಾರ್ಕ್ (ಎಪಿ): ಬೆಲಾರೂಸ್ ದೇಶದ ಅರಿನಾ ಸಬಲೆಂಕಾ ಸತತ ಎರಡನೇ ಬಾರಿ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ಕಿರೀಟ ಧರಿಸಿದರು.

ಆದರೆ ಈ ಸಲ ಅವರಿಗೆ ಕಿರೀಟವು ಸುಲಭವಾಗಿ ಒಲಿಯಲಿಲ್ಲ. ಪ್ರಶಸ್ತಿ ಗೆಲುವಿನಿಂದ ಸಬಲೆಂಕಾ ಎರಡು ಪಾಯಿಂಟ್‌ಗಳಿಂದ ದೂರ ಇದ್ದರು. ಅವರ ಅನುಭವ ಮತ್ತು ಕೌಶಲ್ಯಕ್ಕೆ ಸತತ ಎರಡು ಅಂಕ ಗಳಿಸಿ ಜಯಿಸುವುದು ಕಷ್ಟವೇನೂ ಆಗಿರಲಿಲ್ಲ.

ಆದರೆ ತಮ್ಮೆದುರಿಗೆ ಬಂದ ಚೆಂಡನ್ನು ಓವರ್ ಹೆಡ್ ಸ್ಮ್ಯಾಷ್ ಮಾಡುವ ಬದಲು ಬ್ಯಾಕ್‌ಪೆಡ್ಲಿಂಗ್ ಮಾಡಿದರು. ಚೆಂಡು ನೆಟ್‌ನೊಳಗೇ ಬಿತ್ತು. ಇದರಿಂದಾಗಿ ಅವರ ಎದುರಾಳಿ ಅಮಂದಾ ಅನಿಸಿಮೊವಾ ಅವರಿಗೂ ಒಂದು ‘ಬ್ರೇಕ್’ ಸಿಗುವ ಅವಕಾಶ ಲಭಿಸಿತು. ಶನಿವಾರ ನಡೆದ ಸಿಂಗಲ್ಸ್ ಫೈನಲ್‌ನಲ್ಲಿ ಈ ‘ಗಂಭೀರ ತಪ್ಪು’ ಎಸಗಿದ ನಂತರ ಸಬಲೆಂಕಾ ತಮ್ಮ ರೆಕೆಟ್ ಅನ್ನು ಅನ್ನು ನೀಲಿ ಅಂಕಣದಲ್ಲಿ ಬೀಳಿಸಿ ವಿಷಾದದ ನಗೆ ಬೀರಿದರು. ಜನವರಿಯಲ್ಲಿ ಆಸ್ಟ್ರೇಲಿಯನ್ ಓಪನ್ ಮತ್ತು ಜೂನ್‌ನಲ್ಲಿ ಫ್ರೆಂಚ್ ಓಪನ್ ಫೈನಲ್‌ಗಳಲ್ಲಿ ಸೋತಿದ್ದ ನೆನಪುಗಳು ಅವರ ಮನದಲ್ಲಿ ಹಾದು‑ಹೋಗಿರಬಹುದು. ನಿಧಾನವಾಗಿ ಸಾವರಿಸಿಕೊಂಡ ಅವರು 15 ನಿಮಿಷಗಳಲ್ಲಿ ವಿಜಯದ ಸಂಭ್ರಮ ಆಚರಿಸಿದರು. 6–3, 7–6 (3) ರಿಂದ ಅನಿಸಿಮೊವಾ ವಿರುದ್ಧ ಗೆದ್ದರು.

‘ಆ ಸಂದೇಹದ ಭಾವವು ಮನದಲ್ಲಿ ಬಂದು ಹೋಯಿತು. ಅದರ ನಂತರ ದೀರ್ಘ ಉಸಿರೆಳೆದುಕೊಂಡು ಮನವನ್ನು ಸ್ಥಿಮಿತಕ್ಕೆ ತಂದುಕೊಂಡೆ. ಇದೆಲ್ಲವೂ ಆಗುತ್ತಿರುತ್ತದೆ. ಮುಂದೆ ಆಗುವ ಕೆಲಸ ನೋಡೋಣ ಎಂದುಕೊಂಡು ಆಡಿದೆ’ ಎಂದು ಸಬಲೆಂಕಾ ಪಂದ್ಯದ ನಂತರ ಹೇಳಿದರು.

ಇದು ಅವರ ನಾಲ್ಕನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ. ಅವೆಲ್ಲವೂ ಅವರಿಗೆ ಹಾರ್ಡ್‌ಕೋರ್ಟ್ ಮೇಲೆಯೇ ಒಲಿದಿರುವ ಪ್ರಶಸ್ತಿಗಳು. 27 ವರ್ಷದ ಸಬಲೆಂಕಾ ಅಮೆರಿಕ ಓಪನ್ ಟೂರ್ನಿಯಲ್ಲಿ ಸತತ ಎರಡನೇ ಪ್ರಶಸ್ತಿ ಜಯಿಸಿದ ದಾಖಲೆ ಬರೆದರು. 2012–2014ರ ಅವಧಿಯಲ್ಲಿ ಸೆರೆನಾ ವಿಲಿಯಮ್ಸ್ ಸತತ ಮೂರು ಬಾರಿ ಜಯಿಸಿದ್ದರು. ಸಬಲೆಂಕಾ ಅವರು ಕಳೆದೊಂದು ಋತುವಿನಲ್ಲಿ ಮೂರು ಟೂರ್ನಿಗಳ ಫೈನಲ್‌ಗಳಲ್ಲಿ ಸೋತಿದ್ದರು.

‘ನಾನು ಅವರನ್ನು (ಸಬಲೆಂಕಾ) ಅಪಾರವಾಗಿ ಗೌರವಿಸುತ್ತೇನೆ. ಅವರು ಬಹಳಷ್ಟು ಕಠಿಣ ಪರಿಶ್ರಮಪಟ್ಟು ಅಭ್ಯಾಸ ಮಾಡುತ್ತಾರೆ. ಆದ್ದರಿಂದ ಅವರು ಈ ಎತ್ತರಕ್ಕೇರಿದ್ದಾರೆ’ ಎಂದು 24 ವರ್ಷದ ಅನಿಸಿಮೊವಾ ಹೇಳಿದರು.

ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ 24 ಸಾವಿರ ಪ್ರೇಕ್ಷಕರು ವೀಕ್ಷಿಸಿದ ಫೈನಲ್‌ನಲ್ಲಿ ಸಬಲೆಂಕಾ ಮೊದಲ ಸೆಟ್‌ನಲ್ಲಿ ಸುಲಭವಾಗಿ ಅಮಂಡಾ ಅವರನ್ನು ಸೋಲಿಸಿದರು. ಆದರೆ ಎರಡನೇ ಸೆಟ್‌ನಲ್ಲಿ ಅಮೆರಿಕದ ಆಟಗಾರ್ತಿ ತಿರುಗೇಟು ನೀಡಿದರು. ತೀವ್ರ ಜಿದ್ದಾಜಿದ್ದಿ‑ನಿಂದ ಕೂಡಿದ್ದ ಸೆಟ್ ಫಲಿತಾಂಶವು ಟೈ ಬ್ರೇಕರ್‌ನಲ್ಲಿ ನಿರ್ಧಾರವಾಯಿತು.



ಟ್ರೋಫಿಗೆ ಮುತ್ತಿಕ್ಕಿದ ಅರಿನಾ ಸಬಲೆಂಕಾ ಎಎಫ್‌ಪಿ ಚಿತ್ರ



ಅಮನ್ ಸೈನಿ, ರಿಷಭ್ ಯಾದವ್ ಮತ್ತು ಪ್ರಥಮೇಶ್ ಫ್ಯೂಗೆ ಎಕ್ಸ್ ಚಿತ್ರ

ಆರ್ಚರಿ ವಿಶ್ವ ಚಾಂಪಿಯನ್‌ಷಿಪ್ ಪುರುಷರ ತಂಡಕ್ಕೆ ಚಿನ್ನದ ಪದಕ

ಗ್ವಾಂಗ್‌ಜು (ದಕ್ಷಿಣ ಕೊರಿಯಾ), (ಪಿಟಿಐ): ಭಾರತದ ಪುರುಷರ ಕಾಂಪೌಂಡ್ ಆರ್ಚರಿ ತಂಡವು ಇಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚೊಚ್ಚಲ ಚಿನ್ನ ಗೆದ್ದು, ಚಾರಿತ್ರಿಕ ಸಾಧನೆ ಮೆರೆಯಿತು. ಆದರೆ, ಮಹಿಳಾ ತಂಡವು ಎಂಟು ವರ್ಷಗಳಲ್ಲಿ ಇದೇ ಮೊದಲ ಬಾರಿ ಪದಕ ಗೆಲ್ಲಲು ವಿಫಲವಾಯಿತು.

ಭಾರತದ ರಿಷಭ್ ಯಾದವ್ ಅವರು ಮಿಶ್ರ ತಂಡ ವಿಭಾಗದಲ್ಲಿ ಅನುಭವಿ ಬಿಲ್ಗಾರ್ತಿ ಜ್ಯೋತಿ ಸುರೇಖಾ ವೆನ್ನಮ್ ಅವರೊಂದಿಗೆ ಬೆಳ್ಳಿ ಗೆದ್ದು, ಪದಕ ಡಬಲ್ ಮಾಡಿದರು.

ರಿಷಭ್ ಯಾದವ್, ಅಮನ್ ಸೈನಿ ಮತ್ತು ಪ್ರಥಮೇಶ್ ಫ್ಯೂಗೆ ಅವರನ್ನು ಒಳಗೊಂಡ ಪುರುಷರ ತಂಡವು ಫೈನಲ್‌ನಲ್ಲಿ 235-233ರಿಂದ ಫ್ರಾನ್ಸ್ ಅನ್ನು ಮಣಿಸಿ ರೋಚಕ ಗೆಲುವು ಸಾಧಿಸಿತು.

ನಿಕೋಲಸ್ ಗಿರಾರ್ಡ್, ಜೀನ್ ಫಿಲಿಪ್ ಬೌಲ್ಚ್ ಮತ್ತು ಫ್ರಾಂಕೋಯಿಸ್ ಡುಬೊಯಿಸ್ ಅವರನ್ನು ಒಳಗೊಂಡ ಫ್ರಾನ್ಸ್ ತಂಡ ಪ್ರಬಲ ಸ್ಪರ್ಧೆ ನೀಡಿ ಎರಡು ಪಾಯಿಂಟ್‌ಗಳಿಂದ ಸೋತು, ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿತು.

ಮೊದಲ ಸುತ್ತಿನಲ್ಲಿ 57–59ರಿಂದ ಹಿನ್ನಡೆ ಅನುಭವಿಸಿದ್ದ ಭಾರತ ತಂಡವು ನಂತರದಲ್ಲಿ ಲಯ ಕಂಡುಕೊಂಡು, ಎರಡನೇ ಸುತ್ತಿನಲ್ಲಿ ಪೂರ್ಣ ಅಂಕ ಗಳಿಸಿ 117 ಸ್ಕೋರ್‌ಗಳೊಂಡನೆ ಸಮಬಲ ಸಾಧಿಸಿತು.

ಮೂರನೇ ಸುತ್ತಿನಲ್ಲೂ ಉಭಯ ತಂಡಗಳಿಂದ ಸಮಬಲದ ಹೋರಾಟ ಕಂಡು ಬಂದಿದ್ದರಿಂದ ಸ್ಕೋರ್ 176–176 ಆಯಿತು. ಕೊನೆಯ ಸುತ್ತಿನಲ್ಲಿ ಭಾರತದ ಬಿಲ್ಗಾರರು ನಿಖರ ಗುರಿಯಿಟ್ಟು, ಜಯ ಸಾಧಿಸಿದರು.

ದುಲೀಪ್ ಟ್ರೋಫಿ: ಅಜರುದ್ದೀನ್ ಬಳಗಕ್ಕೆ ಮೊದಲ ಇನಿಂಗ್ಸ್ ಮುನ್ನಡೆ

ಫೈನಲ್‌ನಲ್ಲಿ ದಕ್ಷಿಣಕ್ಕೆ ಕೇಂದ್ರ ವಲಯ ಸವಾಲು

• ಗಿರೀಶ ದೊಡ್ಡಮನಿ

ಬೆಂಗಳೂರು: ಕೇರಳದ ಮೊಹಮ್ಮದ್ ಅಜರುದ್ದೀನ್ ನಾಯಕತ್ವದ ದಕ್ಷಿಣ ವಲಯ ಮತ್ತು ‘ಐಪಿಎಲ್ ಚಾಂಪಿಯನ್’ ಆರ್‌ಸಿಬಿಯ ನಾಯಕ ರಜತ್ ಪಾಟೀದಾರ್ ನೇತೃತ್ವದ ಕೇಂದ್ರ ವಲಯ ತಂಡಗಳು ಈ ಬಾರಿಯ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ನಗರದ ಹೊರವಲಯದಲ್ಲಿ ಸಿಂಗಹಳ್ಳಿಯಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಮುಕ್ತಾಯವಾದ ಎರಡೂ ಸೆಮಿಫೈನಲ್‌ಗಳು ಡ್ರಾನಲ್ಲಿ ಮುಕ್ತಾಯವಾದವು.

ಉತ್ತರ ವಲಯದ ಎದುರು ಮೊದಲ ಇನಿಂಗ್ಸ್‌ನಲ್ಲಿ 175 ರನ್ ಮುನ್ನಡೆ ಗಳಿಸಿದ ದಕ್ಷಿಣ ವಲಯ ತಂಡವು ಫೈನಲ್‌ಗೆ ಲಗ್ಗೆ ಹಾಕಿತು. ಶನಿವಾರ ದಿನದಾಟದ ಮುಕ್ತಾಯಕ್ಕೆ ಉತ್ತರ ವಲಯವು ಮೊದಲ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗಳಿಗೆ 278 ರನ್ ಗಳಿಸಿತ್ತು. ಮೊದಲು ಬ್ಯಾಟಿಂಗ್ ಮಾಡಿದ್ದ ದಕ್ಷಿಣ ತಂಡವು ಪೇರಿಸಿದ್ದ 536 ರನ್‌ಗಳ ಮೊತ್ತವನ್ನು ಚುಕ್ತಾ ಮಾಡಲು ಉತ್ತರಕ್ಕೆ ಇನ್ನೂ 259 ರನ್‌ಗಳ ಅಗತ್ಯವಿತ್ತು. ಶತಕ ಬಾರಿಸಿದ್ದ ಶುಭಂ ಖಜೂರಿಯಾ ಕ್ರೀಸ್‌ನಲ್ಲಿದ್ದರು. ಅವರೂ ಸೇರಿದಂತೆ ಐದು ವಿಕೆಟ್‌ಗಳು ಇದ್ದವು. ಅದರಿಂದಾಗಿ ಕೊನೆಯ ದಿನದಾಟದಲ್ಲಿ ಎಚ್ಚರಿಕೆಯಿಂದ ಆಡಿ ಮುನ್ನಡೆ ಸಾಧಿಸುವ ಉತ್ತರ ವಲಯದ ಯೋಜನೆಗೆ ದಕ್ಷಿಣ ವಲಯ ಬೌಲರ್‌ಗಳು ಅಡ್ಡಗಾಲು ಹಾಕಿದರು.

ಭಾನುವಾರ ಬೆಳಿಗ್ಗೆ ಆಟ ಆರಂಭವಾಗಿ ಸ್ವಲ್ಪ ಹೊತ್ತು ಕಳೆದಿತ್ತು. ಶುಭಂ ಖಜೂರಿಯಾ ನಾಲ್ಕು ಎಸೆತಗಳನ್ನು ಆಡಿದ್ದರು. ಅಷ್ಟರಲ್ಲಿಯೇ ವಾಸುಕಿ ಕೌಶಿಕ್ ಅವರ ಸ್ವಿಂಗ್ ಮೋಡಿಗೆ ಶುಭಂ ಕ್ಲೀನ್‌ಬೌಲ್ಡ್ ಆದರು.

ಸಾಹಿಲ್ ಲೂತ್ರಾ (19 ರನ್) ಮತ್ತು ಮಯಂಕ್ ದಾಗರ್ (31ರನ್) ಅವರು ಸ್ವಲ್ಪ ಹೊತ್ತು ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು. ಆದರೆ ಇವರಿಬ್ಬರ‑ನ್ನೂ ಬಲಗೈ ಮಧ್ಯಮವೇಗಿ ನಿಧೀಶ್ ಅವರು ಹೆಡೆಮುರಿ ಕಟ್ಟಿದರು. ಇದರಿಂದಾಗಿ ಉತ್ತರ ವಲಯದ ಫೈನಲ್ ಕನಸು ಕಮರಿತು.

ಎರಡನೇ ಇನಿಂಗ್ಸ್ ಆರಂಭಿಸಿದ ದಕ್ಷಿಣ ವಲಯವು 24.4 ಓವರ್‌ಗಳಲ್ಲಿ 1 ವಿಕೆಟ್‌ಗೆ 95 ರನ್ ಗಳಿಸಿತು. ಮೊದಲ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದ್ದ ಜಗದೀಶನ್ (52; 69ಎ, 4X6) ಅವರು ಎರಡನೇಯದ್ದರಲ್ಲಿಯೂ ಅಜೇಯ ಅರ್ಧಶತಕ ಗಳಿಸಿದರು. ನಂತರ ಉಭಯ ತಂಡಗಳು ಚಹಾ ವಿರಾಮಕ್ಕೆ ಅರ್ಧ ಗಂಟೆಗೂ ಮುನ್ನ ಡ್ರಾಗೆ ಸಮ್ಮತಿಸಿದವು.

ಯಶಸ್ವಿ ಅರ್ಧಶತಕ: ಇನ್ನೊಂದು ಮೈದಾನದಲ್ಲಿ ನಡೆದ ಎರಡನೇ ಸೆಮಿಫೈನಲ್‌ನಲ್ಲಿ ಕೇಂದ್ರ ವಲಯವು ಶನಿವಾರವೇ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತ್ತು. ಕೊನೆಯ ದಿನದಾಟದಲ್ಲಿ ಎರಡನೇ ಇನಿಂಗ್ಸ್ ಆಡಿದ ಪಶ್ಚಿಮ ವಲಯವು 53.3 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 216 ರನ್ ಗಳಿಸಿತು. ಯಶಸ್ವಿ ಜೈಸ್ವಾಲ್ (64; 70ಎ, 4X3, 6X3) ಬಿರುಸಾದ ಅರ್ಧಶತಕ ಗಳಿಸಿದರು. ಶ್ರೇಯಸ್ ಅಯ್ಯರ್ 12 ರನ್ ಗಳಿಸಿದರು. ಕೇಂದ್ರ ತಂಡದ ಸ್ಪಿನ್ನರ್ ಸಾರಾಂಶ್ ಜೈನ್ ಐದು ವಿಕೆಟ್ ಗಳಿಸಿದರು.



ದಕ್ಷಿಣ ವಲಯ ತಂಡದ ಬ್ಯಾಟರ್ ಎನ್‌. ಜಗದೀಶನ್ –ಪಿಟಿಐ ಚಿತ್ರ

ಬಿಸಿಸಿಐ ಶ್ರೇಷ್ಠತಾ ಕ್ರೇಂದ್ರದಲ್ಲಿ ಸ್ಪರ್ಧಾತ್ಮಕ ಪಿಚ್‌ಗಳನ್ನು ಸಿದ್ಧಗೊಳಿಸಬೇಕು. ಯಾಕೆಂದರೆ ಭವಿಷ್ಯದಲ್ಲಿ ಇಲ್ಲಿ ಬಹಳಷ್ಟು ದೇಶೀಯ ಕ್ರಿಕೆಟ್ ಪಂದ್ಯಗಳು ನಡೆಯಲಿವೆ

ಶಾರ್ದೂಲ್ ಠಾಕೂರ್
ಪಶ್ಚಿಮ ವಲಯ ತಂಡದ ನಾಯಕ

ಸಂಕ್ಷಿಪ್ತ ಸ್ಕೋರು

ಸೆಮಿಫೈನಲ್ 1: ಮೊದಲ ಇನಿಂಗ್ಸ್: ದಕ್ಷಿಣ ವಲಯ: 169.2 ಓವರ್‌ಗಳಲ್ಲಿ 536. ಉತ್ತರ ವಲಯ: 100.1 ಓವರ್‌ಗಳಲ್ಲಿ 361 (ಶುಭಂ ಖಜೂರಿಯಾ 128, ಮಯಂಕ್ ದಾಗರ್ 31, ಅನ್ಶುಲ್ ಕಾಂಬೋಜ್ ಔಟಾಗದೇ 11, ನಿಧೀಶ್ 82ಕ್ಕೆ3, ಗುರ್ಜಪನೀತ್ ಸಿಂಗ್ 96ಕ್ಕೆ4, ವಿ. ಕೌಶಿಕ್ 61ಕ್ಕೆ1) ಎರಡನೇ ಇನಿಂಗ್ಸ್: ದಕ್ಷಿಣ ವಲಯ: 24.4 ಓವರ್‌ಗಳಲ್ಲಿ 1 ವಿಕೆಟ್‌ಗೆ 95 (ತನ್ಮಯ್ ಅಗರವಾಲ್ 13, ಎನ್. ಜಗದೀಶನ್ ಔಟಾಗದೇ 52, ದೇವದತ್ತ ಪಡಿಕ್ಕಲ್ ಔಟಾಗದೇ 16, ಅಕಿಬ್ ನಬಿ ಧಾರ್ 23ಕ್ಕೆ1) ಫಲಿತಾಂಶ: ಡ್ರಾ (ದಕ್ಷಿಣ ವಲಯಕ್ಕೆ ಮೊದಲ ಇನಿಂಗ್ಸ್ ಮುನ್ನಡೆ–ಫೈನಲ್ ಪ್ರವೇಶ)

ಸೆಮಿಫೈನಲ್ 2: ಮೊದಲ ಇನಿಂಗ್ಸ್: ಪಶ್ಚಿಮ ವಲಯ: 108 ಓವರ್‌ಗಳಲ್ಲಿ 438. ಕೇಂದ್ರ ವಲಯ: 164.3 ಓವರ್‌ಗಳಲ್ಲಿ 600 (ಸಾರಾಂಶ್ ಜೈನ್ ಔಟಾಗದೇ 63, ದೀಪಕ್ ಚಾಹರ್ 33, ಯಶ್ ಠಾಕೂರ್ 21, ಹರ್ಷ ದುಬೆ 75, ಅರ್ಜುನ್ ನಾಗವಸ್ವಾಲಾ 57ಕ್ಕೆ3, ಧರ್ಮೇಂದ್ರಸಿಂಹ ಜಡೇಜ 130ಕ್ಕೆ4) ಪಶ್ಚಿಮ ವಲಯ: 53.3 ಓವರ್‌ಗಳಲ್ಲಿ 8ಕ್ಕೆ216 (ಯಶಸ್ವಿ ಜೈಸ್ವಾಲ್ 64, ಆರ್ಯಾ ದೇಸಾಯಿ 35, ತನುಷ್ ಕೋಟ್ಯಾನ್ ಔಟಾಗದೇ 40, ಹರ್ಷ ದುಬೆ 96ಕ್ಕೆ3, ಸಾರಾಂಶ್ ಜೈನ್ 84ಕ್ಕೆ5) ಫಲಿತಾಂಶ: ಡ್ರಾ. (ಕೇಂದ್ರ ವಲಯಕ್ಕೆ ಮೊದಲ ಇನಿಂಗ್ಸ್ ಮುನ್ನಡೆ–ಫೈನಲ್‌ಗೆ ಅರ್ಹತೆ)

11ರಿಂದ ಫೈನಲ್: ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನದಲ್ಲಿ ಇದೇ 11ರಿಂದ 15ರವರೆಗೆ ದುಲೀಪ್ ಟ್ರೋಫಿ ಫೈನಲ್ ನಡೆಯಲಿದೆ.

ಆದರೆ ಲಖನೌನಲ್ಲಿ ನಡೆಯುವ ಎರಡು ‘ಟೆಸ್ಟ್’ಗಳ ಸರಣಿಯಲ್ಲಿ ಆಡಲಿರುವ ಭಾರತ ಎ ತಂಡದಲ್ಲಿ ಸ್ಥಾನ ಪಡೆದಿರುವ ಕೆಲವು ಆಟಗಾರರು ಈ ಫೈನಲ್‌ನಲ್ಲಿ ಆಡುವುದಿಲ್ಲ. ಅವರಲ್ಲಿ ದಕ್ಷಿಣ ವಲಯದ ಎನ್. ಜಗದೀಶನ್, ದೇವದತ್ತ ಪಡಿಕ್ಕಲ್, ಕೇಂದ್ರ ವಲಯದ ಹರ್ಷ ದುಬೆ, ಖಲೀಲ್ ಅಹಮದ್ ಹಾಗೂ ಯಶ್ ಠಾಕೂರ್ ಅವರು ಪ್ರಮುಖರಾಗಿದ್ದಾರೆ. ಎ ತಂಡದ ಆಟಗಾರರು ಇದೇ 12ರಂದು ಲಖನೌನಲ್ಲಿ ಹಾಜರಿರಬೇಕು ಎಂದು ಬಿಸಿಸಿಐ ಸೂಚಿಸಿದೆ.

ಭರತ್, ವಿಜಯ್ ಅಮೋಘ ಆಟ

ವಿಶಾಖಪಟ್ಟಣ (ಪಿಟಿಐ): ಆಲ್‌ರೌಂಡರ್ ಭರತ್ ಮತ್ತು ವಿಜಯ್ ಮಲೀಕ್ ಅವರ ಅಮೋಘ ಆಟದ ಬಲದಿಂದ ತೆಲುಗು ಟೈಟನ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಟೈಟನ್ಸ್ ತಂಡವು 44–34ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಗೆದ್ದಿತು.

ವಿಶ್ವನಾಥ್ ಸ್ಪೋರ್ಟ್ಸ್ ಕ್ಲಬ್ ಒಳಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭರತ್ ಅವರು ‘ಸೂಪರ್ ಟೆನ್’ ಸಾಧನೆ ಮಾಡಿದರು. ಅವರ ಭರ್ಜರಿ ದಾಳಿ ಮತ್ತು ರಕ್ಷಣಾತ್ಮಕ ತಂತ್ರಗಳು ರಂಗೇರಿದವು. ಅವರು ಒಟ್ಟು 12 ಅಂಕಗಳನ್ನು ಗಳಿಸಿದರು. ಅದರಲ್ಲಿ 11 ಟಚ್ ಹಾಗೂ 1 ಟ್ಯಾಕಲ್ ಪಾಯಿಂಟ್ ಗಳಿಸಿದರು. ಅವರು ಒಟ್ಟು 17 ದಾಳಿಗಳನ್ನು ಮಾಡಿದರು.

ಅವರಿಗೆ ಉತ್ತಮ ಜೊತೆ ನೀಡಿದ ನಾಯಕ ವಿಜಯ್ 11 ಅಂಕಗಳನ್ನು ಗಳಿಸಿದರು. ಅದರಲ್ಲಿ 7 ಅಂಕಗಳು ದಾಳಿಯಲ್ಲಿ ಲಭಿಸಿದರೆ, 3 ಬೋನಸ್ ಮತ್ತು 1 ಟ್ಯಾಕಲ್‌ನಲ್ಲಿ ಒಲಿದವು. ರೇಡರ್ ಚೇತನ್ ಕೂಡ 5 ಅಂಕ ಗಳಿಸಿ ತಂಡದ ಮುನ್ನಡೆಗೆ ಕಾಣಿಕೆ ನೀಡಿದರು.

PRO KABADDI

ದಬಾಂಗ್‌ಗೆ ಹ್ಯಾಟ್ರಿಕ್ ಗೆಲುವು

ರೋಚಕವಾಗಿದ್ದ ದಿನದ ಎರಡನೇ ಪಂದ್ಯದಲ್ಲಿ ಡೆಲ್ಲಿ ದಬಾಂಗ್ ತಂಡವು 36–35ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಮಣಿಸಿತು. ಈ ಮೂಲಕ ಹ್ಯಾಟ್ರಿಕ್ ಗೆಲುವು ಸಾಧಿಸಿ, ಟೂರ್ನಿಯಲ್ಲಿ ಅಜೇಯವಾಗಿ ಉಳಿದಿದೆ.

ದಬಾಂಗ್ ಪರ ಆಶು ಮಲಿಕ್ 21 ಅಂಕ ಗಳಿಸಿ ಗೆಲುವಿನ ರೂವಾರಿಯಾದರು. ಜೈಪುರ ತಂಡದ ಪರ ನಿತಿನ್ ಕುಮಾರ್ ಮತ್ತು ಸಾಹಿಲ್ ಸತ್ಪಾಲ್ ಕ್ರಮವಾಗಿ 14 ಮತ್ತು 10 ಪಾಯಿಂಟ್ಸ್ ಗಳಿಸಿದರು. ಜೈಪುರ ತಂಡಕ್ಕೆ ಇದು ಮೂರು ಪಂದ್ಯಗಳಲ್ಲಿ ಎರಡನೇ ಸೋಲಾಗಿದೆ.

ಇಂದಿನ ಪಂದ್ಯಗಳು
ಬೆಂಗಳೂರು ಬುಲ್ಸ್–ಹರಿಯಾಣ ಸ್ಟೀಲರ್ಸ್ (ರಾತ್ರಿ 8)
ಪುಣೇರಿ ಪಲ್ಟನ್–ಪಟ್ನಾ ಪೈರೇಟ್ಸ್ (ರಾತ್ರಿ 9)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಸ್ಟಾರ್

ಮುನ್ನಡೆಯಲ್ಲಿ ಪರ್ಹಾಮ್, ವೈಶಾಲಿ

ಐಲ್ ಆಫ್ ಮ್ಯಾನ್ (ಪಿಟಿಐ): ಇರಾನ್‌ನ ಪರ್ಹಾಮ್ ಮಘಸೂಡ್ಲು ಅವರು ಗ್ರ್ಯಾಂಡ್ ಸ್ವಿಸ್ ಚೆಸ್ ಲೀಗ್‌ನ ಓಪನ್ ವಿಭಾಗದಲ್ಲಿ ಭಾನುವಾರ ನಾಲ್ಕನೇ ಸುತ್ತಿನ ಪಂದ್ಯಗಳ ನಂತರ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಭಾರತದ ಆರ್.ವೈಶಾಲಿ ಮತ್ತು ರಷ್ಯಾದ ಕ್ಯಾಥರಿನಾ ಲಾಗ್ನೊ ತಲಾ 3.5 ಅಂಕಗಳೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಮಘಸೂಡ್ಲು 3.5 ಅಂಕ ಹೊಂದಿದ್ದಾರೆ. ಭಾರತದ ಆರ್.ಪ್ರಜ್ಞಾನಂದ, ಅರ್ಜುನ್ ಇರಿಗೇಶಿ, ಡಿ.ಗುಕೇಶ್, ಅಮೆರಿಕದ ಅಭಿಮನ್ಯು ಮಿಶ್ರಾ, ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್, ಫ್ರಾನ್ಸ್‌ನ ಎಂ.ಮೌರಿಝಿ ಅವರು ತಲಾ ಮೂರು ಅಂಕ ಗಳಿಸಿದ್ದಾರೆ.

ಮೂರನೇ ಬೋರ್ಡ್‌ನಲ್ಲಿ ಗುಕೇಶ್ ಮತ್ತು ಅರ್ಜುನ್ ನಡುವಣ ಪಂದ್ಯ 46 ನಡೆಗಳಲ್ಲಿ ಡ್ರಾ ಆಯಿತು. ಪ್ರಜ್ಞಾನಂದ ಎರಡನೇ ಬೋರ್ಡ್‌ನಲ್ಲಿ 16 ವರ್ಷ ವಯಸ್ಸಿನ ಅಭಿಮನ್ಯು ಮಿಶ್ರಾ ಜೊತೆ ಡ್ರಾ ಮಾಡಿಕೊಂಡರು. ಮಹಿಳೆಯರ ವಿಭಾಗದ ಮೊದಲ ಬೋರ್ಡ್‌ನಲ್ಲಿ ವೈಶಾಲಿ ಅವರು ದಿನಾರಾ ವ್ಯಾಗ್ನರ್ ಜೊತೆ ಡ್ರಾ ಮಾಡಿಕೊಂಡರು.

ಈಜು: ಹಕೀಮ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಮಂಗಳಾ ಈಜು ಕ್ಲಬ್‌ನ ವಾಫಿ ಅಬ್ದುಲ್ ಹಕೀಮ್ ಅವರು ಜೈ ಹಿಂದ್ ಈಜುಕೇಂದ್ರ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಬೈ‑ಫಿನ್ ಈಜು ಸ್ಪರ್ಧೆಯಲ್ಲಿ ಪುರುಷರ ವಿಭಾಗದ ವೈಯಕ್ತಿಕ ಚಾಂಪಿಯನ್ ಪಟ್ಟ ತಮ್ಮದಾಗಿಸಿಕೊಂಡರು. ಮಂಗಳಾ ಈಜು ಕ್ಲಬ್‌ನ ವೈಷ್ಣವಿ ಕುಡ್ವ ಹಾಗೂ ಹಾಸನದ ಹಾಸನಾಂಬ ಈಜು ಕ್ಲಬ್‌ನ ದೇಶ್ನಾ ಪಿ.ಶೆಟ್ಟಿ ಮಹಿಳೆಯರ ವಿಭಾಗದ ಚಾಂಪಿಯನ್‌ಷಿಪ್ ಹಂಚಿಕೊಂಡರು.

ನಗರಪಾಲಿಕೆ ಈಜುಕೊಳದಲ್ಲಿ ನಡೆದ ಸ್ಪರ್ಧೆಯ ಮುಕ್ತ ವಿಭಾಗದ 100 ಮೀಟರ್ಸ್ ಫ್ರೀಸ್ಟೈಲ್, 200 ಮೀ ಫ್ರೀಸ್ಟೈಲ್ ಮತ್ತು 400 ಮೀ ಫ್ರೀಸ್ಟೈಲ್‌ನಲ್ಲಿ ವಾಫಿ ಚಿನ್ನ ಗೆದ್ದುಕೊಂಡರು. ಅವರು ನಗರದ ಸೇಂಟ್ ಅಲೋಶಿಯಸ್ ಕಾಲೇಜು ವಿದ್ಯಾರ್ಥಿ. ಹಾಸನದ ಸುಜಲಾ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿನಿ ದೇಶ್ನಾ 50 ಮೀ ಫ್ರೀಸ್ಟೈಲ್ ಹಾಗೂ 100 ಮೀ ಫ್ರೀಸ್ಟೈಲ್‌ನಲ್ಲಿ ಚಿನ್ನ, 200 ಮೀ ಫ್ರೀ‑ಸ್ಟೈಲ್‌ನಲ್ಲಿ ಬೆಳ್ಳಿ ಗಳಿಸಿದರು. ಎಸ್‌ಡಿಎಂ ಕಾನೂನು ಕಾಲೇಜಿನ ವೈಷ್ಣವಿ ಕುಡ್ವ ಅವರೂ ಪಾಲ್ಗೊಂಡ ಮೂರೂ ಸ್ಪರ್ಧೆಗಳಲ್ಲಿ ಪದಕ ಗೆದ್ದುಕೊಂಡರು. 200 ಮೀ ಫ್ರೀಸ್ಟೈಲ್ ಮತ್ತು 400 ಮೀ ಫ್ರೀಸ್ಟೈಲ್‌ನಲ್ಲಿ ಚಿನ್ನ, 50 ಮೀ ಫ್ರೀಸ್ಟೈಲ್‌ನಲ್ಲಿ ಬೆಳ್ಳಿ ಪದಕ ಅವರ ಪಾಲಾಯಿತು.



ಅಬ್ದುಲ್ ಹಕೀಮ್

ಬಾಲಕರ ಗುಂಪು 2ರಲ್ಲಿ ನಿಹಾಲ್ ಪೂಜಾರಿ, ಗುಂಪು 3ರಲ್ಲಿ ಯತಿನ್ ಎಂ.ಎನ್, ಗುಂಪು 4ರಲ್ಲಿ ನೋಹ್ ಜೋ ಪಾಯಸ್ ಮತ್ತು 5ರಲ್ಲಿ ಮಿಹಿರ್ ಕೆ, ಬಾಲಕಿಯರ ಗುಂಪು 2ರಲ್ಲಿ ಲಾಸ್ಯ ಕಿಶನ್, ಗುಂಪು 3ರಲ್ಲಿ ರೀಮಾ ಎ.ಎಸ್, ಗುಂಪು 4ರಲ್ಲಿ ಅಲಿತಾ ಡಿಸೋಜ ಮತ್ತು 5ರಲ್ಲಿ ಸಾರಾ ಎಲಿಶಾ ಪಿಂಟೊ ಚಾಂಪಿಯನ್ ಆದರು.

ನೇಷನ್ಸ್ ಕಪ್: ಭಾರತ ತಂಡಕ್ಕೆ ಒಮನ್ ಸವಾಲು

ಹಿಸೋರ್ (ತಾಜಿಕಿಸ್ತಾನ), (ಪಿಟಿಐ): ಭಾರತ ಪುರುಷರ ಫುಟ್‌ಬಾಲ್ ತಂಡವು ಸಿಎಎಫ್‌ಎ ನೇಷನ್ಸ್ ಕಪ್ ಟೂರ್ನಿಯಲ್ಲಿ ಸೋಮವಾರ ಮೂರನೇ ಸ್ಥಾನಕ್ಕಾಗಿ ಒಮನ್ ವಿರುದ್ಧ ಸೆಣಸಲಿದೆ.

ಎಂಟು ತಂಡಗಳಿದ್ದ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಭಾರತವು ಸ್ಪರ್ಧಿಸಿತ್ತು. ಎ ಗುಂಪಿನಲ್ಲಿ ಅಗ್ರಸ್ಥಾನ ಪಡೆದ ಉಜ್ಬೇಕಿಸ್ತಾನ (7 ಅಂಕ) ಮತ್ತು ಬಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದ ಇರಾನ್ (7 ಅಂಕ) ಫೈನಲ್‌ನಲ್ಲಿ ಸೆಣಸಲಿವೆ.

ಎರಡು ಗುಂಪುಗಳಲ್ಲಿ ಎರಡನೇ ಸ್ಥಾನ ಪಡೆದ ಭಾರತ (4) ಮತ್ತು ಒಮನ್ (7) ತಂಡಗಳು ಮೂರನೇ ಸ್ಥಾನಕ್ಕಾಗಿ ಪೈಪೋಟಿ ನಡೆಸಲಿವೆ.

ಬಾಕ್ಸಿಂಗ್: ಚಾಹರ್ ಮುನ್ನಡೆ



ಲಿವರ್‌ಪೂಲ್, ಬ್ರಿಟನ್ (ಪಿಟಿಐ): ಭಾರತದ ಲಕ್ಷ್ಯ ಚಾಹರ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

23 ವರ್ಷದ ಚಾಹರ್ ಪುರುಷರ 80 ಕೆಜಿ ವಿಭಾಗದ ಮೊದಲ ಸುತ್ತಿನಲ್ಲಿ 5–0ಯಿಂದ ಏಷ್ಯನ್ ಚಾಂಪಿಯನ್‌ಷಿಪ್ ಚಿನ್ನ ಪದಕವಿಜೇತ ಹುಸೇನ್ ಇಯಾಶೈಶ್ (ಜೋರ್ಡನ್) ಅವರನ್ನು ಮಣಿಸಿದರು.

ಪುರುಷರ 55 ಕೆಜಿ ವಿಭಾಗದಲ್ಲಿ ಪವನ್ ಬರ್ತ್ವಾಲ್ ಅವರ ಅಭಿಯಾನವು ಅಂತ್ಯಗೊಂಡಿತು. ಅವರು 0–5ರಿಂದ ಉಜ್ಬೇಕಿಸ್ತಾನದ ಮಿರ್ಜಾಖಲಿಲೋವ್ ಮಿರಾಜಿಜ್ಬೆಕ್ ವಿರುದ್ಧ ಸೋತರು.

ಕಾರ್ಯದರ್ಶಿ ಇಲೆವೆನ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್ ತಂಡವು ಇಲ್ಲಿನ ಕಿಣಿ ಕ್ರೀಡಾಂಗಣದಲ್ಲಿ ನಡೆದ ಕೆ.ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಗುಜರಾತ್ ಕ್ರಿಕೆಟ್ ಸಂಸ್ಥೆಯನ್ನು 10 ವಿಕೆಟ್‌ಗಳಿಂದ ಮಣಿಸಿತು.

ಕಾರ್ಯದರ್ಶಿ ಇಲೆವೆನ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 373 ರನ್ ಗಳಿಸಿತ್ತು. ಇದಕ್ಕೆ ಉತ್ತರವಾಗಿ ಮೊದಲ ಇನಿಂಗ್ಸ್‌ನಲ್ಲಿ 138 ರನ್‌ಗಳಿಗೆ ಆಲೌಟ್ ಆದ ಗುಜರಾತ್ ತಂಡವು, ಎರಡನೇ ಇನಿಂಗ್ಸ್‌ನಲ್ಲಿ 240 ರನ್ ಗಳಿಸಿತ್ತು. ಹೀಗಾಗಿ, ಕಾರ್ಯದರ್ಶಿ ಇಲೆವೆನ್ ತಂಡದ ಗೆಲುವಿಗೆ 6 ರನ್ ಅಗತ್ಯವಿತ್ತು. ಅದನ್ನು ವಿಕೆಟ್ ನಷ್ಟವಿಲ್ಲದೆ ಗಳಿಸಿ ಜಯ ಸಾಧಿಸಿತು.


ಆಲೂರು ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕೆಎಸ್‌ಸಿಎ ಅಧ್ಯಕ್ಷರ ಇಲೆವೆನ್ ತಂಡವು ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯೊಂದಿಗೆ ಡ್ರಾ ಸಾಧಿಸಿತು. ಐಎಎಫ್ ಕ್ರೀಡಾಂಗ‑ಣದಲ್ಲಿ ನಡೆದ ಪಂದ್ಯದಲ್ಲಿ ಕೆಎಸ್‌ಸಿಎ ಇಲೆವೆನ್ ತಂಡವು ಛತ್ತೀಸಗಡ ರಾಜ್ಯ ಕ್ರಿಕೆಟ್ ಸಂಸ್ಥೆಯೊಂದಿಗೆ ಡ್ರಾ ಮಾಡಿಕೊಂಡಿತು. ಈ ಎರಡೂ ಪಂದ್ಯಗಳಿಗೆ ಮಳೆ ಅಡಚಣೆ ಉಂಟು ಮಾಡಿತ್ತು.

ಸಂಕ್ಷಿಪ್ತ ಸ್ಕೋರ್: ಕಿಣಿ ಕ್ರೀಡಾಂಗಣ: ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್: ಮೊದಲ ಇನಿಂಗ್ಸ್: 373 ಮತ್ತು ಎರಡನೇ ಇನಿಂಗ್ಸ್: 1.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 7. ಗುಜರಾತ್ ಕ್ರಿಕೆಟ್ ಸಂಸ್ಥೆ: 138 ಮತ್ತು 69.2 ಓವರ್‌ಗಳಲ್ಲಿ 240 (ಅಭಿಷೇಕ್ ದೇಸಾಯಿ 47, ಉಮಂಗ್ ಕುಮಾರ್ 73; ಮಾಧವ್ ಪಿ. ಬಜಾಜ್ 73ಕ್ಕೆ 3, ಧ್ರುವ್ ಪಿ. 65ಕ್ಕೆ 4). ಫಲಿತಾಂಶ: ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್ ತಂಡಕ್ಕೆ 10 ವಿಕೆಟ್‌ಗಳ ಜಯ

ಆಲೂರು 2 ಕ್ರೀಡಾಂಗಣ: ಕೆಎಸ್‌ಸಿಎ ಅಧ್ಯಕ್ಷರ ಇಲೆವೆನ್: 250. ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ: 83 ಓವರ್‌ಗಳಲ್ಲಿ 5 ವಿಕೆಟ್‌ಗೆ 303 (ದಿಗ್ವಿಜಯ್ ಪಾಟೀಲ 68, ಮಂದಾರ ಭಂಡಾರಿ 60, ಮಿಜಾನ್ ಸಯ್ಯದ್ ಔಟಾಗದೇ 71) ಫಲಿತಾಂಶ: ಪಂದ್ಯ ಡ್ರಾ.

ಐಎಎಫ್ ಕ್ರೀಡಾಂಗಣ: ಛತ್ತೀಸಗಢ ರಾಜ್ಯ ಕ್ರಿಕೆಟ್ ಸಂಸ್ಥೆ: 254 ಮತ್ತು 41 ಓವರ್‌ಗಳಲ್ಲಿ 3 ವಿಕೆಟ್‌ಗೆ 121. ಕೆಎಸ್‌ಸಿಎ: 250. ಫಲಿತಾಂಶ: ಪಂದ್ಯ ಡ್ರಾ

ಇಂಗ್ಲೆಂಡ್‌ಗೆ ದಾಖಲೆ ಗೆಲುವು



ಜೋಫ್ರಾ ಆರ್ಚರ್

ಸೌತಾಂಪ್ಟನ್ (ಎಎಫ್‌ಪಿ): ಜೋಫ್ರಾ ಆರ್ಚರ್ ಅವರ ಪರಿಣಾಮಕಾರಿ ಬೌಲಿಂಗ್ (18ಕ್ಕೆ 4) ಮತ್ತು ಜೇಕಬ್ ಬೆಥೆಲ್ (110;82ಎ) ಅವರ ಚೊಚ್ಚಲ ಶತಕದ ನೆರವಿನಿಂದ ಇಂಗ್ಲೆಂಡ್ ತಂಡವು ಮೂರನೇ ಏಕದಿನ ಪಂದ್ಯದಲ್ಲಿ ದಾಖಲೆಯ 342 ರನ್‌ಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿತು.

ಇದು ಏಕದಿನ ಕ್ರಿಕೆಟ್ ಇತಿಹಾಸದಲ್ಲೇ ರನ್ ಆಧಾರದಲ್ಲಿ ಅತಿ ದೊಡ್ಡ ಅಂತರದ ಗೆಲುವಾಗಿದೆ. 2023ರಲ್ಲಿ ಭಾರತವು ಶ್ರೀಲಂಕಾ ವಿರುದ್ಧ 317 ರನ್‌ಗಳಿಂದ ಗೆದ್ದಿರುವುದು ಈವರೆಗಿನ ದಾಖಲೆಯಾಗಿತ್ತು.

ಇಂಗ್ಲೆಂಡ್ ತಂಡವು ಬೆಥೆಲ್ ಮತ್ತು ಜೋ ರೂಟ್ (100;96ಎ) ಅವರ ಶತಕಗಳ ನೆರವಿನಿಂದ 50 ಓವರ್‌ಗಳಿಗೆ 415 ರನ್ ಗಳಿಸಿತ್ತು. ಇದಕ್ಕೆ ಉತ್ತರವಾಗಿ ದಕ್ಷಿಣ ಆಫ್ರಿಕಾ ತಂಡ 20.5 ಓವರ್‌ಗಳಲ್ಲಿ 72 ರನ್ ಗಳಿಸಿ ಹೋರಾಟ ಮುಗಿಸಿತು.

ಈ ಸೋಲಿನ ಹೊರತಾಗಿಯೂ ದಕ್ಷಿಣ ಆಫ್ರಿಕಾ ಮೂರು ಪಂದ್ಯಗಳ ಸರಣಿಯನ್ನು 2–1ರಿಂದ ಗೆದ್ದಿತು.

ಹೈದರಾಬಾದ್ ರೇಸ್

ರೆಡ್ ಬಿಷಪ್ ಗೆಲ್ಲುವ ನಿರೀಕ್ಷೆ

ವೈ.ಶಂಕರ್ ರಾವ್ ಮೆಮೋರಿಯಲ್ ಡೆಕ್ಕನ್ ಕೋಲ್ಟ್ಸ್ ಚಾಂಪಿಯನ್‌ಶಿಪ್ ಸ್ಟೇಕ್ಸ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೆಡ್ ಬಿಷಪ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12:25ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬೀಸ್ಟ್ ಮಾಸ್ಟರ್ 2, ರೋಕ್ಸಾನೆ 10, ಫಾಕ್ಸ್ ವರ್ತ್ 3
2ನೇ ರೇಸ್: ಲೇಕ್ ಮೆಷಿಗನ್ 2, ಟೂಟ್ಸಿ ಡಾರ್ಲಿಂಗ್ 9. ಲಾ ಕ್ವಿಂಟಾ 1
3ನೇ ರೇಸ್: ಕಲಾಂಜಿಂಜಿ 2, ಬ್ಲೂ ಪ್ಯಾಂಥೆರಸ್ 5, ಗ್ರೇಟ್ ಗೀವರ್ 1
4ನೇ ರೇಸ್: ಟೇಕ್ ಎ ಬ್ರೀತ್ 5, ಶುಭ್‌ರಕ್ 6, ಸ್ವೀಟ್ ಡ್ಯಾನ್ಸರ್ 1
5ನೇ ರೇಸ್: ಮಿಸ್ ಸ್ಮೈಲಿ ಏಂಜೆಲ್ 4, ವಾಕಿಂಗ್ ಥಂಡರ್ 3, ಪೆಟಾಲುಮ 5
6ನೇ ರೇಸ್: ಆಯುಷ್ಮಾನ್ 8, ಗ್ಲೋರಿಯಸ್ ಪವರ್ 3, ಸ್ಟಾರ್ ಫಾರೆವರ್ 2
7ನೇ ರೇಸ್: ರೆಡ್ ಬಿಷಪ್ 7, ಪ್ರೊಕೊಫಿನ್ 5, ಮೈಂಡ್‌ಫುಲ್ 4
8ನೇ ರೇಸ್: ನಾನ್‌ಪರೈಲ್ 2, ಹುಗ್ ಕಾರ್ಪೆಟ್ 3, ಲಿವರ್‌ಮೋರ್ 9
9ನೇ ರೇಸ್: ನೂರಿಯನ್ 4, ಆಲ್ವೇಸ್ ಸ್ಪೆಷಲ್ 2, ಐಲಿನ್ 1

ಉತ್ತಮ ಬೆಟ್: ನಾನ್‌ಪರೈಲ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	2,3,4	4,5,6	7,8,9

‘ಒಳ್ಳೆ ಕಥೆಯಿರುವ ಸಿನಿಮಾದಲ್ಲಿ ನಟಿಸುವೆ’


ಐಶ್ವರ್ಯಾ ಪಿಸ್ಸೆ

ಸಿನಿಮಾ ಕ್ಷೇತ್ರದಿಂದ ಧಾರಾವಾಹಿ ಲೋಕಕ್ಕೆ ಕಾಲಿಟ್ಟು ಜನಪ್ರಿಯರಾದ ನಟಿ ಐಶ್ವರ್ಯಾ ಪಿಸ್ಸೆ ಕಿರುತೆರೆ ಜತೆಗೆ ಮತ್ತೆ ಹಿರಿತೆರೆಯಲ್ಲಿಯೂ ಸಕ್ರಿಯರಾಗುತ್ತಿದ್ದಾರೆ. ಅವರು ತಮ್ಮ ಸಿನಿಪಯಣ ಕುರಿತು ಮಾತನಾಡಿದ್ದಾರೆ.

‘**ಸಿನಿಮಾವೊಂದು** ಚಿತ್ರೀಕರಣ ಪೂರ್ಣಗೊಂಡು ಬಿಡುಗಡೆಗೆ ಸಿದ್ಧವಿದೆ. ಶೀರ್ಷಿಕೆ ಅಂತಿಮವಾಗಿಲ್ಲ. ಶೀಘ್ರದಲ್ಲಿ ಸಿನಿಮಾ ತಂಡದಿಂದ ಚಿತ್ರದ ಇನ್ನಷ್ಟು ವಿವರಗಳು ಹೊರಬರಲಿವೆ. ಪೂರ್ಣಪ್ರಮಾಣದ ನಾಯಕಿಯಾಗಿ ಇದು ನನ್ನ ಮೊದಲ ಸಿನಿಮಾ. ಜತೆಗೆ ಎರಡು ಧಾರಾವಾಹಿಗಳಲ್ಲಿ ನಟಿಸುತ್ತಿರುವೆ. ಹೀಗಾಗಿ ಸಿನಿಮಾಕ್ಕೆ ಹೆಚ್ಚು ಸಮಯ ನೀಡಲು ಆಗುತ್ತಿಲ್ಲ’ ಎಂದು ಮಾತು ಪ್ರಾರಂಭಿಸಿದರು ಐಶ್ವರ್ಯಾ.

‘ಸಂತು ಸ್ಟ್ರೈಟ್ ಫಾರ್ವರ್ಡ್’ ಚಿತ್ರದಲ್ಲಿ ಯಶ್ ತಂಗಿಯಾಗಿ ಇವರ ಸಿನಿಪಯಣ ಪ್ರಾರಂಭವಾಯಿತು. ಬಳಿಕ ಶಿವರಾಜ್‌ಕುಮಾರ್ ನಟನೆಯ ‘ಶ್ರೀಕಂಠ’ ಚಿತ್ರದಲ್ಲಿಯೂ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡರು. ಆದರೆ ಇವರು ಸಿನಿಮಾಕ್ಕಿಂತ ಹೆಚ್ಚಾಗಿ ಗುರುತಿಸಿಕೊಂಡಿದ್ದು ಕಿರುತೆರೆಯಲ್ಲಿ.

‘ನನಗೆ ಸಿನಿಮಾಗಳಿಗಿಂತ ಧಾರಾವಾಹಿಗಳಲ್ಲಿಯೇ ಒಲವು ಹೆಚ್ಚು. ಪ್ರಸ್ತುತ ‘ಮಾಂಗಲ್ಯ’ ಧಾರಾವಾಹಿಯಲ್ಲಿ ನಟಿಸುತ್ತಿರುವೆ. ಜತೆಗೆ ತೆಲುಗಿನಲ್ಲೊಂದು ಧಾರಾವಾಹಿ ಸಾವಿರ ಸಂಚಿಕೆಗಳನ್ನು ಪೂರೈಸಿದೆ. ನನ್ನನ್ನು ಜನ ಸಿನಿಮಾಕ್ಕಿಂತ ಹೆಚ್ಚಾಗಿ ಕಿರುತೆರೆಯಿಂದಲೇ ಗುರುತಿಸುತ್ತಾರೆ ಅನ್ನಿಸುತ್ತದೆ. ಇತ್ತೀಚೆಗಷ್ಟೇ ‘ಮಾಂಗಲ್ಯ’ ಧಾರಾವಾಹಿಯ ಪ್ರಚಾರಕ್ಕಾಗಿ ಧಾರವಾಡಕ್ಕೆ ಹೋಗಿದ್ದೆವು. ಅಲ್ಲಿನ ಜನರ ಪ್ರೀತಿ ಕಂಡು ಅಚ್ಚರಿಯಾಯಿತು. ಅವರು ‘ಮಯೂರಿ’ ಪಾತ್ರಕ್ಕೆ ನೀಡುತ್ತಿರುವ ಪ್ರೀತಿಗೆ ನಿಜಕ್ಕೂ ನಾನು ಋಣಿ. ಎಲ್ಲಿಗೆ ಹೋದರೂ ನನ್ನ ಧಾರಾವಾಹಿ ಪಾತ್ರಗಳಿಂದ ಗುರುತು ಹಿಡಿಯುತ್ತಾರೆ’ ಎನ್ನುತ್ತಾರೆ.

‘ಅನುರೂಪ’ ಧಾರಾವಾಹಿ ಮೂಲಕ ಕಿರುತೆರೆಗೆ ಕಾಲಿಟ್ಟರು. ಅದಾದ ಬಳಿಕ ‘ಗಿರಿಜಾ ಕಲ್ಯಾಣ’, ‘ಸರ್ವಮಂಗಲ ಮಾಂಗಲ್ಯೆ’, ‘ಸುಂದರಿ’ ಧಾರಾವಾಹಿಗಳಲ್ಲಿ ನಟಿಸಿದರು. ‘ಸುಂದರಿ’ ಧಾರಾವಾಹಿಯಲ್ಲಿ ಮೈಬಣ್ಣ ಕಪ್ಪಾಗಿರುವ ಹುಡುಗಿ ಪಾತ್ರದಲ್ಲಿ ಕಾಣಿಸಿಕೊಂಡರು. ‘ಈ ಪಾತ್ರ ರೂಪಕ್ಕಿಂತ ನಟನೆ ಎಷ್ಟು ಮುಖ್ಯ ಎಂದು ತೋರಿಸಿತು. ನೋಡಲು ಸುಂದರವಾಗಿದ್ದರೂ ಪ್ರತಿನಿತ್ಯ ಕಪ್ಪು ಹುಡುಗಿಯಾಗಿ ಕಾಣಿಸಿಕೊಳ್ಳುವುದು ಸವಾಲಾಗಿತ್ತು. ಮೂರು ವರ್ಷಗಳ ಕಾಲ ಈ ಪಾತ್ರದಲ್ಲಿ ಕಾಣಿಸಿಕೊಂಡೆ’ ಎಂದರು.

‘ಸಾಕಷ್ಟು ಸಿನಿಮಾ ಅವಕಾಶಗಳು ಬರುತ್ತವೆ. ತೆಲುಗಿನಲ್ಲಿ ಸ್ಟಾರ್ ನಟರ ಸಿನಿಮಾಗಳಿಂದಲೇ ಅವಕಾಶ ಸಿಕ್ಕಿತ್ತು. ಆದರೆ ಪಾತ್ರಪೋಷಣೆ ಉತ್ತಮವಾಗಿರುವುದಿಲ್ಲ. ಹೀಗಾಗಿ ತಿರಸ್ಕರಿಸುತ್ತೇನೆ. ನನಗೆ ಸಿನಿಮಾದಲ್ಲಿ ಪಾತ್ರ ಗಟ್ಟಿಯಾಗಿರಬೇಕು. ಇಲ್ಲವಾದಲ್ಲಿ ಕಿರುತೆರೆಯಂತೂ ಇದ್ದೇ ಇದೆ. ಕೆಲ ಸಿನಿಮಾ ಕಥೆಗಳನ್ನು ಕೇಳಿರುವೆ. ಒಂದೆರಡು ಅಂತಿಮ ಹಂತದಲ್ಲಿವೆ. ಕಿರುತೆರೆ ಜತೆಗೆ ಇವುಗಳನ್ನು ನಿಭಾಯಿಸುವೆ’ ಎಂದು ಮಾತಿಗೆ ವಿರಾಮವಿತ್ತರು.

ಪ್ರವೀಣ್, ಉಪೇಂದ್ರ, ಪ್ರಸನ್ನ ಕುಮಾರ್



ಗ್ಯಾಂಗ್ಸ್ ಆಫ್ ಯುಕೆಗೆ ಉಪೇಂದ್ರ ಸಾಥ್

‘**ಡೆಡ್ಲಿ ಸೋಮ**’, ‘ಮಾದೇಶ’ ಖ್ಯಾತಿಯ ರವಿ ಶ್ರೀವತ್ಸ ನಿರ್ಮಾಣ ಹಾಗೂ ನಿರ್ದೇಶನದ ‘ಗ್ಯಾಂಗ್ಸ್ ಆಫ್ ಯುಕೆ’ ಚಿತ್ರದ ಹಾಡು ಹಾಗೂ ಟ್ರೇಲರ್‌ಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ನಟ ಉಪೇಂದ್ರ ಟ್ರೇಲರ್ ಬಿಡುಗಡೆಗೊಳಿಸಿ ಚಿತ್ರತಂಡದ ಸದಸ್ಯರನ್ನು ಅಭಿನಂದಿಸಿದರು.

‘ನಾವು ಕಾಶೀನಾಥ್ ಸರ್ ಸ್ಕೂಲ್‌ನಿಂದ ಬಂದ ನಂತರ ನಮಗೆ ಇನ್ನೊಂದು ಸ್ಕೂಲ್ ಇದೆ ಅಂತ ಗೊತ್ತಾಯ್ತು. ಆ ಶಾಲೆಯಲ್ಲಿ ಇದ್ದವರೆಲ್ಲ ಈ ಸಿನಿಮಾ ತಂಡದಲ್ಲಿದ್ದಾರೆ. ರವಿ ಶ್ರೀವತ್ಸ ತುಂಬಾ ಭಾವುಕ ಜೀವಿ. ಅವರ ಸಿನಿಮಾ ಕೂಡ ಹಾಗೇ ಇರುತ್ತದೆ. ಎಲ್ಲಾ ಕಲಾವಿದರು ಚೆನ್ನಾಗಿ ನಟಿಸಿದ್ದಾರೆ. ನಾನು ‘ಎ’ ಸಿನಿಮಾ ಮಾಡಿದಾಗಲೂ ಇಂದು ರವಿ ಶ್ರೀವತ್ಸ ಈ ಚಿತ್ರಕ್ಕಾಗಿ ಎದುರಿಸುತ್ತಿರುವ ಕಷ್ಟಗಳನ್ನು ಎದುರಿಸಿದ್ದೆ. ತಂಡದಲ್ಲೊಂದು ಧನಾತ್ಮಕ ಶಕ್ತಿ ಕಾಣುತ್ತಿದೆ. ಶುಭವಾಗಲಿ’ ಎಂದರು ಉಪೇಂದ್ರ.

ಬಾಗಲಕೋಟೆಯ ಪಿಲ್ಲಾರಿ ಫಾಲ್ಸ್‌ನಲ್ಲಿ ನಡೆದ ನೈಜ ಘಟನೆ ಇಟ್ಟುಕೊಂಡು ಈ ಸಿನಿಮಾ ಸಿದ್ಧಗೊಂಡಿದೆ. ರವಿ ಶ್ರೀವತ್ಸ ಹಾಗೂ ಎಂ.ಎಸ್. ರಮೇಶ್ ಜತೆಗೂಡಿ ಚಿತ್ರಕಥೆ, ಸಂಭಾಷಣೆ ಹೆಣೆದಿದ್ದಾರೆ.

‘ಹಿಂಸೆ ಹೆಚ್ಚಾಗಿದೆ ಎಂಬ ಕಾರಣ ನೀಡಿ ನಮ್ಮ ಚಿತ್ರವನ್ನು ಪ್ರಾದೇಶಿಕ ಸೆನ್ಸಾರ್ ಮಂಡಳಿ ಬ್ಯಾನ್ ಮಾಡಿದ್ದಲ್ಲದೆ, ಪರಿಶೀಲನಾ ಸಮಿತಿ ಬಳಿ ಹೋಗಿ ಸೆನ್ಸಾರ್ ಮಾಡಿಸಿಕೊಳ್ಳಿ ಎಂದರು. ನಾವು ಕಷ್ಟಪಟ್ಟು ನಿರ್ಮಿಸಿದ ಸಿನಿಮಾವನ್ನು ಸೆನ್ಸಾರ್ ಅಧಿಕಾರಿಗಳು ಪೂರ್ತಿ ವೀಕ್ಷಿಸದೆ ಬೇಜವಾಬ್ದಾರಿತನ ಮೆರೆದಿದ್ದಾರೆ. ಇದರಿಂದ ನನ್ನ ಮನಸಿಗೆ ತುಂಬಾ ನೋವಾಯಿತು. ನಂತರ ಪರಿಶೀಲನಾ ಸಮಿತಿಯಿಂದ ನಮ್ಮ ಚಿತ್ರವನ್ನು ಸೆನ್ಸಾರ್ ಮಾಡಿಸಿಕೊಂಡೆವು’ ಎಂದು ಸೆನ್ಸಾರ್ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು ರವಿ ಶ್ರೀವತ್ಸ.

ಒರಟ ಪ್ರಶಾಂತ್, ಜ್ಯೋತಿ ಶೆಟ್ಟಿ, ಕೋಟೆ ಪ್ರಭಾಕರ್, ಪದ್ಮಾ ವಾಸಂತಿ ಮುಂತಾದವರು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಎಲ್.ಎನ್. ರೆಡ್ಡಿ ನಿರ್ಮಾಣದಲ್ಲಿ ಕೈಜೋಡಿಸಿದ್ದಾರೆ.


ದೇಶಭಕ್ತಿ ಸಾರುವ ಹಾಡು


ಮಹೇಂದ್ರ ಮುನೋತ್

ಕನ್ನಡದ ಕೆಲ ಸಿನಿಮಾಗಳನ್ನು ನಿರ್ಮಿಸಿ, ನಟಿಸಿರುವ ಮಹೇಂದ್ರ ಮುನೋತ್ ಅವರ ‘ಭರತ್ ನಾಮ್ ಸಮ್ಮಾನ್’ ದೇಶಭಕ್ತಿಯ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಭಾರತವನ್ನು ಭಾರತವೆಂದೇ ಕರೆಯಿರಿ ಎಂಬ ಸಂದೇಶ ಹೊಂದಿರುವ ಈ ಹಾಡು 22 ಭಾಷೆಗಳಲ್ಲಿ ಬಿಡುಗಡೆಗೊಂಡಿದೆ. ಮಹೇಂದ್ರ ಮುನೋತ್ ವಿಡಿಯೊದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮೊಹಮ್ಮದ್ ಸಲಾಮತ್, ದೀಪಕ್, ರೇಖಾ ರಾವ್ ಮೊದಲಾದವರು ಹಾಡಿಗೆ ಧ್ವನಿಯಾಗಿದ್ದಾರೆ. ಗಗನ್ ಆರ್. ಛಾಯಾಚಿತ್ರಗ್ರಹಣವಿದ್ದು, ಬಿ.ಪಿ.ಹರಿಹರನ್ ಈ ಗೀತೆಯನ್ನು ನಿರ್ದೇಶಿಸಿದ್ದಾರೆ. ಕರ್ನಾಟಕದಿಂದ ರಾಜಸ್ಥಾನದವರೆಗೆ ಹಲವು ತಾಣಗಳಲ್ಲಿ ಹಾಡನ್ನು ಚಿತ್ರೀಕರಿಸಲಾಗಿದೆ.

‘ಹಲೋ 123’ ಎನ್ನುತ್ತಿರುವ ಭುವನ್ ಪೊನ್ನಣ್ಣ



ನಟ ಭುವನ್ ಪೊನ್ನಣ್ಣ ಆರು ವರ್ಷಗಳ ಬಳಿಕ ಚಿತ್ರರಂಗಕ್ಕೆ ಮತ್ತೆ ಮರಳಿದ್ದಾರೆ. ಯೋಗರಾಜ್ ಭಟ್ ನಿರ್ದೇಶನದಲ್ಲಿ ‘ಹಲೋ 123’ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಇತ್ತೀಚೆಗಷ್ಟೇ ಸಿನಿಮಾ ಶೀರ್ಷಿಕೆ ಘೋಷಣೆಗೊಂಡಿದೆ.

ಮ್ಯೂಸಿಕಲ್ ಲವ್ ಸ್ಟೋರಿ ಹೊಂದಿರುವ ಕಥೆಗೆ ವಿ.ಹರಿಕೃಷ್ಣ ಸಂಗೀತ ನಿರ್ದೇಶನವಿದ್ದು, ವಿಜಯ್ ಟಾಟಾ ಬಂಡವಾಳ ಹೂಡುತ್ತಿದ್ದಾರೆ. ‘ರಾಂಧವ’ ಚಿತ್ರದ ಬಳಿಕ ಸಣ್ಣ ವಿರಾಮ ತೆಗೆದುಕೊಂಡೆ. ಈ ಸಮಯದಲ್ಲಿ ನನ್ನ ಉದ್ಯಮವನ್ನು ಬಲಪಡಿಸಿದೆ. ಮದುವೆಯೂ ಆಗಿ, ಮಗು ಆಯಿತು. ಕುಟುಂಬಕ್ಕಾಗಿ ಸಮಯ ಮೀಸಲಿಡಬೇಕು ಅಂತ ಯೋಚಿಸಿ ಹಲವು ಸಿನಿಮಾಗಳನ್ನು ಕೈಬಿಟ್ಟೆ. ಈಗ ಮಗಳು ಸ್ವಲ್ಪ ದೊಡ್ಡವಳಾಗಿದ್ದಾಳೆ. ಕುಟುಂಬವನ್ನು ಪತ್ನಿ ಹರ್ಷಿಕಾ ನಿಭಾಯಿಸುತ್ತಿದ್ದಾಳೆ. ಹೀಗಾಗಿ ಮತ್ತೆ ಅದೃಷ್ಟ ಪರೀಕ್ಷೆಗಿಳಿದಿದ್ದೇನೆ’ ಎಂದರು ಭುವನ್.

‘ಪ್ರೇಮಕಥೆಯೊಂದಿಗೆ ಸಾಕಷ್ಟು ಮನರಂಜನೀಯ ಅಂಶಗಳೂ ಸಿನಿಮಾದಲ್ಲಿರಲಿವೆ. ಯೋಗರಾಜ್ ಭಟ್–ವಿ.ಹರಿಕೃಷ್ಣ ಜೋಡಿಯ ಹಾಡುಗಳು ಚಿತ್ರದ ಮತ್ತೊಂದು ಆಕರ್ಷಣೆ. ಮಲೆನಾಡ ಹಸಿರು ಹೊದಿಕೆ, ಕಾಡುವ ಪಾತ್ರಗಳು, ಭಾವುಕ ಕ್ಷಣಗಳು ಈ ಕಥೆಯಲ್ಲಿವೆ. ಇಂದಿನ ಜೆನ್-ಜೀಗಳಿಗೆ ಇಷ್ಟವಾಗುವ ಕಥೆ. ಅಕ್ಟೋಬರ್ ಮೊದಲ ವಾರದಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಉಳಿದ ಪಾತ್ರಗಳ ಆಯ್ಕೆ ನಡೆಯುತ್ತಿದೆ’ ಎಂದಿದೆ ಚಿತ್ರತಂಡ.

ದರ ಇಳಿಕೆ: ಸಿಬಿಐಸಿ ನಿಗಾ

‘ತೆರಿಗೆ ಕಡಿತದ ಪ್ರಯೋಜನ ಗ್ರಾಹಕರಿಗೆ ವರ್ಗವಾಗುವ ವಿಶ್ವಾಸ’



ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇಳಿಕೆಯು ಜಾರಿಗೆ ಬಂದ ನಂತರದಲ್ಲಿ, ಉತ್ಪನ್ನಗಳ ಬೆಲೆಯನ್ನು ತಗ್ಗಿಸದೆ ಇರುವುದಕ್ಕೆ ಸಂಬಂಧಿಸಿದ ದೂರುಗಳನ್ನು ಉದ್ಯಮ ವಲಯದ ಗಮನಕ್ಕೆ ತರಲಾಗುತ್ತದೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಹಾಗೂ ಸುಂಕಗಳ ಮಂಡಳಿಯ (ಸಿಬಿಐಸಿ) ಮುಖ್ಯಸ್ಥ ಸಂಜಯ್ ಕುಮಾರ್ ಅಗರ್ವಾಲ್ ಹೇಳಿದ್ದಾರೆ.

ವಿವಿಧ ಉತ್ಪನ್ನಗಳು, ಸೇವೆಗಳ ಮೇಲಿನ ತೆರಿಗೆಯನ್ನು ತಗ್ಗಿಸುವ ತೀರ್ಮಾನವನ್ನು ಜಿಎಸ್‌ಟಿ ಮಂಡಳಿಯು ಕಳೆದ ವಾರ ತೆಗೆದುಕೊಂಡಿದೆ. ಪರಿಷ್ಕೃತ ತೆರಿಗೆ ದರವು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ.

ನಿತ್ಯದ ಬಳಕೆಯ ಬಹುತೇಕ ಉತ್ಪನ್ನಗಳ ಮೇಲೆ ಶೇಕಡ 5ರಷ್ಟು ತೆರಿಗೆ ಇರಲಿದೆ. ಇನ್ನುಳಿದ ಉತ್ಪನ್ನಗಳು, ಸೇವೆಗಳ ಮೇಲೆ ಶೇ 18ರಷ್ಟು ತೆರಿಗೆ ಇರಲಿದೆ. ವೈಯಕ್ತಿಕ ಆರೋಗ್ಯ ವಿಮೆ, ಜೀವ ವಿಮೆ ಮೇಲೆ ಶೂನ್ಯ ತೆರಿಗೆ ಇರಲಿದೆ.

ತೆರಿಗೆ ತಗ್ಗಿಸುವ ತೀರ್ಮಾನವನ್ನು ಜಿಎಸ್‌ಟಿ ಮಂಡಳಿಯು ಈ ಹಿಂದೆ ತೆಗೆದುಕೊಂಡಾಗ, ಉದ್ಯಮಗಳು ತೆರಿಗೆ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಿವೆ. ಮಾರುಕಟ್ಟೆಯಲ್ಲಿನ ಸ್ಪರ್ಧಾತ್ಮಕ ಶಕ್ತಿಗಳು ತೆರಿಗೆ ಇಳಿಕೆಯ ಪ್ರಯೋಜನವು ಗ್ರಾಹಕರಿಗೆ ಸಿಗುವಂತೆ ಮಾಡುತ್ತವೆ ಎಂದು ಅಗರ್ವಾಲ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ತೆರಿಗೆ ಇಳಿಕೆಯ ಪ್ರಯೋಜನವನ್ನು ಉದ್ಯಮಗಳು ಗ್ರಾಹಕರಿಗೆ ವರ್ಗಾಯಿಸುತ್ತವೆ ಎಂಬ ವಿಶ್ವಾಸ ನಮ್ಮದು. ನಮಗೆ ಏನಾದರೂ ದೂರುಗಳು ಬಂದಲ್ಲಿ, ಅದನ್ನು ನಾವು ಉದ್ಯಮದ ಪ್ರಾತಿನಿಧಿಕ ಸಂಸ್ಥೆಗಳ ಜೊತೆ ಚರ್ಚಿಸುತ್ತೇವೆ’ ಎಂದು ಅವರು ಹೇಳಿದ್ದಾರೆ.

ಜಿಎಸ್‌ಟಿ ಜಾರಿಗೆ ಬಂದ ಆರಂಭಿಕ ವರ್ಷಗಳ ಅನುಭವವನ್ನು ಹಂಚಿಕೊಂಡ ಅಗರ್ವಾಲ್ ಅವರು, ‘ಲಾಭಕೋರತನದ ಬಗ್ಗೆ ದೂರು ಸಲ್ಲಿಸಲು ವ್ಯವಸ್ಥೆ ರೂಪಿಸಿದ್ದರೂ, 2017, 2018 ಮತ್ತು 2019ರಲ್ಲಿ ತೆರಿಗೆ ಇಳಿಕೆ ಮಾಡಿದ್ದಾಗ ಹೆಚ್ಚಿನ ದೂರುಗಳು ಬಂದಿರಲಿಲ್ಲ’ ಎಂದಿದ್ದಾರೆ.

‘ದರ ಇಳಿಕೆಯ ಪ್ರಯೋಜನವನ್ನು ಉದ್ದಿಮೆಗಳು ಗ್ರಾಹಕರಿಗೆ ಬಹುತೇಕ ವರ್ಗಾವಣೆ ಮಾಡಿದ್ದವು ಎಂಬ ಭಾವನೆಯನ್ನು ಇದು ನಮ್ಮಲ್ಲಿ ಮೂಡಿಸಿದೆ. ಹೀಗಾಗಿ ಈ ಬಾರಿಯೂ ಪರಿಸ್ಥಿತಿ ಭಿನ್ನವಾಗಿರುತ್ತದೆ ಎಂದು ನಾವು ನಿರೀಕ್ಷಿಸಿಲ್ಲ’ ಎಂದು ಅಗರ್ವಾಲ್ ಹೇಳಿದ್ದಾರೆ.

ಜಿಎಸ್‌ಟಿ ದರ ಇಳಿಕೆಯ ಪ್ರಯೋಜನವನ್ನು ವರ್ತಕರು ಹಾಗೂ ಉದ್ದಿಮೆಗಳು ಗ್ರಾಹಕರಿಗೆ ವರ್ಗಾವಣೆ ಮಾಡಬೇಕು ಎಂಬುದಾಗಿ ಜಿಎಸ್‌ಟಿ ಕಾನೂನು ಹೇಳುತ್ತದೆ.

ಭಾರತದ ವಿರುದ್ಧ ನವರೊ ವಾಗ್ದಾಳಿ

ಪ್ರಜಾವಾಣಿ ವಾರ್ತೆ/ಪಿಟಿಐ


ಪೀಟರ್ ನವರೊ

ನ್ಯೂಯಾರ್ಕ್: ರಷ್ಯಾದಿಂದ ತೈಲ ಖರೀದಿ ಮುಂದುವರಿಸಿರುವ ಭಾರತದ ವಿರುದ್ಧ ಶ್ವೇತಭವನದ ವ್ಯಾಪಾರ ಸಲಹೆಗಾರ ಪೀಟರ್ ನವರೊ ಪುನಃ ವಾಗ್ದಾಳಿ ಮಾಡಿದ್ದಾರೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ನವರೊ ಅವರು ಇತ್ತೀಚೆಗೆ ಭಾರತದ ವಿರುದ್ಧ ‘ಎಕ್ಸ್’ನಲ್ಲಿ ಸರಣಿ ಪೋಸ್ಟ್‌ಗಳ ಮೂಲಕ ಟೀಕೆ ಮಾಡಿದ್ದರು.

ಈ ಆರೋಪಗಳ ಕುರಿತು ಸತ್ಯಾಸತ್ಯತೆ ಪರಿಶೀಲಿಸಿರುವ ‘ಎಕ್ಸ್’, ‘ನವರೊ ಆರೋಪಗಳು ಬೂಟಾಟಿಕೆಯಿಂದ ಕೂಡಿವೆ. ಸಾರ್ವಭೌಮ ದೇಶವಾಗಿರುವ ಭಾರತವು ತನ್ನ ಇಂಧನ ಭದ್ರತೆಗಾಗಿ ಕಾನೂನುಬದ್ಧವಾಗಿಯೇ ರಷ್ಯಾದಿಂದ ತೈಲ ಖರೀದಿಸುತ್ತಿದೆ. ಇದು ಯಾವುದೇ ರೀತಿಯ ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆ ಆಗುವುದಿಲ್ಲ’ ಎಂದು ಹೇಳಿದೆ.

‘ರಷ್ಯಾದಿಂದ ತೈಲ ಖರೀದಿಸದಂತೆ ಭಾರತದ ಮೇಲೆ ಒತ್ತಡ ಹೇರುತ್ತಿರುವ ಅಮೆರಿಕವು ಶತಕೋಟಿ ಡಾಲರ್‌ಗಳಷ್ಟು ಮೌಲ್ಯದ ಯುರೇನಿಯಂ ಸೇರಿದಂತೆ ಹಲವು ಸರಕುಗಳನ್ನು ರಷ್ಯಾದಿಂದ ಆಮದು ಮಾಡಿಕೊಳ್ಳುವುದನ್ನು ಮುಂದುವರಿಸಿದೆ. ಇದು ಅಮೆರಿಕದ ದ್ವಂದ್ವ ನೀತಿಯನ್ನು ಬಹಿರಂಗಪಡಿಸುತ್ತದೆ’ ಎಂದು ತಿಳಿಸಿದೆ.

‘ಎಕ್ಸ್’ನ ಈ ಪೋಸ್ಟ್‌ಗಳಿಂದ ಕೆಂಡಾಮಂಡಲರಾಗಿರುವ ನವರೊ, ‘ಮಸ್ಕ್ ಅವರು ಜನರ ಪೋಸ್ಟ್‌ಗಳನ್ನು ಪ್ರಚಾರಕ್ಕೆ ಬಳಸುತ್ತಿದ್ದಾರೆ. ಇದು ಕೆಟ್ಟ ಟಿಪ್ಪಣಿಯಾಗಿದೆ. ಭಾರತವು ಲಾಭದ ಉದ್ದೇಶದಿಂದ ಮಾತ್ರ ರಷ್ಯಾದಿಂದ ತೈಲ ಖರೀದಿಸುತ್ತಿದೆ. ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸುವ ಮೊದಲು ಭಾರತವು ರಷ್ಯಾದಿಂದ ಯಾವುದೇ ತೈಲ ಖರೀದಿಸುತ್ತಿರಲಿಲ್ಲ’ ಎಂದು ಪುನರುಚ್ಚರಿಸಿದ್ದಾರೆ.

ಮುಂದುವರಿದು, ‘ಭಾರತದ ಸರ್ಕಾರಿ ಯಂತ್ರವು ರಷ್ಯಾದತ್ತ ವಾಲುತ್ತಿದೆ. ಉಕ್ರೇನ್ ಜನರನ್ನು ಕೊಲ್ಲುವುದನ್ನು ತಡೆಯಿರಿ ಮತ್ತು ಅಮೆರಿಕದ ಜನರ ಉದ್ಯೋಗಗಳನ್ನು ಕಸಿದುಕೊಳ್ಳುವುದನ್ನು ನಿಲ್ಲಿಸಿ’ ಎಂದು ನವರೊ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ನವರೊ ಅವರ ಆರೋಪವನ್ನು ಭಾರತ ತಿರಸ್ಕರಿಸಿದೆ. ಅಲ್ಲದೆ ಅದು ತಪ್ಪಾದ ಮತ್ತು ದಾರಿತಪ್ಪಿಸುವ ಆರೋಪ ಎಂದು ಹೇಳಿದೆ.

ರಷ್ಯಾದಿಂದ ತೈಲ ಖರೀದಿಸುವುದು ತನ್ನ ರಾಷ್ಟ್ರೀಯ ಹಿತಾಸಕ್ತಿ ಮತ್ತು ಮಾರುಕಟ್ಟೆಯ ಚಲನಶೀಲತೆಯನ್ನು ಅವಲಂಬಿಸಿದೆ ಎಂದು ಭಾರತ ಈಗಾಗಲೇ ಸ್ಪಷ್ಟಪಡಿಸಿದೆ.

ರಾಜೀನಾಮೆಗೆ ಮುಂದಾದ ಜಪಾನ್ ಪ್ರಧಾನಿ


ಶಿಗೆರು ಇಶಿಬಾ

ಟೋಕಿಯೊ (ಎಎಫ್‌ಪಿ): ಜಪಾನ್ ಪ್ರಧಾನಿ ಶಿಗೆರು ಇಶಿಬಾ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಭಾನುವಾರ ಘೋಷಿಸಿದ್ದಾರೆ.

ಅಧಿಕಾರಕ್ಕೇರಿ ಒಂದು ವರ್ಷ ಪೂರೈಸುವುದಕ್ಕಿಂತ ಮುಂಚೆಯೇ ಸಂಸತ್ತಿನ ಉಭಯ ಸದನಗಳಲ್ಲಿ ಅವರು ಬಹುಮತ ಕಳೆದುಕೊಂಡಿದ್ದಾರೆ.

ಪ್ರಪಂಚದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿರುವ ಜಪಾನ್‌ನಲ್ಲಿ ಆಹಾರ ವಸ್ತುಗಳ ಬೆಲೆ ಏರುತ್ತಿದ್ದು, ಕಾರು ಉದ್ಯಮದ ಮೇಲೆ ಅಮೆರಿಕ ಹೇರಿದ ಸುಂಕವು ಆರ್ಥಿಕತೆಗೆ ಹೊಡೆತ ನೀಡಿದೆ. ಈ ನಡುವೆಯೆ ಪ್ರಧಾನಿ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ.

‘ಈಗ ಅಮೆರಿಕದ ಸುಂಕ ಕ್ರಮಗಳ ಕುರಿತ ಮಾತುಕತೆಗಳು ಒಂದು ನಿರ್ಣಾಯಕ ಹಂತಕ್ಕೆ ಬಂದಿವೆ. ನಾನು ಪಕ್ಕಕ್ಕೆ ಸರಿದು ಮುಂದಿನ ತಲೆಮಾರಿಗೆ ದಾರಿ ಮಾಡಿಕೊಡಲು ಇದು ಸರಿಯಾದ ಸಮಯ ಎಂದು ತೀರ್ಮಾನಿಸಿದ್ದೇನೆ’ ಎಂದು ಇಶಿಬಾ ಅವರು ಹೇಳಿದ್ದಾರೆ.

ಜುಲೈನಲ್ಲಿ ಮಾಡಿಕೊಂಡ ಒಪ್ಪಂದದ ಭಾಗವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಜಪಾನ್ ಕಾರುಗಳ ಮೇಲಿನ ಸುಂಕವನ್ನು ಕಡಿಮೆ ಮಾಡುವ ಆದೇಶಕ್ಕೆ ಸಹಿ ಹಾಕಿದ್ದಾರೆ.

ನೇಪಾಳ–ಚೀನಾ ಸಮರಾಭ್ಯಾಸ ಆರಂಭ

ಕಠ್ಮಂಡು (ಪಿಟಿಐ): ನೇಪಾಳ ಮತ್ತು ಚೀನಾವು ತಮ್ಮ 10 ದಿನಗಳ ಸಮರಾಭ್ಯಾಸವನ್ನು ಭಾನುವಾರ ಆರಂಭಿಸಿವೆ. ‘ಸಾಗರಮಾತಾ’ ಹೆಸರಿನ ಐದನೇ ಸಮರಾಭ್ಯಾಸ ಇದಾಗಿದೆ.

‘ವಿಪತ್ತು ನಿರ್ವಹಣೆ, ವಿಶ್ವಸಂಸ್ಥೆಯ ಶಾಂತಿ ಪಾಲನಾ ಕಾರ್ಯಕ್ರಮ ಮತ್ತು ಭಯೋತ್ಪಾದನೆ ನಿಗ್ರಹ ಸೇರಿ ಹಲವು ವಿಷಯಗಳ ಕುರಿತು ಸಮರಾಭ್ಯಾಸ ನಡೆಯಲಿದೆ’ ಎಂದು ನೇಪಾಳ ಸೇನೆ ತಿಳಿಸಿದೆ.

ದುರ್ಗಾಪೂಜೆಗೆ ಪ್ರಭಾವಳಿ

ಪಿಟಿಐ ಚಿತ್ರ


ಪಶ್ಚಿಮ ಬಂಗಾಳದ ನಾದಿಯಾದಲ್ಲಿ ದುರ್ಗಾ ಪೂಜೆಗೆ ಪ್ರಭಾವಳಿಯನ್ನು ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಕಲಾವಿದರು ತೊಡಗಿದ್ದರು

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹560	100 ಕ್ಕೆ	₹565
12 ಕ್ಕೆ	₹75		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹209-655
ದ್ವಿತಳಿ (ಬಿ.ವಿ)	₹400-850

ಮಣಿಪುರ: ಅಧಿಕಾರಿಗಳ ಜತೆ ರಾಜ್ಯಪಾಲ ಸಭೆ

ಇಂಫಾಲ್ (ಪಿಟಿಐ): ಮಣಿಪುರ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರು ಉನ್ನತ ಅಧಿಕಾರಿಗಳು, ಮಾಜಿ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಸೇರಿದಂತೆ ಬಿಜೆಪಿಯ ಹಲವು ಶಾಸಕರ ಜೊತೆ ರಾಜಭವನದಲ್ಲಿ ಭಾನುವಾರ ಸಭೆ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಈ ತಿಂಗಳ ಎರಡನೇ ವಾರದಲ್ಲಿ ಮಣಿಪುರಕ್ಕೆ ಭೇಟಿ ನೀಡುವ ಸಾಧ್ಯತೆಯ ಕಾರಣ ಈ ಸಭೆಯು ಮಹತ್ವ ಪಡೆದಿದೆ.

ಮುಖ್ಯ ಕಾರ್ಯದರ್ಶಿ ಪುನೀತ್ ಕುಮಾರ್ ಗೋಯಲ್, ಭದ್ರತಾ ಸಲಹೆಗಾರ ಕುಲದೀಪ್ ಸಿಂಗ್ ಮತ್ತು ಪೊಲೀಸ್ ಮಹಾನಿರ್ದೇಶಕ ರಾಜೀವ್ ಸಿಂಗ್ ಮತ್ತಿತರರು ಸಭೆಯಲ್ಲಿ ಭಾಗಿಯಾಗಿದ್ದರು ಎಂದು ಅವರು ತಿಳಿಸಿದರು.

ಪ್ರಧಾನಿ ಮೋದಿ ಅವರು ಸೆಪ್ಟೆಂಬರ್ 13ರಂದು ಮಿಜೋರಾಂಗೆ ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಮಣಿಪುರಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ. ಆದರೆ ಈ ಬಗ್ಗೆ ಅಧಿಕೃತವಾಗಿ ಯಾವುದೇ ಮಾಹಿತಿ ನೀಡಿಲ್ಲ.

ಮಣಿಪುರದಲ್ಲಿ 2023ರ ಮೇ ತಿಂಗಳಿನಿಂದ ಜನಾಂಗೀಯ ಸಂಘರ್ಷ ನಡೆಯುತ್ತಿದ್ದು, ಪರಿಣಾಮವಾಗಿ 260 ಕ್ಕೂ ಹೆಚ್ಚು ಮಂದಿ ಹತ್ಯೆಗೀಡಾಗಿದ್ದಾರೆ ಮತ್ತು ಸಾವಿರಾರು ಜನರು ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ.

ಶಾಂತಿ ಸ್ಥಾಪನೆಯತ್ತ ಹೆಜ್ಜೆ: ಆರ್‌ಎಸ್‌ಎಸ್

ಜೋಧಪುರ (ಪಿಟಿಐ): ಮಣಿಪುರವು ಶಾಂತಿ ಸ್ಥಾಪನೆಯತ್ತ ಹೆಜ್ಜೆ ಇಟ್ಟಿರುವುದು ಒಳ್ಳೆಯ ಸಂಗತಿ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಭಾನುವಾರ ಅಭಿಪ್ರಾಯಪಟ್ಟಿದೆ.

ಇಲ್ಲಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಆರ್‌ಎಸ್‌ಎಸ್ ರಾಷ್ಟ್ರೀಯ ಪ್ರಚಾರ ಉಸ್ತುವಾರಿ ಸುನಿಲ್ ಅಂಬೇಕರ್ ಅವರು, ‘ಈಶಾನ್ಯ ಭಾರತದಲ್ಲಿ ಪ್ರತ್ಯೇಕತಾವಾದಿ ಹೋರಾಟ, ಹಿಂಸಾಚಾರ ತಗ್ಗುತ್ತಿರುವುದನ್ನು ಗಮನಿಸಿದ್ದೇವೆ. ಈಗ ಅಲ್ಲಿ ಶಾಂತಿ ನೆಲಸುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಮಾಡಿದ ಪ್ರಯತ್ನದ ಫಲವಾಗಿ ಈ ಫಲಿತಾಂಶ ಕಾಣುತ್ತಿದ್ದೇವೆ’ ಎಂದರು.

ಇತ್ತೀಚೆಗೆ ಮಣಿಪುರದಲ್ಲಿ ಹಿಂಸಾಚಾರ ನಡೆಯುತ್ತಿತ್ತು. ಈ ಬೆಳವಣಿಗೆ ಮೇಲೆ ಆರ್‌ಎಸ್‌ಎಸ್ ನಿಗಾ ಇಟ್ಟಿತ್ತು ಮತ್ತು ಕುಕಿ–ಮೈತೇಯಿ ಸಮುದಾಯಗಳನ್ನು ಒಟ್ಟಿಗೆ ತರಲು ಸತತವಾಗಿ ಪ್ರಯತ್ನಿಸಿತ್ತು. ಸದ್ಯ ಸಮುದಾಯಗಳು ಶಾಂತಿ ಸ್ಥಾಪನೆಯತ್ತ ಹೆಜ್ಜೆ ಇಟ್ಟಿವೆ. ಅದರಲ್ಲೂ ಕೇಂದ್ರ ಗೃಹ ಇಲಾಖೆಯು ಕುಕಿ ಸಮುದಾಯದೊಂದಿಗೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ನಂತರದಲ್ಲಿ ಈ ಬೆಳವಣಿಗೆ ಕಾಣುತ್ತಿದ್ದೇವೆ. ಸದ್ಯ ಮೈತೇಯಿಗಳಿಗೆ ರಾಷ್ಟ್ರೀಯ ಹೆದ್ದಾರಿಯನ್ನು ಮುಕ್ತಗೊಳಿಸಲಾಗಿದೆ’ ಎಂದರು.

₹1 ಕೋಟಿ ಒಗ್ಗೂಡಿಸಲು ದಾರಿ ಯಾವುದು?

ಬಂಡವಾಳ ಮಾರುಕಟ್ಟೆ





ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಪ್ರತಿ ತಿಂಗಳು ₹10 ಸಾವಿರ ಹೂಡಿಕೆ ಮಾಡಿ ₹1 ಕೋಟಿ ಒಗ್ಗೂಡಿಸಲು ಸಾಧ್ಯವೇ? ಈ ಪ್ರಶ್ನೆ ಪ್ರತಿ ಹೂಡಿಕೆದಾರರನ್ನೂ ಒಂದಲ್ಲ ಒಂದು ಹಂತದಲ್ಲಿ ಕಾಡಿರುತ್ತದೆ. ಹೂಡಿಕೆ ಮಾಡಿ ದೊಡ್ಡ ಮೊತ್ತ ಒಗ್ಗೂಡಿಸಲು ಮ್ಯೂಚುವಲ್ ಫಂಡ್ ಎಸ್‌ಐಪಿ, ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಮತ್ತು ಚಿನ್ನದ ಮೇಲಿನ ಹೂಡಿಕೆಗಳನ್ನು ಸಾಮಾನ್ಯವಾಗಿ ಪರಿಗಣಿಸಲಾಗುತ್ತದೆ. ಒಂದೊಂದು ಹೂಡಿಕೆಯೂ ಒಂದೊಂದು ಬಗೆಯ ರಿಸ್ಕ್‌ನಿಂದ ಕೂಡಿರುತ್ತದೆ. ವಿವಿಧ ಹೂಡಿಕೆಗಳಲ್ಲಿರುವ ಅನುಕೂಲ–ಅನನುಕೂಲಗಳೇನು?

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು: ಮ್ಯೂಚುವಲ್ ಫಂಡ್ ಎಸ್‌ಐಪಿ ಅಂದರೆ ಪ್ರತಿ ತಿಂಗಳು ನಿರ್ದಿಷ್ಟ ಮೊತ್ತವನ್ನು ತೊಡಗಿಸುವ ವ್ಯವಸ್ಥಿತ ಯೋಜನೆ. ಇದರ ಮೂಲಕ ದೀರ್ಘಾವಧಿಯಲ್ಲಿ ಉತ್ತಮ ಲಾಭ ಗಳಿಸಲು ಸಾಧ್ಯ. ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಅನಿಶ್ಚಿತತೆಯಿಂದ ಕೂಡಿರುತ್ತವೆ. ಆದರೆ ದೀರ್ಘಾವಧಿಯಲ್ಲಿ ವಾರ್ಷಿಕ ಶೇ 12ರಿಂದ ಶೇ 14ರವರೆಗೆ ಗಳಿಕೆ ನಿರೀಕ್ಷಿಸಬಹುದು.

ಮ್ಯೂಚುವಲ್ ಫಂಡ್‌ಗಳಲ್ಲಿ ಪ್ರತಿ ತಿಂಗಳು ₹10 ಸಾವಿರ ಹೂಡಿಕೆ ಮಾಡಿ ವಾರ್ಷಿಕ ನಿಮಗೆ ಶೇ 12ರಷ್ಟು ಗಳಿಕೆ ಸಿಕ್ಕರೆ ₹1 ಕೋಟಿ ಒಗ್ಗೂಡಿಸಲು 20ರಿಂದ 21 ವರ್ಷ ಬೇಕಾಗುತ್ತವೆ. ಒಂದೊಮ್ಮೆ ಹೂಡಿಕೆ ಮೇಲೆ ವಾರ್ಷಿಕ ಶೇ 14ರಷ್ಟು ಲಾಭ ಸಿಕ್ಕರೆ 18ರಿಂದ 19 ವರ್ಷಗಳಲ್ಲಿ ₹1 ಕೋಟಿ ನಿಮ್ಮದಾಗುತ್ತದೆ.

ಗಳಿಕೆ ಖಾತರಿ: ಮ್ಯೂಚುವಲ್ ಫಂಡ್ ಹೂಡಿಕೆಗಳಲ್ಲಿ ನಿಶ್ಚಿತ ಗಳಿಕೆಯ ಖಾತರಿ ಇಲ್ಲ. ಗಳಿಕೆಯು ಮಾರುಕಟ್ಟೆಯ ಸ್ಥಿತಿಯನ್ನು ಅವಲಂಬಿಸಿರುತ್ತದೆ.

ರಿಸ್ಕ್ ಪ್ರಮಾಣ: ಮ್ಯೂಚುವಲ್ ಫಂಡ್‌ಗಳಲ್ಲಿ ಅಲ್ಪಾವಧಿಯಲ್ಲಿ ರಿಸ್ಕ್ ಹೆಚ್ಚಿರುತ್ತದೆ. ಆದರೆ, ದೀರ್ಘಾವಧಿಯಲ್ಲಿ ರಿಸ್ಕ್ ಕಡಿಮೆಯಾಗುತ್ತೆ.

ತೆರಿಗೆ ಲೆಕ್ಕಾಚಾರ: ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿ ಒಂದು ವರ್ಷದ ಒಳಗೆ ನಗದೀಕರಣ ಮಾಡಿಕೊಂಡರೆ ಶೇ 20ರಷ್ಟು ಅಲ್ಪಾವಧಿ ಬಂಡವಾಳ ತೆರಿಗೆ (ಎಸ್‌ಟಿಸಿಜಿ) ಅನ್ವಯಿಸುತ್ತದೆ. ಹೂಡಿಕೆ ಮಾಡಿದ ಒಂದು ವರ್ಷದ ಬಳಿಕ ಅದನ್ನು ಹಿಂಪಡೆದು ₹1.25 ಲಕ್ಷಕ್ಕಿಂತ ಹೆಚ್ಚಿನ ಗಳಿಕೆ ಇದ್ದರೆ ಶೇ 12.5ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ.

ಚಿನ್ನದ ಇಟಿಎಫ್: ಷೇರು ಮಾರುಕಟ್ಟೆಯಲ್ಲಿ ಹೇಗೆ ಷೇರುಗಳನ್ನು ಖರೀದಿಸಿ ಮತ್ತೆ ಮಾರಾಟ ಮಾಡಬಹುದೋ ಅದೇ ರೀತಿ ಚಿನ್ನದ ಇಟಿಎಫ್‌ಗಳನ್ನು (ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್) ಷೇರು ಮಾರುಕಟ್ಟೆಯಲ್ಲಿ ಟ್ರೇಡ್ ಮಾಡಬಹುದು. ಷೇರು ಮಾರುಕಟ್ಟೆಯಲ್ಲಿ ನೋಂದಣಿ ಆಗಿರುವ ಇಟಿಎಫ್‌ಗಳ ಮೂಲಕ ನೀವು ಚಿನ್ನದ ಮೇಲೆ ಹಣ ತೊಡಗಿಸಬಹುದು. ಬಂಗಾರದ ಬೆಲೆ ಹೆಚ್ಚಾದಂತೆ ಚಿನ್ನದ ಇಟಿಎಫ್ ಮೌಲ್ಯ ಹೆಚ್ಚಾಗುತ್ತದೆ ಮತ್ತು ಅದರ ಬೆಲೆ ಇಳಿಕೆಯಾದಂತೆ ಇಟಿಎಫ್ ಮೌಲ್ಯವೂ ಕುಸಿಯುತ್ತದೆ. ನಿಮಗೆ ಬೇಕಾದಾಗ ಖರೀದಿ, ಮಾರಾಟ ಸಾಧ್ಯವಿರುವುದರಿಂದ ಈ ಇಟಿಎಫ್‌ಗಳಲ್ಲಿ ನಗದೀಕರಣ ಸುಲಭ.

ಚಿನ್ನದ ಇಟಿಎಫ್‌ಗಳು ಹೂಡಿಕೆದಾರರ ಮೊತ್ತಕ್ಕೆ ಪ್ರತಿಯಾಗಿ ಘನರೂಪದ ಚಿನ್ನ ಖರೀದಿಸುತ್ತವೆ. ಸದ್ಯ ಚಿನ್ನದ ಬೆಲೆ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿದೆ. ಇದೇ ರೀತಿ ಚಿನ್ನದ ಬೆಲೆ ಏರಿಕೆಯಾಗುತ್ತಾ ಸಾಗಿದರೆ ಚಿನ್ನದ ಇಟಿಎಫ್‌ಗಳಲ್ಲಿ ಹೂಡಿಕೆ ಮಾಡಿ ಎಲ್ಲಕ್ಕಿಂತಲೂ ವೇಗವಾಗಿ ₹1 ಕೋಟಿ ಗಳಿಸಲು ಸಾಧ್ಯವಾಗಬಹುದು. 2025ರ ದತ್ತಾಂಶದ ಪ್ರಕಾರ ಉತ್ತಮ ಗಳಿಕೆ ತಂದುಕೊಟ್ಟಿರುವ 10 ಅಗ್ರ ಇಟಿಎಫ್‌ಗಳ ಒಂದು ದಶಕದ ಗಳಿಕೆ ನೋಡಿದಾಗ ಅವು ಶೇ 13.46ರವರೆಗೆ ವಾರ್ಷಿಕ ಲಾಭ ಕೊಟ್ಟಿರುವುದು ಕಂಡುಬರುತ್ತದೆ. ಈ ಲೆಕ್ಕಾಚಾರದಲ್ಲಿ ಪ್ರತಿ ತಿಂಗಳು ₹10 ಸಾವಿರ ಚಿನ್ನದ ಇಟಿಎಫ್‌ಗೆ ಹೂಡಿಕೆ ಮಾಡಿದರೆ 14 ವರ್ಷಗಳಲ್ಲಿ ₹1 ಕೋಟಿ ಒಗ್ಗೂಡಿಸಲು ಸಾಧ್ಯ. ಆದರೆ ಚಿನ್ನದ ಬೆಲೆ ಸದಾ ಏರಿಕೆ ಕಾಣುವುದಿಲ್ಲ, ಕೆಲ ವರ್ಷಗಳ ಕಾಲ ಚಿನ್ನದ ಬೆಲೆ ನಿಂತಲ್ಲೇ ನಿಂತಿರುತ್ತದೆ ಎನ್ನುವ ಅಂಶವನ್ನು ಇಲ್ಲಿ ಗಮನಿಸಬೇಕು.

ಗಳಿಕೆ: ಹಲವು ದಶಕಗಳ ದತ್ತಾಂಶ ನೋಡಿದಾಗ ಚಿನ್ನದ ಮೇಲಿನ ಹೂಡಿಕೆ ಷೇರು ಮಾರುಕಟ್ಟೆ ಹೂಡಿಕೆಗಿಂತ ಹೆಚ್ಚು ಗಳಿಕೆಯನ್ನು ತಂದುಕೊಟ್ಟಿದೆ. ಆದರೆ ಚಿನ್ನದ ಬೆಲೆ ಒಂದಷ್ಟು ಕಾಲ ಏರಿಕೆ ಹಾದಿಯಲ್ಲಿ ಸಾಗಿದರೆ ಒಂದಷ್ಟು ಕಾಲ ಸ್ಥಿರವಾಗಿ ನಿಂತುಬಿಡುತ್ತದೆ.

ರಿಸ್ಕ್: ಚಿನ್ನದ ಮೇಲಿನ ಹೂಡಿಕೆಯಲ್ಲಿ ರಿಸ್ಕ್ ಕಡಿಮೆ. ಮಾರುಕಟ್ಟೆ ಕುಸಿತದ ಸಂದರ್ಭದಲ್ಲಿ ಚಿನ್ನದ ಮೇಲೆ ಹೆಚ್ಚು ಹೂಡಿಕೆಯಾಗುವ ಕಾರಣ ಚಿನ್ನಕ್ಕೆ ಸದಾ ಬೇಡಿಕೆ ಇರುತ್ತದೆ. ಜಾಗತಿಕ ಮಟ್ಟದಲ್ಲಿ ಬೆಲೆ ಬದಲಾವಣೆಗಳಾದರೆ ಅದರ ಪರಿಣಾಮ ಚಿನ್ನದ ಮೇಲಿರುತ್ತದೆ.

ತೆರಿಗೆ: ಗೋಲ್ಡ್ ಇಟಿಎಫ್‌ಗಳಲ್ಲಿ ಹೂಡಿಕೆ ಮಾಡಿ 12 ತಿಂಗಳಿಗಿಂತ ಹೆಚ್ಚು ಸಮಯವಾಗಿದ್ದರೆ ಗಳಿಕೆ ಮೇಲೆ ಶೇ 12.5ರಷ್ಟು ಎಲ್‌ಟಿಸಿಜಿ ತೆರಿಗೆ ಅನ್ವಯಿಸುತ್ತದೆ. ಇಟಿಎಫ್‌ಗಳಲ್ಲಿ ಹೂಡಿಕೆ ಮಾಡಿ 12 ತಿಂಗಳ ಒಳಗೇ ಮಾರಾಟ ಮಾಡಿದರೆ ಹೂಡಿಕೆದಾರನ ತೆರಿಗೆ ಹಂತಕ್ಕೆ ಅನುಗುಣವಾಗಿ ತೆರಿಗೆ ಪಾವತಿಸಬೇಕಾಗುತ್ತದೆ. ಅಂದರೆ ಪಿಪಿಎಫ್‌ನಲ್ಲಿರುವ ತೆರಿಗೆ ರಹಿತ ಲಾಭ ಇಲ್ಲಿ ಸಿಗದು.

ಕಿವಿಮಾತು: ದೀರ್ಘಾವಧಿಗೆ ಹೂಡಿಕೆ ಮಾಡುವಾಗ ಯಾವುದೇ ಒಂದು ಹೂಡಿಕೆಯನ್ನು ನೆಚ್ಚಿಕೊಂಡು ಮುಂದುವರಿಯಬಾರದು. ಹೂಡಿಕೆಯಲ್ಲಿ ಸದಾ ವೈವಿಧ್ಯ ಕಾಯ್ದುಕೊಳ್ಳಬೇಕು. ಎಸ್‌ಐಪಿ ಮೂಲಕ ಶೇ 60ರಷ್ಟು, ಪಿಪಿಎಫ್‌ನಲ್ಲಿ ಶೇ 20ರಷ್ಟು ಮತ್ತು ಚಿನ್ನದ ಮೇಲೆ ಶೇ 20ರಷ್ಟು ಹೂಡಿಕೆ ಹಂಚಿಕೆಯನ್ನು ಪರಿಗಣಿಸಬಹುದು. ಈ ಹೂಡಿಕೆ ನಿರ್ಧಾರ ಮಾಡುವ ಮುನ್ನ ಅಧ್ಯಯನ ಮಾಡಿ. ನಿಮಗೆ ತಿಳಿಯುವುದಿಲ್ಲ ಎಂದಾದರೆ ಸೆಬಿ ನೋಂದಾಯಿತ ಪರಿಣತರ ಸಲಹೆ ಪಡೆಯಿರಿ.

ಸಾರ್ವಜನಿಕ ಭವಿಷ್ಯ ನಿಧಿ

ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಕೇಂದ್ರ ಸರ್ಕಾರದ ಸಣ್ಣ ಉಳಿತಾಯ ಯೋಜನೆ. ನಿಶ್ಚಿತ ಆದಾಯ ಗಳಿಸಬೇಕು, ಯಾವುದೇ ರಿಸ್ಕ್ ಇರಬಾರದು ಎನ್ನುವವರಿಗೆ ಇದು ಹೇಳಿ ಮಾಡಿಸಿದ ಯೋಜನೆ. ಪಿಪಿಎಫ್ ಹೂಡಿಕೆಯನ್ನು ಅಂಚೆ ಕಚೇರಿ ಮತ್ತು ಆಯ್ದ ಬ್ಯಾಂಕ್‌ಗಳ ಮೂಲಕ ಆರಂಭಿಸಬಹುದು. ಪ್ರಸ್ತುತ ಪಿಪಿಎಫ್ ಬಡ್ಡಿ ದರ ಶೇ 7.1ರಷ್ಟಿದೆ. ಪ್ರತಿ ಮೂರು ತಿಂಗಳಿಗೊಮ್ಮೆ ಸರ್ಕಾರ ಬಡ್ಡಿ ದರ ಪರಿಷ್ಕರಿಸುತ್ತದೆ. ಈ ಯೋಜನೆಯಲ್ಲಿ ಪ್ರತಿ ತಿಂಗಳು ₹10 ಸಾವಿರ ಹೂಡಿಕೆ ಮಾಡಿದರೆ ಪ್ರಸ್ತುತ ಬಡ್ಡಿ ದರದ ಲೆಕ್ಕಾಚಾರದಲ್ಲಿ ₹1 ಕೋಟಿ ಒಗ್ಗೂಡಿಸಲು 28 ವರ್ಷಗಳು ಬೇಕಾಗುತ್ತವೆ. ಪಿಪಿಎಫ್‌ನ ಹೂಡಿಕೆ ಅವಧಿ ವಾಸ್ತವದಲ್ಲಿ 15 ವರ್ಷಗಳು. ಆದರೆ 15 ವರ್ಷಗಳ ನಂತರ ಹೂಡಿಕೆಯನ್ನು ಐದೈದು ವರ್ಷಗಳಿಗೆ ವಿಸ್ತರಿಸುತ್ತಾ ಹೂಡಿಕೆ ಮುಂದುವರಿಸಬಹುದು.

ಗಳಿಕೆ ಖಾತರಿ: ಪಿಪಿಎಫ್‌ನಲ್ಲಿ ಖಾತರಿಯ ಗಳಿಕೆ ಸಿಗುತ್ತದೆ. ಆದರೆ ಗಳಿಕೆ ಪ್ರಮಾಣ ಈಕ್ವಿಟಿ ಮ್ಯೂಚುವಲ್ ಫಂಡ್‌ಗೆ ಹೋಲಿಸಿದರೆ ಕಡಿಮೆ.

ರಿಸ್ಕ್: ಪಿಪಿಎಫ್‌ನಲ್ಲಿ ಹೂಡಿಕೆ ರಿಸ್ಕ್ ತೀರಾ ಕಡಿಮೆ. ಹೆಚ್ಚು ರಿಸ್ಕ್ ಇರಬಾರದು ಎನ್ನುವವರಿಗೆ ಇದು ಹೇಳಿ ಮಾಡಿಸಿದ ಯೋಜನೆ. ಹೂಡಿಕೆಗೆ ಕೇಂದ್ರ ಸರ್ಕಾರದ ಗ್ಯಾರಂಟಿ ಇರುವುದು ಸಕಾರಾತ್ಮಕ ಅಂಶ.

ತೆರಿಗೆ: ಪಿಪಿಎಫ್‌ನಲ್ಲಿನ ಹೂಡಿಕೆಗೆ ಹಳೆಯ ತೆರಿಗೆ ಪದ್ಧತಿ ಪ್ರಕಾರ ಸೆಕ್ಷನ್ ಸಿ ಅಡಿಯಲ್ಲಿ ₹1.5 ಲಕ್ಷದವರೆಗೆ ತೆರಿಗೆ ವಿನಾಯಿತಿ ಸಿಗುತ್ತದೆ. ಇದಲ್ಲದೆ ಪಿಪಿಎಫ್‌ನ ಮೇಲಿನ ಬಡ್ಡಿ ಗಳಿಕೆ ಮತ್ತು ಮೆಚ್ಯೂರಿಟಿ ಮೊತ್ತದ ಮೇಲೆ ಯಾವುದೇ ತೆರಿಗೆ ಬರುವುದಿಲ್ಲ.


BE
BE 6